# ಕನ್ನಡ ಕಟ್ಟಿದವರು ಮಾಲೆ

# ಆರ್. ನರಸಿಂಹಾಚಾರ್ಯ

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

ಆರ್. ನರಸಿಂಹಾಚಾರ್ಯ

ಡಾ. ಜಿ. ಆರ್. ತಿಪ್ಪೇಸ್ವಾಮಿ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು-೫೬೦ ೦೦೨

R.NARASIMACHARYA A Monograph on R. Narasimacharya in kannada Written by: Dr. G.R. Thippeswamy Published By B.H Mallikarjun, Administrative Officer, Kannada Pustaka Pradhikara, Kannada Bhavana, J.C.Road Bengaluru -560002.

© ಈ ಆವೃತ್ತಿಯ ಗ್ರಂಥಸ್ವಾಮ್ಯ - ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

First Print : 2012

Pages : Xvi + 80

Copies:1000

Price :50.00

ಮೊದಲ ಮುದ್ರಣ : ೨೦೧೨

ಪುಟಗಳು : Xvi + ೮೦

ಪ್ರತಿಗಳು : ೧೦೦೦

ಬೆಲೆ : ರೂ. ೫೦.೦೦

ಕರಡು ತಿದ್ದಿದವರು : ಲೇಖಕರು

**ಪ್ರಕಾಶಕರು:**

ಬಿ.ಎಚ್.ಮಲ್ಲಿಕಾರ್ಜುನ ಕೆ.ಸಿ.ಎ.ಎಸ್.

ಆಡಳಿತಾಧಿಕಾರಿಗಳು

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ,

ಜೆ.ಸಿ.ರಸ್ತೆ

ಬೆಂಗಳೂರು-೫೬೦ ೦೦೨

**ಮುದ್ರಕರು:**

ಮೆ|| ಪ್ರಿಂಟ್ ಪಾರ್ಕ್

೧೪೯೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ,

ಶ್ರೀರಾಂಪುರಂ ಅಂಚೆ, ಬೆಂಗಳೂರು-೫೬೦ ೦೨೧

ದೂ : ೦೮೦-೨೩೪೨೨೮೩೮

ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

ಸಂಪಾದಕ ಮಂಡಳಿ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಶ್ರೀ ಹೊರೆಯಾಲ ದೊರೆಸ್ವಾಮಿ

ಪ್ರೊ. ಸುಕನ್ಯಾ ಮಾರುತಿ

ಡಾ. ಎಚ್. ಟಿ. ಪೋತೆ

ಶ್ರೀ ಪ್ರಕಾಶ್ ಕಂಬತ್ತಳ್ಳಿ

ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ

ಆಡಳಿತಾಧಿಕಾರಿಗಳು

# ಪ್ರಧಾನ ಸಂಪಾದಕರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ವಿವಿಧ ಸಾಹಿತ್ಯ ಮಾಲೆಗಳಡಿಯಲ್ಲಿ ಮಹತ್ವದ ಪುಸ್ತಕಗಳನ್ನು ಪ್ರಕಟಿಸುತ್ತಾ ಬರುತ್ತಿದೆ. ಪುಸ್ತಕೋದ್ಯಮವನ್ನು ಜನಪರವಾಗಿಸುವುದರ ಜೊತೆಗೆ ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ಪುಸ್ತಕಗಳು ಲಭ್ಯವಾಗಬೇಕೆಂಬ ದೃಷ್ಟಿಯಿಂದ ಈ ಮಾಲೆಗಳನ್ನು ಪ್ರಾಧಿಕಾರವು ಪ್ರಾರಂಭಿಸಿರುತ್ತದೆ.

ಈ ದೃಷ್ಟಿಯಿಂದ ಪ್ರಾಧಿಕಾರವು ಕೈಗೊಂಡಿರುವ ಮಹತ್ವದ ಯೋಜನೆಗಳಲ್ಲಿ "ಕನ್ನಡ ಕಟ್ಟಿದವರು ಮಾಲೆ' ಯೂ ಒಂದು. ಕನ್ನಡನಾಡು, ನುಡಿ, ಕಲೆ, ಸಂಸ್ಕೃತಿಯೇ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿಯೂ ಅಜ್ಞಾತರಾಗಿ ಉಳಿದ ವ್ಯಕ್ತಿಗಳನ್ನು ಒಳಗೊಂಡಂತೆ ಕನ್ನಡನಾಡು, ನುಡಿಯನ್ನು ಕಟ್ಟುವಲ್ಲಿ ನೆರವಾದ ಮಹನೀಯರನ್ನು ಕುರಿತು ಕಿರುಹೊತ್ತಿಗೆಗಳನ್ನು ಈ ಮಾಲೆಯಡಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯನ್ನು ಅತ್ಯಂತ ರಚನಾತ್ಮಕವಾಗಿ ರೂಪಿಸಬೇಕೆಂಬ ದೃಷ್ಟಿಯಿಂದ ಒಂದು ಸಂಪಾದಕ ಮಂಡಳಿಯನ್ನು ಪ್ರಾಧಿಕಾರವು ರಚಿಸಿತು, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ ಮಾರುತಿ, ಡಾ. ಎಚ್. ಟಿ. ಪೋತೆ, ಶ್ರೀಪ್ರಕಾಶ್ ಕಂಬತ್ತಳ್ಳಿ ಇವರನ್ನು ಸದಸ್ಯರನ್ನಾಗಿಯೂ ಪ್ರಾಧಿಕಾರವು ನೇಮಿಸಿತು. ಕನ್ನಡ ನಾಡು ನುಡಿ ಕ್ಷೇತ್ರದಲ್ಲಿ ಅಪಾರ ಪರಿಶ್ರಮವನ್ನು ಹೊಂದಿರುವ ಈ ಮಹನೀಯರು ಈ ಮಾಲಿಕೆಯಡಿ ಬರೆಸಬೇಕಾದ ನೂರಾರು ವ್ಯಕ್ತಿಗಳ ಹಾಗೂ ಅವರನ್ನು ಕುರಿತು ಬರೆಯಬಹುದಾದ ಲೇಖಕರ ಪಟ್ಟಿಯನ್ನು ಪರಿಶ್ರಮವಹಿಸಿ ಸಿದ್ಧಪಡಿಸಿಕೊಟ್ಟು ಉಪಕರಿಸಿರುತ್ತಾರೆ. ಸಂಪಾದಕ ಮಂಡಳಿಯು ಸಮರ್ಥವಾಗಿ ಈ ಮಾಲಿಕೆಯ ಹಸ್ತಪ್ರತಿಗಳನ್ನು ಪರಿಶೀಲಿಸಿಕೊಟ್ಟಿರುತ್ತದೆ. ಸಂಪಾದಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ, ಸಂಪಾದಕ ಸಮಿತಿಯ ಸದಸ್ಯರಿಗೆ ಹಾಗೂ ಎಲ್ಲ ಲೇಖಕರಿಗೆ ನನ್ನ ಕೃತಜ್ಞತೆಗಳು.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರಿಗೆ, ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರಿಗೆ, ಶ್ರೀ ಜೆ. ಎನ್. ಶಾಮರಾವ್ ಅವರಿಗೆ ಹಾಗೂ ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಈ ಮಾಲೆಯ ಎಲ್ಲಾ ಕೃತಿಗಳನ್ನು ಕನ್ನಡ ವಾಚಕರು ತುಂಬುಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

(ಡಾ. ಸಿದ್ಧಲಿಂಗಯ್ಯ)

ಅಧ್ಯಕ್ಷರು

# ಸಂಪಾದಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡ ಕಟ್ಟಿದವರು ಮಾಲೆ'ಯಡಿಯಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಶಿಕ್ಷಣ, ಕಲೆ ಸಂಸ್ಕೃತಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅಪರೂಪದ ವ್ಯಕ್ತಿಗಳ ಜೀವನ, ಸಾಧನೆ, ವ್ಯಕ್ತಿತ್ವ ಮತ್ತು ಹೋರಾಟದ ಕಥನವನ್ನು ಕುರಿತು ನುರಿತ ಲೇಖಕರಿಂದ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸಬೇಕೆಂದು ತೀರ್ಮಾನಿಸಿತು. ಈ ನಿಟ್ಟಿನಲ್ಲಿ ಸಂಪಾದಕ ಸಮಿತಿಯೊಂದನ್ನು ರಚಿಸಿ ನಮ್ಮನ್ನು ಆಹ್ವಾನಿಸಿದಾಗ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಂತೋಷದಿಂದ ನಾವು ಒಪ್ಪಿಕೊಂಡೆವು. ಅನಂತರ ಈ ಸಮಿತಿಯು ಸೇರಿ ಹಲವು ಸಭೆಗಳನ್ನು ನಡೆಸಿ ಈ ಮಾಲೆಯ ಪುಸ್ತಕಗಳ ಸ್ವರೂಪ, ಬರೆಸಬೇಕಾದ ವ್ಯಕ್ತಿಗಳ ಹಾಗೂ ಬರೆಯುವ ಲೇಖಕರ ಪಟ್ಟಿ ಇದನ್ನೆಲ್ಲಾ ಸಿದ್ಧಪಡಿಸಲಾಯಿತು. ಈ ಮಾಲೆಯ ಪುಸ್ತಕಗಳು ಮುಖ್ಯವಾಗಿ ಈ ಕೆಳಕಂಡ ರೀತಿಯಲ್ಲಿ ಮೂರು ಮುಖ್ಯ ವಿಷಯಗಳನ್ನು ಒಳಗೊಂಡಿರಬೇಕೆಂದು ತೀರ್ಮಾನಿಸಿ ಕಾರ್ಯೋನ್ಮುಖರಾದೆವು.

೧. ಆಯಾ ವ್ಯಕ್ತಿಗಳ ಬಾಲ್ಯ, ವಿದ್ಯಾಭ್ಯಾಸ ಕೌಟುಂಬಿಕ ಹಿನ್ನೆಲೆ-ವಿವರಗಳು, ಗಣ್ಯರೊಡನೆ ಒಡನಾಟ, ಪಡೆದ ಪ್ರೇರಣೆ-ಪ್ರಭಾವಗಳು, ಭಾಗವಹಿಸಿದ ಚಳುವಳಿಹೋರಾಟಗಳು, ಸಂಘಟನೆಗಳು, ನಾಡು-ನುಡಿ-ಸಾಹಿತ್ಯ-ಸಂಸ್ಕೃತಿಗೆ ಸಲ್ಲಿಸಿದ ಸೇವೆಗಳು, ಮಾನವೀಯ ಗುಣ-ನಡತೆ ಇತ್ಯಾದಿ ವಿವರಗಳನ್ನು ಅಡಕವಾಗಿ ಈ ಪುಸ್ತಕಗಳಲ್ಲಿ ಅಳವಡಿಸಿ ಬರೆಯಬೇಕು.

೨. ಆಯಾ ವ್ಯಕ್ತಿಗಳ ಜೀವನ ಹಾಗೂ ಸಾಧನೆಗಳನ್ನು ದಾಖಲು ಮಾಡುವಾಗ ಅಧಿಕೃತ ದಾಖಲೆಗಳನ್ನು ಅವಲಂಬಿಸಿ ಬರೆಯಬೇಕು; ಆದಷ್ಟು ಕ್ಷೇತ್ರಕಾರ್ಯ ಮಾಡಿ ಮಾಹಿತಿಗಳನ್ನು ಕಲೆಹಾಕಿ ವಸ್ತುನಿಷ್ಠವಾಗಿ ನಿರೂಪಿಸಬೇಕು.

೩. ಎಲ್ಲಾ ಬಗೆಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ಬರೆಯಬೇಕು.

ಹಲವಾರು ಜನ ಎಲೆಮರೆಯ ಕಾಯಂತೆ, ಕರ್ನಾಟಕದ ಏಳ್ಗೆಗಾಗಿ ದುಡಿದು ಕಣ್ಮರೆಯಾಗಿದ್ದಾರೆ. ಆದರೆ ಅಂತಹವರ ಬಗ್ಗೆ ಸಾಹಿತ್ಯ ಚರಿತ್ರೆಯಲ್ಲಿ ಒಂದು ಸಣ್ಣ ದಾಖಲೆಯೂ ಸಿಗುವುದಿಲ್ಲ. ಈ ನಿಟ್ಟಿನಲ್ಲಿ ಶ್ರಮಿಸಿದ ಅನೇಕ ಜನರ ಹೋರಾಟದ ಕಥೆ ನೇಪಥ್ಯಕ್ಕೆ ಸರಿದು ಹೋಗಿದೆ. ಅಂತಹ ವ್ಯಕ್ತಿಗಳ ಚರಿತ್ರೆಯನ್ನು ಇಂದು ಹುಡುಕಿ ಹೊರತೆಗೆದು ದಾಖಲಿಸಿ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಇಂತಹವರ ಹೋರಾಟದ ಜೀವನವು ಮುಂದಿನ ಪೀಳಿಗೆಗೆ ಆದರ್ಶವೂ ಅನುಕರಣೀಯವೂ ಆಗಬೇಕಾಗಿದೆ. ಈ ಪುಸ್ತಕಗಳಲ್ಲಿ ದೊಡ್ಡಗ್ರಂಥಗಳಲ್ಲಿ ಹೇಳಬಹುದಾದ ವಿವರಗಳೆಲ್ಲವನ್ನೂ ಹೇಳಲಾಗದಿದ್ದರೂ ಸೂಕ್ಷ್ಮವಾಗಿ, ಸಂಕ್ಷಿಪ್ತವಾಗಿ ಮತ್ತು ಪರಿಣಾಮಕಾರಿಯಾಗಿ ಹೇಳಲಾಗಿದೆ. ಈ ಪುಸ್ತಕಗಳನ್ನು ಓದುವಾಗ ಇವರ ವ್ಯಕ್ತಿತ್ವ, ಸಾಧನೆ, ಹೋರಾಟ,

ವಿಚಾರಲಹರಿ, ಆಸಕ್ತಿಗಳು ಇನ್ನಷ್ಟು ಸ್ಫುಟಗೊಳ್ಳುತ್ತಾ ಹೋಗುತ್ತವೆ; ಇವರ ವಿಷಯದಲ್ಲಿ ಪ್ರೀತ್ಯಾದರಗಳು ಇಮ್ಮಡಿಗೊಳ್ಳುವುದರ ಜೊತೆಗೆ ಕನ್ನಡ ಪುನರುಜ್ಜೀವನದ ಸಂದರ್ಭಗಳು ಹಾಗೂ ಸವಾಲುಗಳು ಸ್ಫುಟಗೊಳ್ಳುತ್ತವೆ. ಇವರು ಬರೀ ಕನ್ನಡ ನಾಡು, ನುಡಿ, ಸಾಹಿತ್ಯ ಕಟ್ಟಿದವರು ಮಾತ್ರವಲ್ಲ; ಇವರು ಕನ್ನಡ ಸಂಸ್ಕೃತಿಯ ನಿರ್ಮಾಪಕರೂ ಹೌದು. ಕನ್ನಡ ಸಂಸ್ಕೃತಿಯ ಬಗೆಗೆ ಮತ್ತು ಕನ್ನಡಿಗರ ಬದುಕಿನ ಬಗೆಗೆ ಕೆಲಸ ಮಾಡುವ ಯಾರಿಗಾದರೂ ಈ ವ್ಯಕ್ತಿಗಳು ಪ್ರೇರಕಶಕ್ತಿಗಳಾಗಿದ್ದಾರೆ.

ಮೊದಲಿಗೆ ಇಂತಹ ನೂರು ಜನ ಮಹನೀಯರ ಬಗ್ಗೆ ಕಿರುಹೊತ್ತಿಗೆಗಳನ್ನು ಬರೆಸಬೇಕೆಂದು ಸಮಿತಿಯ ಪಟ್ಟಿ ಮಾಡಿ ಬರೆದುಕೊಡುವಂತೆ ನೂರು ಜನ ನುರಿತ ಲೇಖಕರನ್ನು ಗುರುತಿಸಿ ಅವರಿಗೆ ಪತ್ರ ಬರೆಯಲಾಯಿತು. ಆದರೆ ಬರೆಯುವವರು ಸಿಗುವುದು ಬಹಳ ಕಷ್ಟ ಎಂಬ ಸಂಗತಿ ನಂತರ ನಮಗೆ ಮನವರಿಕೆಯಾಯಿತು. ಕೊನೆಗೆ ಈ ಮಾಲೆಗೆ ಇನ್ನೂ ಕೆಲವರು ಬರೆಯುತ್ತಿರುವುದಾಗಿ ತಿಳಿಸಿದ್ದರೂ, ಬರೆದು ಬಂದಂತಹ ಹಸ್ತಪ್ರತಿಗಳು ೩೫ ಮಾತ್ರ ಅವುಗಳನ್ನೆಲ್ಲಾ ಸಂಪಾದಕ ಮಂಡಲಿಯ ಸದಸ್ಯರೆಲ್ಲಾ ಓದಿ, ಪರಿಶೀಲಿಸಿ, ತಿದ್ದುಪಡಿಗಳಿದ್ದರೆ ಲೇಖಕರಿಗೆ ಅವುಗಳನ್ನು ಸೂಚಿಸಿ ನಂತರ ಹಸ್ತಪ್ರತಿಗಳನ್ನು ಮುದ್ರಣಕ್ಕೆ ಅಂತಿಮಗೊಳಿಸಲಾಯಿತು.

ಈ ಯೋಜನೆಯ ಪ್ರತಿಯೊಂದು ಹಂತದಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರು ತಮ್ಮ ಸಲಹೆ, ಸಹಕಾರವನ್ನು ನೀಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ. ಹೆಚ್. ಮಲ್ಲಿಕಾರ್ಜುನ ಅವರು, ಹಿಂದಿನ ಶ್ರೀ ಅಶೋಕ ಎನ್. ಚಲವಾದಿ ಅವರು, ಅಧ್ಯಕ್ಷರ ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ ಮುಕುಂದನ್ ಅವರು ಹಾಗೂ ಅವರ ಸಿಬ್ಬಂದಿ ಇಂತಹ ಜವಾಬ್ದಾರಿಯನ್ನು ವಹಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಗೌರವಾನ್ವಿತ ಸದಸ್ಯರು-ಇವರೆಲ್ಲರ ಸಲಹೆ, ಸಹಕಾರ ನಮಗೆ ದೊರೆತಿರುತ್ತದೆ. ಇದರ ಸಂಪಾದಕ ಸಮಿತಿ ಸದಸ್ಯರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಶ್ರೀಮತಿ ಸುಕನ್ಯಾ ಮಾರುತಿ, ಡಾ. ಹೆಚ್.ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಹಳ್ಳಿ-ಇವರೆಲ್ಲರ ಸಲಹೆ, ಸಹಕಾರ ಹಾಗೂ ಸಾಮೂಹಿಕ ಪ್ರಯತ್ನದ ಫಲವಾಗಿ ಈ ಕೃತಿಗಳು ಸಕಾಲದಲ್ಲಿ ಪ್ರಕಟವಾಗಲು ಕಾರಣವಾಗಿದೆ. ಹೀಗೆ ಇಂತಹ ಒಂದು ಅಪರೂಪದ ಯೋಜನೆಯೊಂದನ್ನು ಅನುಷ್ಠಾನಗೊಳಿಸಲು ನೆರವಾದ ಎಲ್ಲರಿಗು ಸಂಪಾದಕ ಸಮಿತಿಯ ಪರವಾಗಿ ಕೃತಜ್ಞತೆಗಳು.

ಡಾ. ಕರೀಗೌಡ ಬೀಚನಹಳ್ಳಿ

ಸಂಪಾದಕ

# ಪರಿವಿಡಿ

೧. ಜನನ - ಬಾಲ್ಯ

೨. ಅಧ್ಯಾಪಕರಾಗಿ

೩.ಸಾಹಿತ್ಯ ಸೇವೆ

೪. ಪುರಾತತ್ವ ಇಲಾಖೆಯಲ್ಲಿ

೫. ಗಣ್ಯರ ಪ್ರಶಂಸೆ

೬. ರಾ.ನ, ಕುರಿತಂತೆ

೭. ಕೃತಿಗಳು - ಲೇಖನಗಳು

೮. ಜೀವನದ ಪ್ರಮುಖ ಘಟನೆಗಳು

೯. ಆಕರಗಳು

# ಆರ್. ನರಸಿಂಹಾಚಾರ್ಯ

೧೮ನೆಯ ಶತಮಾನದ ಹೊತ್ತಿಗಾಗಲೇ ಕನ್ನಡ ನಾಡಿನಲ್ಲಿ ಹೊಸ ಹೊಸ ಜ್ಞಾನಶಿಸ್ತುಗಳು ಗೋಚರವಾಗಿದ್ದವು. ಅವುಗಳಲ್ಲಿ ಕನ್ನಡ ಸಂಶೋಧನೆಯು ಒಂದಾಗಿತ್ತು. ಇದು ಪ್ರಾರಂಭಗೊಂಡದ್ದು ಪಾಶ್ಚಾತ್ಯ ವಿದ್ವಾಂಸರಿಂದಲೇ, ಕನ್ನಡ ಸಂಶೋಧನೆ ಎಂಬುದು ೧೯ನೆಯ ಶತಮಾನದ ಕೊನೆಯಲ್ಲಿ ನಮ್ಮ ನಾಡನ್ನು ಪ್ರವೇಶಿಸಿದ ಒಂದು ಶೈಕ್ಷಣಿಕ ಶಿಸ್ತು. ಅಲ್ಲಿಂದ ಇಲ್ಲಿಯ ತನಕ ಅದು ಹಲವಾರು ಮಹತ್ವದ ನೆಲೆಗಳನ್ನು ಪಡೆಯಿತು.

ವಿದೇಶೀಯರಿಂದ ಆರಂಭಗೊಂಡು ದೇಶೀಯ ವಿದ್ವಾಂಸರು ಅದನ್ನು ಮುಂದುವರಿಸುತ್ತಲೇ ಇದ್ದಾರೆ. ಕನ್ನಡ ಸಾಹಿತ್ಯ, ವ್ಯಾಕರಣ, ಸಂಸ್ಕೃತಿಯನ್ನು ಕುರಿತಂತೆ ವಿಶೇಷವಾಗಿ ತೊಡಗಿಸಿಕೊಂಡ ಪಾಶ್ಚಾತ್ಯ ವಿದ್ವಾಂಸರೆಂದರೆ ಬಿ.ಎಲ್.ರೈಸ್ ಮತ್ತು ಆರ್.ಎಫ್.ಕಿಟೆಲ್. ಪ್ರಾಚೀನ ಸಾಹಿತ್ಯಕ್ಕೆ ಸಂಬಂಧಿಸಿದ ಹಲವು ಬಗೆಯ ಆಕರಗಳ ಶೋಧಕ್ಕೆ ಇವರು ಕಾರಣರಾದರೆಂದರೆ ತಪ್ಪಾಗಲಾರದು. ಜೆ.ಎಫ್. ಫ್ಲೀಟ್ ಹೈದರಾಬಾದ್ ಕರ್ನಾಟಕ ಹಾಗೂ ಮಹಾರಾಷ್ಟ್ರ ಪ್ರದೇಶದ ಶಾಸನಗಳ ಸಂಗ್ರಹ ಕಾರ್ಯದಲ್ಲಿ ಹೆಸರು ಮಾಡಿದರು. ಇವರ ಸಂಶೋಧನಾ ಬರೆಹಗಳೆಲ್ಲ ಬಹುತೇಕ ಆಂಗ್ಲ ಭಾಷೆಯಲ್ಲಿಯೇ ಬೆಳಕು ಕಂಡವು. ಆರಂಭದ ದಿನಗಳಲ್ಲಿ ಸಂಶೋಧನೆಯಲ್ಲಿ ನಿರತರಾಗಿದ್ದ ವಿದೇಶಿ ವಿದ್ವಾಂಸರಿಗೆ ಸಹಾಯಕರಾಗಿದ್ದವರಲ್ಲಿ ಆರ್.ನರಸಿಂಹಾಚಾರ್ಯ, ಕವೆಲ್ಲಿ ವೆಂಕಟಬೋರಯ್ಯ, ಕೆ.ಬಿ.ಪಾಠಕ್ ಮುಂತಾದವರು ಪ್ರಮುಖರು. ೨೦ನೆಯ ಶತಮಾನದ ಆರಂಭದಲ್ಲಿ ಕನ್ನಡ ಸಂಶೋಧನೆ ಮಹತ್ವದ ತಿರುವುಗಳನ್ನು ಪಡೆಯಿತು. ಅದುವರೆಗೆ ವಿದೇಶಿ ವಿದ್ವಾಂಸರು ಆಕ್ರಮಿಸಿಕೊಂಡಿದ್ದ ಆ ಜಾಗಗಳಲ್ಲಿ ದೇಶೀ ವಿದ್ವಾಂಸರು ಪ್ರಧಾನವಾಗಿ ನೆಲೆಕಂಡುಕೊಂಡರು.

"೧೯೮೨ರ ಹೊತ್ತಿಗೆ ಕಿಟೆಲ್ಲರು ಜರ್ಮನಿಗೆ ಹಿಂತಿರುಗಿದರು. ೧೯೦೬ರಲ್ಲಿ ರೈಸರು ನಿವೃತ್ತರಾಗಿ ಇಂಗ್ಲೆಂಡಿಗೆ ವಾಪಸ್ಸು ಹೋದರು. ಆರ್. ನರಸಿಂಹಾಚಾರ್ಯರು ೧೯೦೬ರಲ್ಲಿ ಪುರಾತತ್ವ ಇಲಾಖೆಯ ನಿರ್ದೇಶಕರಾದರು. ರೈಸರೊಂದಿಗೆ ಕೆಲಸಮಾಡಿದ್ದ ಅವರಿಗೆ ವಿಶೇಷವಾಗಿ ನೆರವಾಗಿದ್ದ ಆಚಾರ್ಯರು ಪ್ರಾಚೀನ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸ್ವತಂತ್ರವಾಗಿ ಕೆಲಸಮಾಡತೊಡಗಿದರು. ಇವರೊಂದಿಗೆ ಎಸ್.ಜಿ. ನರಸಿಂಹಾಚಾರ್ಯರು, ಎಂ.ಎ.ರಾಮಾನುಜೈಂಗಾರ್, ಪಿ.ಆರ್.ಕರಿಬಸವಶಾಸ್ತ್ರಿ -ಮೊದಲಾದ ದಕ್ಷಿಣ ಕರ್ನಾಟಕದ ಗ್ರಂಥಪರಿಶೋಧಕರು. ಉತ್ತಂಗಿಚನ್ನಪ್ಪ, ಫ.ಗು.ಹಳಕಟ್ಟಿ-ಮುಂತಾದ ಉತ್ತರ ಕರ್ನಾಟಕದ ಕೃತಿಪರಿಷ್ಕರಣಕಾರರು ಸೇರಿಕೊಂಡರು. ಕನ್ನಡಸಂಶೋಧನ ರಂಗ ದೇಶೀಯ ವಿದ್ವಾಂಸರ ಚಿಂತನೆ ಚಟುವಟಿಕೆಗಳಿಂದ ತುಂಬಿಕೊಂಡಿತು. ಈ ಎಲ್ಲರೂ ಪ್ರಧಾನವಾಗಿ ತಮ್ಮ ದೃಷ್ಟಿಯನ್ನು ಕೇಂದ್ರೀಕರಿಸಿದ್ದು ಪ್ರಾಚೀನ ಕನ್ನಡ ಕೃತಿಗಳ ಪ್ರಕಟಣೆಯೆಡೆಗೆ, ತಾಳೆಯೋಲೆಗಳಲ್ಲಿ ನಿಕ್ಷಿಪ್ತವಾಗಿದ್ದ ಕನ್ನಡ ಸಾಹಿತ್ಯ ಕೃತಿಭಂಡಾರವನ್ನು ಕನ್ನಡಿಗರಿಗೆ ಶ್ರಮ-ಛಲಗಳಿಂದ ಅವರು ತೆರೆದು ತೋರಿಸಿದರು. ಜೈನ ಮತ್ತು ಬ್ರಾಹ್ಮಣ ಕಾವ್ಯಗಳನ್ನು

ಆರ್. ನರಸಿಂಹಾಚಾರ್ಯ ಮತ್ತು ರಾಮಾನುಜೈಂಗಾರ್ ಪ್ರಕಾಶಿಸ ತೊಡಗಿದರು" (ಡಾ. ಎನ್. ಎಸ್. ತಾರಾನಾಥ (ಸಂ) : ಶತಮಾನದ ಸಂಶೋಧನೆ, ಪುಟ xxiv).

ಈ ಅವಧಿಯ ಸಂಶೋಧನಾ ಚಟುವಟಿಕೆಗಳಿಗೆ ರೈಸ್, ಕಿಟೆಲ್ ಮಾದರಿಯಾದರು. ಒಟ್ಟಾರೆ ವಿದೇಶಿ ವಿದ್ವಾಂಸರಿಗೆ ನೆರವಾದವರೆಲ್ಲ ನಂತರದ ಅವಧಿಯ ಸಂಶೋಧನಾ ಚಟುವಟಿಕೆಗಳಲ್ಲಿ ಪ್ರಸಿದ್ಧಿ ಹೊಂದಿದರು, ಖ್ಯಾತ ವಿದ್ವಾಂಸರೆನಿಸಿದರು. ಅಂತಹ ಗಣ್ಯರಲ್ಲಿ ಆರ್. ನರಸಿಂಹಾಚಾರ್ಯ ಒಬ್ಬರು. ಇವರು ಕಾವ್ಯ, ಕಥೆ, ಅನುವಾದ, ಇತಿಹಾಸ, ಸಾಹಿತ್ಯ ಚರಿತ್ರೆಸಂಕಲನ, ಗ್ರಂಥಸಂಪಾದನೆ, ಶಾಸನ ಸಂಪಾದನೆ, ಕಲಾವಿಮರ್ಶೆ, ವಿಜ್ಞಾನ, ಭಾಷಾಶಾಸ್ತ್ರ, ಅಲಂಕಾರಶಾಸ್ತ್ರ - ಹೀಗೆ ಸಾಕಷ್ಟು ಕ್ಷೇತ್ರಗಳಲ್ಲಿ ಗಣನೀಯ ಕೆಲಸವನ್ನು ಮಾಡಿ ಯಶಸ್ವಿಯಾದವರು. ಇಂತಹ ಹಲವು ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುವುದು ಅಷ್ಟು ಸುಲಭದ ಮಾತಲ್ಲ. ಅದಕ್ಕೆ ಸಹನೆಬೇಕು. ಆದ್ದರಿಂದಲೇ ಅವರು ಕೊನೆಯ ತನಕವೂ ತಾಳ್ಮೆಯಿಂದಲೇ ಸಂಶೋಧನೆಯನ್ನ ಕೈಗೊಂಡರು. ಅದಕ್ಕೆ ತಕ್ಕ ಪರಿಸರವನ್ನು ನಿರ್ಮಿಸಿಕೊಂಡರು. ಹಾಗಾಗಿ ಆಗಿನ ಕಾಲದ ವಿದ್ವತ್ ಸಮೂಹವೂ ಆರ್. ನರಸಿಂಹಾಚಾರ್ಯರ ವ್ಯಕ್ತಿತ್ವನ್ನು ಎತ್ತಿಹಿಡಿಯಿತು.

# ೧. ಜನನ, ಬಾಲ್ಯ

ನರಸಿಂಹಾಚಾರ್ಯರ ಪೂರ್ವಿಕರು ಬೆಂಗಳೂರು ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನ ಮಾರ್ಚನಹಳ್ಳಿ ಅಥವಾ ರಾಮಾನುಜಪುರಂನಲ್ಲಿ ನೆಲಸಿದ್ದರು. ಆದ್ದರಿಂದಲೇ ಏನೊ ಅವರ ಹೆಸರಿನ ಹಿಂದೆ 'ಆರ್' ಎಂಬ (ರಾಮಾನುಜಪುರಂ) ಸಂಕೇತಾಕ್ಷರ ಸೇರಿರಬಹುದು. ಆದರೆ ನರಸಿಂಹಾಚಾರ್ಯರ ತಾತ ಈ ಊರನ್ನ ಬಿಟ್ಟು ಮಂಡ್ಯ ಜಿಲ್ಲೆ ಕೊಪ್ಪಲು ಗ್ರಾಮಕ್ಕೆ ಬಂದು ನೆಲಸಿದರು. ಆರ್. ನರಸಿಂಹಾಚಾರ್ಯರು ಹುಟ್ಟಿದ್ದು ಇಲ್ಲಿಯೇ. ೧೮೬೦ರ ಏಪ್ರಿಲ್ ೯ ರಂದು. ತಂದೆ ತಿರುನಾರಾಯಣ ಪೆರುಮಾಳ ತಾಯಿ ಶಿಂಗಮಾಳ್, ತಂದೆ ಸಂಸ್ಕೃತ ಪಂಡಿತರು, ಸಾರ್ವಜನಿಕ ಶಾಲೆಗಳಿಲ್ಲದ ಕಾಲ ಅದು. ಕೂಲಿಮಠಗಳ ಕಾಲ, ವಿದ್ಯಾರ್ಥಿಗಳು ಮರಳ ಮೇಲೆ, ಹಲಗೆಯ ಮೇಲೆ ಬರೆಯುತ್ತಿದ್ದ ಸಂದರ್ಭ; ವಿದ್ಯಾರ್ಥಿಗಳು ಅತ್ಯಂತ ಶಿಸ್ತಿಗೆ ಒಳಪಡಬೇಕಾಗಿತ್ತು. ಬುದ್ಧಿವಂತರು ಪ್ರಶಂಸೆಗೆ, ದಡ್ಡರು ಶಿಕ್ಷೆಗೆ ಒಳಪಡುತ್ತಿದ್ದರು. ವಿದ್ಯಾರ್ಥಿಗಳನ್ನ ಪಳಗಿಸುವ ಬೆತ್ತವು ಶಿಕ್ಷಕರ ಕೈಯಲ್ಲಿ ಸದಾ ಇರುತ್ತಿತ್ತು. ಪಾಠ ಹೇಳುವವರಿಗೆ ನಿರ್ದಿಷ್ಟ ಸಂಭಾವನೆ ಏನೂ ಇರುತ್ತಿರಲಿಲ್ಲ. ವಿದ್ಯಾರ್ಥಿಗಳಿಂದ ಏನಾದರೂ ಧಾನ್ಯ ಅಥವಾ ದ್ರವ್ಯರೂಪದಲ್ಲಿ ಶುಲ್ಕವು ಸಂದಾಯವಾಗುತ್ತಿತ್ತು.

ನವರಾತ್ರಿಯ ಸಮಯ ಬಂತೆಂದರೆ ಶಿಕ್ಷಕರು ವಿದ್ಯಾರ್ಥಿಗಳನ್ನ ಸಜ್ಜುಗೊಳಿಸಿ ಊರೂರು ತಿರುಗಿ ಪ್ರತಿ ಮನೆಯ ಮುಂದೂ ಮಾನೌಮಿ ಪದಗಳನ್ನ ಹೇಳಿಸುತ್ತಿದ್ದರು:

ಆಶ್ವಯುಜ ಶುದ್ದ ಮಾನವಮಿ ಬರಲೆಂದು
ಶಾಶ್ವತದಿ ಹರಿಸಿದೆವು ಬಾಲಕರು ಬಂದು
ಈಶ ನಿಮಗತ್ಯಧಿಕ ಸುಖವ ಕೊಡಲೆಂದು
ಲೇಸಾಗಿ ಹರಸಿದೆವು ಬಾಲಕರು ಬಂದು

ಧನಕನಕ ವಸ್ತುವಾಹನವಾಗಲೆಂದು
ಕನಕದಂಡಿಗೆ ಚೌರಿ ನಿಮಗಾಗಲೆಂದು
ದಿನದಿನಕೆ ರಾಜಮನ್ನಣೆ ಹೆಚ್ಚಲೆಂದು
ಅನುದಿನವು ಹರಸಿದೆವು ಬಾಲಕರು ಬಂದು

ಛತ್ರಚಾಮರ ತೇಜಿ ನಿಮಗಾಗಲೆಂದು
ಅರ್ತಿಯಿಂ ಮಾಲಕುಮಿ ನಿಮಗೊಲಿಯಲೆಂದು
ಪುತ್ರಪೌತ್ರರು ನಿಮಗೆ ಹೆಚ್ಚುತ್ತಿರಲೆಂದು
ಅರ್ತಿಯಿಂ ಹರಸಿದೆವು ಬಾಲಕರು ಬಂದು

ಮಳೆ ಬಂದು ಬೆಳೆಬಂದು ಧರೆ ತಣಿಯಲೆಂದು
ತಿಳಿಗೊಳಗಳುಕ್ಕಿ ತುರುಗಳು ಕರೆಯಲೆಂದು
ನಳಿನ ಮುಖಿಯರು ಸುಪುತ್ರರ ಪಡೆಯಲೆಂದು
ಇಳೆಯೊಳಗೆ ಹರಸಿದೆವು ಬಾಲಕರು ಬಂದು

ಆಯುರಾರೋಗ್ಯಗಳು ನಿಮಗಾಗಲೆಂದು
ಶ್ರೇಯಸ್ಸು ಸಂಪತ್ತು ಹೆಚ್ಚುತ್ತಿರಲೆಂದು
ಆಯತದಿ ಜಗದೊಡೆಯನೊಲವಾಗಲೆಂದು
ಪ್ರಿಯದಿಂ ಹರಸಿದೆವು ಬಾಲಕರು ಬಂದು

ಸರ್ವರ ಶ್ರೇಯೋಭಿಲಾಷೆಯನ್ನು ಕೋರುವ ಈ ಹಾಡನ್ನ ವಿದ್ಯಾರ್ಥಿ ಸಮುದಾಯ ಮನೆಯ ಬಾಗಿಲ ಮುಂದೆ ಹಾಡುತ್ತಿದ್ದಂತೆ ಅವರವರ ಶಕ್ತಿ ಸಾಮರ್ಥ್ಯದಂತೆ ಸೂಕ್ತ ಪ್ರತಿಫಲ ದೊರೆಯುತ್ತಿತ್ತು. ಇಂತಹ ಸುಸಂಸ್ಕೃತ ವಾತಾವರಣದ ಕೂಲಿಮಠವೊಂದರಲ್ಲಿ ನರಸಿಂಹಾಚಾರ್ಯರ ಪ್ರಾಥಮಿಕ ಶಿಕ್ಷಣ ಜರುಗಿತು. "೧೮೬೮ ರಿಂದ ಮುಂದಕ್ಕೆ ಬಿ.ಎಲ್.ರೈಸ್ ಅವರಿಂದ ಈ ಶಾಲೆಗಳೆಲ್ಲ ಪರಿಷ್ಕೃತವಾಗಿ ಹೋಬಳಿ ಶಾಲೆಗಳಾಗಿ ಪರಿವರ್ತಿತವಾದವು. ಆಚಾರ್ಯರು ಕನ್ನಡವನ್ನು ಇಲ್ಲಿ ಕಲಿತರೂ ಸಂಸ್ಕೃತವನ್ನು ಇತರ ಉಪಯುಕ್ತಾಂಶಗಳನ್ನು ತಮ್ಮ ತಂದೆಯವರಲ್ಲಿ ಅಭ್ಯಸಿಸಿದರು" (ರಾ.ನರಸಿಂಹಾಚಾರ್ಯ : ಎನ್. ಅನಂತರಂಗಾಚಾರ್ ಪುಟ: ೪).

ಹದಿಮೂರನೇ ವಯಸ್ಸಿನಲ್ಲಿಯೇ ನರಸಿಂಹಾಚಾರ್ಯರು ವಿವಾಹವಾದರು. ಅವರ ಮಾವಂದಿರು ಮದ್ರಾಸಿನವರು. ಆದ್ದರಿಂದ ಅಲ್ಲಿಯ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ೧೮೭೭ರಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಕುಳಿತರು. ತಮಿಳನ್ನು ಐಚ್ಛಿಕ ವಿಷಯವಾಗಿ ಆರಿಸಿಕೊಂಡು ಪ್ರಥಮ ಸ್ಥಾನದಲ್ಲಿ ತೇರ್ಗಡೆ ಹೊಂದಿದರು. ೧೮೭೮ರಲ್ಲಿ ಬೆಂಗಳೂರಿನಲ್ಲಿ ಸೆಂಟ್ರಲ್ ಕಾಲೇಜನ್ನ ಸೇರಿದರು. "ಆಗ್ಗೆ ಆ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಚಾರ್ಲ್ಸ್‌ವಾಟರ್ಸ್ ಅವರು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಅವರು ಗಳಿಸಿದ್ದ ಉತ್ತಮ ಅಂಕಗಳನ್ನು ನೋಡಿ ಮೆಚ್ಚಿಕೊಂಡು ತಮ್ಮ ಕಾಲೇಜಿಗೆ ಅವರನ್ನು ಶುಲ್ಕ ವಿನಾಯಿತಿ ನೀಡಿ ವಿದ್ಯಾರ್ಥಿಯನ್ನಾಗಿ ಸೇರಿಸಿಕೊಂಡರು. ಅವರೇ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಇಂಗ್ಲಿಷ್ ಭಾಷೆಯ ಪರೀಕ್ಷಕರಲ್ಲಿ ಒಬ್ಬರಾಗಿದ್ದರು. ಶುಲ್ಕ ವಿನಾಯಿತಿಯ ಜೊತೆಗೆ ಮೂರು ರೂಪಾಯಿಗಳ ಒಂದು ವಿದ್ಯಾರ್ಥಿ ವೇತನವೂ ಅವರಿಗೆ ದೊರಕುವಂತೆ ವ್ಯವಸ್ಥೆ ಮಾಡಿದರು. ಆಗ್ಗೆ ಇಲ್ಲಿ ಇದ್ದ ಇತರ ಅಧ್ಯಾಪಕರು ಎಂದರೆ ಎಚ್. ಜೆ. ಭಾಭಾ (ವೈಸ್ ಪ್ರಿನ್ಸಿಪಾಲ್), ಕಿಂಗ್ ಅಡಾಲ್ಬಸ್, ಆರ್. ವೆಂಕಟರಾಮಯ್ಯ, ಎಸ್. ಕೃಷ್ಣಸ್ವಾಮಿ ಅಯ್ಯರ್, ಎಸ್. ಮಲ್ಲಾರಿರಾವ್, ಜಿ. ಕೃಷ್ಣರಾವ್ ಮತ್ತು ಸಿ. ಕೃಷ್ಣರಾವ್ (ಅಧ್ಯಾಪಕರು), ೧೮೭೯ರಲ್ಲಿ ಆಚಾರ್ಯರು ಆರ್ಟ್ಸ್ ವಿಭಾಗದ ಎಫ್.ಎ. ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ಈಗ ಅವರಿಗೆ ಮೇಜರ್ ಜನರಲ್ ಆರ್.ಎಸ್.ಡಾಬ್ ಹೆಸರಿನ ವಿದ್ಯಾರ್ಥಿ ವೇತನವೂ ಶಾಲೆಯ ಪ್ರಥಮ ಬಹುಮಾನವೂ ದೊರೆತವು. ಹೀಗೆ ಇವರು ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ

ತೇರ್ಗಡೆಯಾದುದು ನೋಡಿ ವಾಟರ್ಸ್ ತಮ್ಮ ಹ್ಯಾಟನ್ನು ಮೇಲಕ್ಕೆ ಎಸೆದಾಡಿ ತರಗತಿಯೊಳಗೆ ಕುಣಿದಾಡಿದರಂತೆ. ಈತ ಸ್ವಭಾವತಃ ಸ್ವಲ್ಪ ಮುಂಗೋಪಿ ಆದರೆ ಸಮಾಧಾನ ಸ್ಥಿತಿಗೆ ಬರುವ ಉದಾರತೆಯೂ ಆತನಲ್ಲಿದ್ದಿತು. ಆಚಾರ್ಯರಿಗೆ ಒಂದು ವರ್ಷ ಹಿರಿಯ ತರಗತಿಯ ವಿದ್ಯಾರ್ಥಿಯಾಗಿದ್ದ ಎಂ. ವಿಶ್ವೇಶ್ವರಯ್ಯನವರು ಈತನ ಅತ್ಯಂತ ಪ್ರಿಯ ವಿದ್ಯಾರ್ಥಿಯಾಗಿದ್ದರಂತೆ. ಭಾಭಾ ಅವರು ಎಫ್.ಎ. ಯಲ್ಲಿ ಶರೀರ ರಚನೆಯ ಶಾಸ್ತ್ರವನ್ನು, ಬಿ.ಎ.ಯಲ್ಲಿ ತರ್ಕಶಾಸ್ತ್ರ ಮತ್ತು ನೀತಿ ಶಾಸ್ತ್ರವನ್ನು ಭೋದಿಸುತ್ತಿದ್ದು ವಿದ್ಯಾರ್ಥಿ ವತ್ಸಲರಾಗಿದ್ದರು. ಆಚಾರ್ಯರು ೧೮೮೨ರಲ್ಲಿ ಬಿ.ಎ. ಪದವಿಯನ್ನು ಗಳಿಸಿ ಅನೇಕ ಪಾರಿತೋಷಕಗಳನ್ನು ಸಂಪಾದಿಸಿದರು. ಈ ಹೊತ್ತಿಗೆ ಸಿ.ವಾಟರ್ಸ್ ಅವರು ಕಾಲೇಜನ್ನು ಬಿಟ್ಟು ಹೋಗಿದ್ದುದರಿಂದ ಪಾರಿತೋಷಕವಾಗಿ ಬಂದ ಪುಸ್ತಕಗಳನ್ನು ಅವರ ಉತ್ತರಾಧಿಕಾರಿಗಳಾದ ಜೆ. ಕುಕ್ ಅವರಿಂದ ಪಡೆದುಕೊಂಡರು. ವಾಟರ್ಸ್ ಅವರು ಆಚಾರ್ಯರ ಇಂಗ್ಲಿಷ್ ಪಾಂಡಿತ್ಯವನ್ನು, ಸೌಮ್ಯ ಪ್ರಕೃತಿಯನ್ನು ವಿಶೇಷವಾಗಿ ಮೆಚ್ಚಿಕೊಂಡು, ಒಂದು ಶಿಫಾರಸು ಪತ್ರವನ್ನು (೧೯-೩-೧೮೮೨), ಭಾಭಾ ಅವರು ಆಚಾರ್ಯರ ಶ್ರದ್ಧೆ, ಹಾಜರಿ ನಡವಳಿಕೆಗಳ ಶಿಫಾರಸ್ಸು ಪತ್ರವನ್ನು (೧೯-೩-೧೮೮೨) ನೀಡಿದ್ದರು? (ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ (ಸಂ) ಪ್ರಾಕ್ತನ : ಪುಟ : X)

## ೨. ಅಧ್ಯಾಪಕರಾಗಿ

ಆರ್. ನರಸಿಂಹಾಚಾರ್ಯರು ಪದವಿಯನ್ನು ಪಡೆದ ನಂತರ ಮೊದಲ ನಾಲ್ಕು ವರ್ಷಗಳ ಕಾಲ ಚಿಕ್ಕಮಗಳೂರು ಹೈಸ್ಕೂಲಿನಲ್ಲಿ ಪ್ರಥಮ ಸಹಾಯಕ ಉಪಾಧ್ಯಾಯರಾಗಿ ಸೇವೆಸಲ್ಲಿಸಿದರು. ಸಾಮ್ಯುಲ್ ಕ್ರೆಸ್ ಅವರು ಅಲ್ಲಿ ಮುಖ್ಯೋಪಾಧ್ಯಾಯರಾಗಿದ್ದರು. ಹೈಸ್ಕೂಲನ್ನು ಬಿಟ್ಟು ಬರುವಾಗ ಮುಖ್ಯೋಪಾಧ್ಯಾಯ ಕ್ರೆಸ್ ಅವರಿಂದ ದೊರೆತ ಪ್ರಶಂಸೆಯ ಮಾತುಗಳಿವು: "ಆರ್. ನರಸಿಂಹಾಚಾರ್ಯರು ಸಂಪೂರ್ಣ ತೃಪ್ತಿಕರವಾಗಿ ಕರ್ತವ್ಯ ನಿರ್ವಹಣೆ ಮಾಡಿದ್ದಾರೆ ಎಂದು ತಿಳಿಸಲು ವಿಶೇಷವಾಗಿ ಸಂತೋಷಿಸುತ್ತೇನೆ. ಅವರ ಅಭಿವೃದ್ಧಿಗೆ ಅಡ್ಡಿಯಾಗಿ ಬರಲು ನನಗೆ ದುಃಖವಾಗುತ್ತದೆ. ಅವರು ಬಹುಶ್ರಮಪಟ್ಟು ಕೆಲಸ ಮಾಡುವವರು. ತಮ್ಮ ಕೆಲಸದಲ್ಲಿ ವಿಶೇಷ ಆಸಕ್ತಿಯುಳ್ಳವರು. ಅವರ ಹಾಜರಿ ಯಾವಾಗಲೂ ಬಹು ಕ್ರಮಬದ್ಧವಾಗಿದ್ದುದರಿಂದ ಅವರು ತಮ್ಮ ವಿದ್ಯಾರ್ಥಿಗಳ ಮುಂದೆ ಉತ್ತಮ ಆದರ್ಶವನ್ನು ಇಟ್ಟಿದ್ದಾರೆ" (ಎನ್. ಅನಂತರಂಗಾಚಾರ್ : ರಾ. ನರಸಿಂಹಾಚಾರ್ಯ, ಪುಟ :೭).

ನರಸಿಂಹಾಚಾರ್ಯರು ನಂತರ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಸೇವೆ ಸಲ್ಲಿಸಿದರು. ಎಚ್.ಜೆ. ಭಾಭಾ ಅಲ್ಲಿ ಮುಖ್ಯೋಪಾಧ್ಯಾಯರಾಗಿದ್ದರು. ಅವರ ಮಾರ್ಗದರ್ಶನದಲ್ಲಿ ಸಹಾಯಾಧ್ಯಾಪಕರಾಗಿ ೧೯-೪-೧೮೮೯ರಲ್ಲಿ ನೇಮಕಗೊಂಡರು. ೧೭-೩-೧೮೮೭ರವರೆಗೂ ಸೇವೆಸಲ್ಲಿಸಿದರು. ಅಲ್ಲಿಯೂ ಅವರ ಪ್ರಾಮಾಣಿಕವಾದ ಸೇವೆ, ಉತ್ತಮ ನಡವಳಿಕೆ ಮತ್ತು ಅವರಿಗಿರುವ ಕನ್ನಡ ಸಂಸ್ಕೃತ ಪಾಂಡಿತ್ಯದ ಬಗ್ಗೆ

ಪ್ರಶಂಸೆಯ ಮಾತುಗಳು ಕೇಳಿಬಂದವು. ಸಂಸ್ಥೆಯನ್ನ ಬಿಟ್ಟಾಗ ಅವರಿಗೆ ನೀಡಿರುವ ಶಿಫಾರಸ್ಸು ಪತ್ರವೂ (೨೧-೩-೧೮೮೭) ಈ ಆಶಯವನ್ನ ಒಳಗೊಂಡಿರುವುದು ಗಮನೀಯ.

ನಂತರ ಮೈಸೂರು ಮಹಾರಾಣಿಯವರ ಬಾಲಿಕಾ ಪ್ರೌಢಶಾಲೆಗೆ ಇವರ ವರ್ಗವಾಯಿತು. ಅಂಬಿಲ್ ನರಸಿಂಹಯ್ಯಂಗಾರ್ಯರು ಅಲ್ಲಿ ಮುಖ್ಯಸ್ಥರಾಗಿದ್ದರು. ಅವರ ಮಾರ್ಗದರ್ಶನದಲ್ಲಿ ಮಾರ್ಚ್ ೧೮೮೭ ರಿಂದ ಜೂನ್ ೧೮೮೯ರವರೆಗೆ ಸೇವೆಸಲ್ಲಿಸಿದರು. ಅಲ್ಲಿ ನೀಡಿದ ಶಿಫಾರಸು ಪತ್ರ (೧೨-೬-೧೮೮೯)ವು ಅವರ ನಡವಳಿಕೆ, ಪ್ರಾಮಾಣಿಕತೆ, ಶಿಸ್ತು, ಅಧ್ಯಯನ, ಪರಿಶ್ರಮ, ಉತ್ತಮ ಬೋಧನೆಯ ಬಗೆಗೆ ನಿರೂಪಿಸುತ್ತದೆ. ನಂತರ ಇವರು ಶಿವಮೊಗ್ಗ ಶಾಲೆಗೆ ವರ್ಗವಾದರು. ಅಲ್ಲಿ ಎ.ಜಿ.ಕಿಂಗ್ ಅವರು ಮುಖ್ಯೋಪಾಧ್ಯಾಯರಾಗಿದ್ದರು. "ಪ್ರಮುಖ ಸಹಾಯಾಧ್ಯಾಪಕರಾಗಿ ಅವರು ಸಹೋದ್ಯೋಗಿಗಳ ಮತ್ತು ವಿದ್ಯಾರ್ಥಿಗಳ ಪ್ರೀತಿಗೆ ಪಾತ್ರರಾಗಿದ್ದುದಲ್ಲದೆ ತಮ್ಮ ಕರ್ತವ್ಯ ಪಾಲನೆಯಲ್ಲಿ ಅತ್ಯಂತ ಶಿಸ್ತು, ಶ್ರದ್ಧೆ ಹಾಗೂ ಉತ್ಸಾಹಗಳನ್ನು ತೋರಿಸುತ್ತಿದ್ದರೆಂದು ತಾವು ಕೊಟ್ಟ ಶಿಫಾರಸು ಪತ್ರದಲ್ಲಿ (೨೬-೯-೧೮೯೭) ತಿಳಿಸಿದ್ದಾರೆ. ಅಲ್ಲದೆ ತಮ್ಮ ಸಂಸ್ಕೃತ ಹಾಗೂ ಕನ್ನಡಗಳ ಗಾಢವಾದ ಪರಿಶ್ರಮ, ಇಂಗ್ಲಿಷ್ ಭಾಷೆಯ ಒಳ್ಳೆಯ ತಿಳುವಳಿಕೆ ಇವುಗಳಿಂದಾಗಿ ಭಾಷಾಂತರ ವಿಭಾಗಕ್ಕೆ ಇವರ ಸಹಾಯ ಅಮೂಲ್ಯವಾದುದಾಗಿದೆ ಎಂಬುದಾಗಿಯೂ ಅವರು ಸರ್ವದಾ ಸ್ನೇಹಶೀಲ, ಸೌಮ್ಯ, ಸಹನಶೀಲ, ಕಷ್ಟಸಹಿಷ್ಣು ಆಗಿರುವರೆಂದೂ ಸಮಯ ನಿಷ್ಠ ಪ್ರಾಮಾಣಿಕ ವ್ಯಕ್ತಿಯೆಂದೂ ಹಾರ್ದಿಕವಾಗಿ ಮೆಚ್ಚಿ ತಮ್ಮ ಶಿಫಾರಸು ಪತ್ರವನ್ನು (೨೬-೯-೧೮೯೨) ಕೊಟ್ಟಿದ್ದಾರೆ" (ಡಾ.ಟಿ.ವಿ.ವೆಂಕಟಾಚಲಶಾಸ್ತ್ರೀ (ಸಂ) ಪ್ರಾಕ್ತನ : ಕ.ಅ.ಸಂ. ಮೈ.ವಿ.ವಿ. ಪುಟ : xi).

ಅಧ್ಯಾಪಕ ವೃತ್ತಿಯೊಂದಿಗೆ ಸಾಹಿತ್ಯದ ಉನ್ನತವ್ಯಾಸಂಗಕ್ಕೆ ಆಸಕ್ತಿ ತೋರಿದ ನರಸಿಂಹಾಚಾರ್ಯರು ೧೮೯೩ರಲ್ಲಿ ಕನ್ನಡವನ್ನು ಪ್ರಧಾನ ವಿಷಯವನ್ನಾಗಿ, ತಮಿಳನ್ನ ಸಹಾಯಕ ಭಾಷೆಯನ್ನಾಗಿ ಆಯ್ಕೆಮಾಡಿಕೊಂಡು ದ್ರಾವಿಡ ಭಾಷಾ ಸಾಹಿತ್ಯದ ಎಂ.ಎ. ಪದವಿಯನ್ನು ಮದರಾಸು ವಿಶ್ವವಿದ್ಯಾನಿಲಯದಿಂದ ಪಡೆದುಕೊಂಡರು. ಈ ರೀತಿ ಕನ್ನಡವನ್ನ ಅಧ್ಯಯನ ಮಾಡಿ ಎಂ.ಎ. ಪದವಿಯನ್ನು ಪಡೆದವರಲ್ಲಿ ಆರ್. ನರಸಿಂಹಾಚಾರ್ಯರೇ ಮೊದಲಿಗರು. ಇದನ್ನ ಪರಿಗಣಿಸಿದ ಮೈಸೂರಿನ ದೇವರಾಜ ಬಹದ್ದೂರ್ ಸಹಾಯಕ ನಿಧಿಯವರು ನರಸಿಂಹಾಚಾರ್ಯರಿಗೆ ಆ ನಿಧಿಯಿಂದ ಮುನ್ನೂರು ರೂ.ಗಳನ್ನ ಪಾರಿತೋಷಕವನ್ನಾಗಿ ನೀಡಿದರು. "ತಾವು ಉಪಾಧ್ಯಾಯರಾಗಿದ್ದ ಅವಧಿಯಲ್ಲಿಯೂ ಅನಂತರದಲ್ಲಿಯೂ ಮೈಸೂರು ವಿದ್ಯಾಭ್ಯಾಸ ಇಲಾಖೆಯ ಪಠ್ಯನಿಯಮಕ ಸಮಿತಿಯಲ್ಲಿಯೂ ಶಾಲಾಕಾಲೇಜು ಪರೀಕ್ಷಾ ಮಂಡಳಿಯಲ್ಲಿಯೂ ಹಲವು ವರ್ಷಗಳ ಕಾಲ ಅವರು ಅಧ್ಯಕ್ಷರಾಗಿಯೂ ಸದಸ್ಯರಾಗಿಯೂ ಕೆಲಸ ಮಾಡಿದರು. ಮೈಸೂರಿನ ಕನ್ನಡ ಪಂಡಿತ ಪರೀಕ್ಷೆಯಲ್ಲಿಯೂ ಮದರಾಸಿನ ಕನ್ನಡ ವಿದ್ವಾನ್‌ಪರೀಕ್ಷೆಯಲ್ಲಿಯೂ ಅವರ ಪಾತ್ರವಿದ್ದಿರುವುದು ಅಸಂಭವವೇನಲ್ಲ" (ಅದೇ, ಪುಟ : xii).

ನರಸಿಂಹಾಚಾರ್ಯರು ೧೮೯೪ರಲ್ಲಿ ಮೈಸೂರು ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆಯಲ್ಲಿ ಭಾಷಾಂತರಕಾರರಾಗಿ ನೇಮಕಗೊಂಡರು. "ಎಚ್.ಜೆ. ಭಾಭಾ ಅವರ ನಿರ್ದೇಶನದಲ್ಲಿ ಹೊಸ ಪುಸ್ತಕಗಳನ್ನು ಕುರಿತ ವರದಿಗಳು ಪ್ರಕಟವಾಗ ತೊಡಗಿದಾಗ, ಆಚಾರ್ಯರು ಅಂಥ ನಿಯತಕಾಲಿಕ ವರದಿಗಳನ್ನು ಸಿದ್ಧಪಡಿಸಿ ತಕ್ಕ ಪೀಠಿಕೆಯೊಡನೆ ಪ್ರಕಟಿಸಿದರು ಎಂಬುದನ್ನು ನೆನೆಯಬೇಕು. ಉದಾಹರಣೆಗೆ ೧೮೯೮ನೆಯ ವರ್ಷದ ಕನ್ನಡ ಸಾಹಿತ್ಯ ಸಮೀಕ್ಷೆ ನೋಡಬಹುದು (ರಿಪೋರ್ಟ್ ಆನ್ ಪಬ್ಲಿಕೇಷನ್ಸ್ ಇಷ್ಯೂಡ್ ಅಂಡ್ ರಿಜಿಸ್ಟರ್ಡ್, ಕಲ್ಕತ್ತ ೧೮೯೯) ಆಚಾರ್ಯರ ಪಾಂಡಿತ್ಯ ಪರಿಶ್ರಮಗಳನ್ನು ನೋಡಿ ಆಗ್ಗೆ ಮೈಸೂರು ಪುರಾತತ್ವ ಇಲಾಖೆಯ ಮುಖ್ಯಾಧಿಕಾರಿಗಳಾಗಿದ್ದ ಬಿ.ಎಲ್.ರೈಸ್ ಅವರು, ಅವರನ್ನು ತಮ್ಮ ಇಲಾಖೆಯಲ್ಲಿ ತಮಗೆ ಸಹಾಯಕರಾಗಿ ೧೮೯೯ರಲ್ಲಿ ನಿಯಮಿಸಿಕೊಂಡರು. ಅಲ್ಲಿಂದ ಏಳು ವರ್ಷಗಳ ಕಾಲ ರೈಸ್ ಅವರ ಮಾರ್ಗದರ್ಶನದಲ್ಲಿ ಶಾಸನಗಳು, ನಾಣ್ಯಗಳು ಹಾಗೂ ಹಸ್ತಪ್ರತಿಗಳು ಮೊದಲಾದ ಪ್ರಾಚ್ಯವಸ್ತುಗಳ ಸಂಗ್ರಹ ಪರೀಕ್ಷೆಗಳಲ್ಲಿ ನಿರತರಾಗಿದ್ದುದಲ್ಲದೆ, ಅವರಿಗೆ ಗ್ರಂಥ ಸಂಪಾದನೆಯಲ್ಲಿಯೂ ತಮಿಳು ಶಾಸನಗಳನ್ನು ಓದುವುದರಲ್ಲಿಯೂ ಸಮರ್ಥವಾಗಿ ನೆರವು ನೀಡಿದರು. ಅಲ್ಲದೆ ತಾವೇ ಕೆಲವು ಪ್ರಾಚೀನ ಕನ್ನಡ ಗ್ರಂಥಗಳನ್ನು ಸಂಪಾದಿಸಿದರು. ೧೯೦೬ರಲ್ಲಿ ರೈಸ್ ಅವರು ನಿವೃತ್ತರಾಗಿ ತೆರವು ಮಾಡಿದ ನಿರ್ದೇಶಕ ಸ್ಥಾನಕ್ಕೆ ತಾವೇ ನೇಮಕಗೊಂಡರು. ಅಲ್ಲಿಂದ ಮುಂದಕ್ಕೆ ೧೬ ವರ್ಷಗಳ ಕಾಲ ಆ ಹುದ್ದೆಯಲ್ಲಿ ಕಾರ್ಯನಿರ್ವಹಣೆ ಮಾಡಿದರು. ಹಿಂದಿನ ಮೈಸೂರು ಸಂಸ್ಥಾನದ ವ್ಯಾಪ್ತಿಗೆ ಒಳಪಟ್ಟ ಪ್ರದೇಶದಲ್ಲಿ ಶಾಸನ ಸರ್ವೇಕ್ಷಣೆ, ನಾಣ್ಯ ಶೋಧನೆ, ವಾಸ್ತು ಶಿಲ್ಪಗಳ ವಿವರಣೆ, ಹಸ್ತಪ್ರತಿಗಳ ಸಂಗ್ರಹ ಇವನ್ನು ಕುರಿತ ಹಾಗೆ ಅನೇಕ ಹೊಸವಿಷಯಗಳನ್ನು ಒಳಗೊಂಡ ಇಲಾಖೆಯ ವರದಿಗಳನ್ನು (ಮೈಸೂರು ಆರ್ಕಿಯಲಾಜಿಕಲ್ ರಿಪೋರ್ಟ್) ಪ್ರತಿವರ್ಷವೂ ಪ್ರಕಟಿಸಿದರು. ೧೯೧೪ರಲ್ಲಿ ಮದರಾಸ್ ವಿಶ್ವವಿದ್ಯಾನಿಲಯದಲ್ಲಿ ಇತಿಹಾಸ ಪ್ರಾಧ್ಯಾಪಕ ಸ್ಥಾನ ಹೊಸದಾಗಿ ಸ್ಥಾಪಿತವಾಗಿ ಆ ಸ್ಥಾನವನ್ನು ವಹಿಸಿಕೊಳ್ಳುವಂತೆ ಆಚಾರ್ಯರಿಗೆ ಆಹ್ವಾನ ಬಂದಿತ್ತು. ಆದರೆ ಮೈಸೂರು ಸರ್ಕಾರ ಅವರ ಸೇವೆಯನ್ನು ಬಿಟ್ಟುಕೊಡಲು ಇಷ್ಟಪಡಲಿಲ್ಲವಾದ್ದರಿಂದ ಆಚಾರ್ಯರು ಮೈಸೂರಿನಲ್ಲಿಯೇ ಉಳಿಯುವಂತಾಯಿತು. ಈ ಸ್ಥಾನಕ್ಕೆ ಬಳಿಕ ಮೈಸೂರಿನವರೇ ಆದ ದಿವಾನ್ ಬಹಾದ್ದೂರ್ ಡಾ.ಎಸ್.ಕೃಷ್ಣಸ್ವಾಮಿ ಅಯ್ಯಂಗಾರ್ಯರು ನೇಮಕಗೊಂಡಂತೆ ತಿಳಿಯುವುದು. ೧-೭-೧೯೨೨ರಲ್ಲಿ ಪುರಾತತ್ವ ಇಲಾಖೆಯ ನಿರ್ದೇಶಕ ಹುದ್ದೆಯಿಂದ ನಿವೃತ್ತಿ ಹೊಂದಿದ ಮೇಲೆ ಸಹ ತಾವು ಅಧಿಕಾರದಲ್ಲಿದ್ದಾಗ್ಗೆ ಉಳಿಸಿದ್ದ ಕೆಲವು ಅಪೂರ್ಣವಾದ ಕೆಲಸಗಳನ್ನು ಮುಂದುವರಿಸಿ ಪೂರೈಸಿಕೊಟ್ಟದ್ದು ಅವರ ಸೇವಾ ತತ್ಪರತೆ ಪ್ರಾಮಾಣಿಕತೆಗಳನ್ನು ತೋರಿಸುತ್ತದೆ. ಅವರು ರಚಿಸಿದ, ಸಂಪಾದಿಸಿದ ಕೆಲವು ಗಮನಾರ್ಹ ಗ್ರಂಥಗಳು ಲೇಖನ ಭಾಷಣಗಳು ಹೊರಬಂದುದು ನಿವೃತ್ತಿಯ ಆನಂತರವೇ. ಹೀಗೆ ತಮ್ಮ ಸಾರ್ಥಕ ಜೀವನವನ್ನು ನಡೆಸಿದ ನರಸಿಂಹಾಚಾರ್ಯರು ತಮ್ಮ ೭೭ನೆಯ ವಯಸ್ಸಿನಲ್ಲಿ ೬-೧೨-೧೯೩೬ರಂದು ಬೆಂಗಳೂರಿನಲ್ಲಿ ನಿಧನರಾದರು. ಒಂದು ಭಾಷ್ಪಾಂಜಲಿ ಲೇಖನದ ಪ್ರಕಾರ "ವಿಜಯನಗರ ಸ್ಮಾರಕ ಮಂಡಲದವರು ಬೆಂಗಳೂರಿನಲ್ಲಿ ನಡೆಸಿದ ನಾಗರಿಕ ಸಭೆಯೊಂದಕ್ಕೆ ಅಧ್ಯಕ್ಷರಾಗಿ ಮಾಡಿದ ಕಾರ್ಯವು ಅವರ ಕರ್ನಾಟಕದ ಕೊನೆಯ ಸೇವೆಯಾಗಿ ಪರಿಣಮಿಸಿತು" (ಅದೇ, xiii – xiv).

ಶ್ರೀನಿವಾಸ ಹಾವನೂರರು ಹೇಳುವಂತೆ ರಾ. ನರಸಿಂಹಾಚಾರ್ಯ ಅವರಿಂದ ತಮಿಳು-ಕನ್ನಡ ಸಾಹಚರ್ಯವೆನ್ನಬಹುದಾದ ಕೃತಿಗಳು ಹೊರಬಂದವು. ಕೆಲವು ತಮಿಳು ಶಾಸನಗಳನ್ನು ಕನ್ನಡದಲ್ಲಿ ಅನುವಾದಿಸಿ 'ಎಪಿಗ್ರಾಫಿಯ ಕರ್ನಾಟಕ'ದಲ್ಲಿ ಪ್ರಕಟಿಸಿದ್ದಾರೆ. ಬೆಶ್ಚಿಯು ತಮಿಳಿನಲ್ಲಿ ಬರೆದಿದ್ದ ಪರಮಾರ್ಥ ಗುರುವಿನ ಕಥೆಯನ್ನು "ನಗೆಗಡಲು' ಎಂಬ ಹೆಸರಿನಿಂದ ಕನ್ನಡದಲ್ಲಿ ಹೇಳಿದ್ದಾರೆ (ಪುಟ ೨೭೯).

ಒಟ್ಟಾರೆ ಮೈಸೂರು ಸಂಸ್ಥಾನ ಸರ್ಕಾರದ ಬೇರೆ ಬೇರೆ ಶಾಲೆಗಳಲ್ಲಿ ಅಧ್ಯಾಪಕರಾಗಿ, ವಿದ್ಯಾ ಇಲಾಖೆಯಲ್ಲಿ ಭಾಷಾಂತರಕಾರರಾಗಿ, ಪುರಾತತ್ವ ಇಲಾಖೆಯಲ್ಲಿ ಸಹಾಯಕರಾಗಿ, ನಿರ್ದೇಶಕರಾಗಿ ಐದು ದಶಕಗಳಿಗೂ ಮಿಗಿಲಾಗಿ ಸೇವೆ ಸಲ್ಲಿಸಿದ ಅನುಭವ ನರಸಿಂಹಾಚಾರ್ಯರದು. ಶ್ರೇಷ್ಠ ಸಾಹಿತಿಯಾಗಿ ಹೆಸರಾದವರು. ಅವರ ಈ ಎಲ್ಲ ಕ್ಷೇತ್ರಗಳ ಸಾಧನೆಯನ್ನ ಮೆಚ್ಚಿಕೊಂಡವರು ಹಲವರು ನೀಡಿದ ಮನ್ನಣೆ ಪುರಸ್ಕಾರಗಳು ಹಲವಾರು. ಕೊಂಡಾಡಿದ ಸಂಘ ಸಂಸ್ಥೆಗಳು ಹಲವಾರು, ಪ್ರಶಂಸೆ ವ್ಯಕ್ತಪಡಿಸಿದ ಪತ್ರಗಳು ಅಸಂಖ್ಯ.

೧೯೦೭ರಲ್ಲಿ ರಾಯಲ್‌ಏಷ್ಯಾಟಿಕ್ ಸೊಸೈಟಿಯ ಸದಸ್ಯತ್ವವನ್ನು ಪಡೆದುಕೊಂಡ ನರಸಿಂಹಾಚಾರ್ಯರಿಗೆ ೧೯೧೩ರಲ್ಲಿ ಮೈಸೂರು ಮಹಾರಾಜ ಶ್ರೀಮಾನ್ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 'ಪ್ರಾಕ್ತನ ಖಿಲ್ಲತ್ತುಗಳೊಂದಿಗೆ ವಿಮರ್ಶ ವಿಚಕ್ಷಣ' ಪ್ರಶಸ್ತಿಯನ್ನು ಪ್ರದಾನ ಮಾಡಿದರು. ೧೯೧೬ರಲ್ಲಿ ಸರ್ಕಾರದಿಂದ 'ರಾವ್‌ಬಹದ್ದೂರ್' ಪ್ರಶಸ್ತಿಯನ್ನು ಸ್ವೀಕಾರ ಮಾಡಿದರು. ೧೯೧೮ರಲ್ಲಿ ಧಾರವಾಡದಲ್ಲಿ ಜರುಗಿದ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

ನವೆಂಬರ್ ೧೯೧೯ರಲ್ಲಿ ಪುಣೆಯಲ್ಲಿ ಜರುಗಿದ ಪ್ರಥಮ ಅಖಿಲ ಭಾರತ ಪ್ರಾಚ್ಯವಿದ್ಯಾ ಸಮ್ಮೇಳನದಲ್ಲಿ ಮೈಸೂರು ಪ್ರತಿನಿಧಿಯಾಗಿ ಆಯ್ಕೆಗೊಂಡರು. ಎಸ್.ಕೃಷ್ಣಸ್ವಾಮಿ ಅಯ್ಯಂಗಾರ್‌ರ ಅಧ್ಯಕ್ಷತೆಯಲ್ಲಿ ಕರ್ನಾಟಕ ದೇಶ ಮತ್ತು ಭಾಷೆಯನ್ನು ಕುರಿತು ಪ್ರಬಂಧ ಮಂಡಿಸಿದರು. ೧೯೨೨ರಲ್ಲಿ ಕಲ್ಕತ್ತೆಯಲ್ಲಿ ಏರ್ಪಾಟಾದ ಅಖಿಲ ಭಾರತ ಇತಿಹಾಸ ಮತ್ತು ಪ್ರಾಚ್ಯ ವಿದ್ಯಾ ಸಮ್ಮೇಳನದ; ಇತಿಹಾಸ ಮತ್ತು ಪ್ರಾಚ್ಯ ವಿದ್ಯಾ ಶಾಖೆಯ ಅಧ್ಯಕ್ಷರಾಗಿ ಆಯ್ಕೆಯಾದರು. ಇದೇ ವರ್ಷ ಆಗಸ್ಟ್ ೨೦ರಂದು ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘವು ನರಸಿಂಹಾಚಾರ್ಯರಿಗೆ ಭಿನ್ನವತ್ತಳೆ ನೀಡಿ ಗೌರವಿಸಿತು. ೧೯೨೪ರಲ್ಲಿ ಕಲ್ಕತ್ತದಲ್ಲಿನ ಅಖಿಲ ಭಾರತ ಸಾಹಿತ್ಯ ಸಂಘವು ಅವರಿಗೆ 'ಕರ್ಣಾಟಕ ಪ್ರಾಚ್ಯ ವಿದ್ಯಾವೈಭವ' ಎಂಬ ಬಿರುದನ್ನು ನೀಡಿ ಗೌರವಿಸಿತು. ೧೯೨೫ರಲ್ಲಿ ಸೆಂಟ್ರಲ್ ಕಾಲೇಜಿನ ವಾರ್ಷಿಕೋತ್ಸವದ ಅಧ್ಯಕ್ಷತೆಯ ಸ್ಥಾನ ಅಲಂಕರಿಸಿದರು. ೧೯೩೨ರಲ್ಲಿ ಬೆಂಗಳೂರಿನ ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆಯ ಪಾರಿತೋಷಕ ವಿನಿಯೋಗ ಮಹೋತ್ಸವದ ಅಧ್ಯಕ್ಷತೆ ವಹಿಸಿದ್ದರು. ೧೯೩೪ರಲ್ಲಿ ಬ್ರಿಟಿಷ್ ಸರ್ಕಾರವು ಅವರಿಗೆ ದೇಶದ ಮಹಾನ್ ವಿದ್ವಾಂಸರಿಗೆ ನೀಡುವ "ಮಹಾಮಹೋಪಾಧ್ಯಾಯ' ಮಹತ್ವದ ಪ್ರಶಸ್ತಿ ನೀಡಿ ಗೌರವಿಸಿತು. ದಿನಾಂಕ ೨೭-೧೧-೧೯೩೪ರಂದು ಮಿಥಿಕ್

ಸೊಸೈಟಿಯ ರಜತಮಹೋತ್ಸವದ ಅಧ್ಯಕ್ಷತೆಯನ್ನು ವಹಿಸಿದ್ದರು. ದಿನಾಂಕ ೫-೧೨-೧೯೩೪ರಲ್ಲಿ ಧರ್ಮಸ್ಥಳದಲ್ಲಿ ಜರುಗಿದ ವಿವಿಧ ಮತಗಳ ಧರ್ಮ ಸಮ್ಮೇಳನಾಧ್ಯಕ್ಷತೆಯನ್ನು ವಹಿಸಿದ್ದರು.

ದಿನಾಂಕ ೨-೩-೧೯೩೫ರಲ್ಲಿ ಮೈಸೂರು ಮಹಾರಾಜ ಕಾಲೇಜಿನ ಕರ್ಣಾಟಕ ಸಂಘದ ವಾರ್ಷಿಕೋತ್ಸವ ಸಮಾರಂಭದ ಮುಖ್ಯ ಅತಿಥಿಗಳಾಗಿದ್ದರು. ದಿನಾಂಕ: ೫-೪-೧೯೩೫ರಲ್ಲಿ ಮೈಸೂರು ವಿದ್ಯಾಶಾಲಾ ಪಂಡಿತ ಮಂಡಳಿಯ ಪ್ರಥಮ ಸಮ್ಮೇಳನದ ಅಧ್ಯಕ್ಷರಾಗಿಯೂ ಗೌರವಕ್ಕೆ ಪಾತ್ರರಾದರು. ಡಿಸೆಂಬರ್ ೧೯೩೫ರಲ್ಲಿ ಮೈಸೂರಿನಲ್ಲಿ ನಡೆದ ಎಂಟನೆಯ ಅಖಿಲ ಭಾರತ ಪ್ರಾಚ್ಯ ವಿದ್ಯಾ ಸಮ್ಮೇಳನದ ಕನ್ನಡ ಮತ್ತು ಅನ್ಯ ದ್ರಾವಿಡ ಭಾಷೆಗಳ ವಿಭಾಗದ ಅಧ್ಯಕ್ಷತೆಯನ್ನು ವಹಿಸಿದ್ದರು. ನರಸಿಂಹಾಚಾರ್ಯರು ಪುರಾತತ್ತ್ವ ಇಲಾಖೆಯ ಮುಖ್ಯಾಧಿಕಾರಿಗಳಾಗಿದ್ದಾಗ ಕೆಲಕಾಲ ಇಂಡಿಯಾ ಸರ್ಕಾರದ ಗೌರವ ಪ್ರತಿನಿಧಿ ಆಗಿದ್ದರು. ೧೯೨೧ರಲ್ಲಿ ಫ್ರಾನ್ಸ್ ದೇಶದ ಪ್ಯಾರಿಸ್ಸಿನ ಪ್ರಾಚ್ಯ ವಿದ್ಯಾ ಸಂಸ್ಥೆಯ ಸದಸ್ಯ ಪ್ರತಿನಿಧಿ ಆದರು. ಬೆಂಗಳೂರಿನ ಪ್ರಸಿದ್ಧ ಸಾಂಸ್ಕೃತಿಕ ಸಂಸ್ಥೆಯಾದ ಮಿಥಿಕ್ ಸೊಸೈಟಿಯ ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರಾಗಿದ್ದರು. (೧೯೦೦ ರಿಂದ ಡಿಸೆಂಬರ್ ೧೯೩೦ರವರೆಗೆ)

ಜನವರಿ ೧೯೩೧ ರಿಂದ ಡಿಸೆಂಬರ್ ೧೯೩೬ರವರೆಗೆ ಉಪಾಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿ ಅಲ್ಲಿಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. "ಐತಿಹಾಸಿಕ ಪ್ರಾಮುಖ್ಯದ ವಿಷಯಗಳನ್ನು ಕುರಿತು ಅಲ್ಲಿಯ ವಿದ್ವದ್ಗೋಷ್ಠಿಗಳಲ್ಲಿ ಉಪನ್ಯಾಸಗಳನ್ನು ನಡೆಸಿಕೊಟ್ಟರು. ಅವು ಆ ಸಂಸ್ಥೆಯ ವಿದ್ವತ್ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಅವರ ಹೆಸರಿನಲ್ಲಿ ಈಚೆಗೆ ಇಲ್ಲಿ ಒಂದು ದತ್ತಿನಿಧಿ ಸ್ಥಾಪಿತವಾಗಿದೆ. ಈ ನಿಧಿಯ ನೆರವಿನಿಂದ ಖ್ಯಾತ ವಿದ್ವಾಂಸರ ಉಪನ್ಯಾಸಗಳು ಜರುಗುವ ವ್ಯವಸ್ಥೆ ಇದೆ. ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆ, ಪೋಷಣೆಗಳಲ್ಲಿ ಅದರ ಆರಂಭ ಕಾಲದಿಂದಲೂ ಅವರು ಆಸಕ್ತಿಯಿಂದ ತಮ್ಮ ಪಾಲಿನ ಸೇವೆಯನ್ನು ಸಲ್ಲಿಸಿದರೆಂಬುದು ತಿಳಿದಿದೆ. ಇಂತಹ ಎಷ್ಟೋ ಸಭೆ, ಸಮ್ಮೇಳನಗಳ ಸಂಬಂಧ ಅವರಿಗೆ ಬಹಳ ಹಿಂದಿನಿಂದ ಇದ್ದಿತೆನ್ನುವುದಕ್ಕೆ ದಾಖಲೆಗಳಿವೆ. ಉದಾಹರಣೆಗೆ ಲಂಡನ್ ವಿಶ್ವವಿದ್ಯಾನಿಲಯದ ಪ್ರಥಮ ವಿಶ್ವ ಜಾನಾಂಗಿಕ ಮಹಾಸಭೆಯ ಸಾಮಾನ್ಯ ಸದಸ್ಯತ್ವದ ಸರ್ಟಿಫಿಕೇಟ್ (ಜುಲೈ ೨೬-೨೯, ೧೯೧೧) ಅವರಿಗೆ ಕಳಿಸಲಾಗಿತ್ತು. ಮದ್ರಾಸಿನ ಶ್ರೀವೈಷ್ಣವ ಗ್ರಂಥ ಮುದ್ರಕ ಸಭೆಗೆ ಅವರು ಪೋಷಕರಾಗಿದ್ದರು (೧೯೦೨)" (ಅದೇ, ಪುಟ - xvi).

## ವ್ಯಕ್ತಿತ್ವ :

ಆರ್.ನರಸಿಂಹಾಚಾರ್ಯರು ಸಂಪ್ರದಾಯಸ್ಥ ಕುಟುಂಬದಿಂದ ಬಂದವರು. ಉತ್ಸಾಹಿಗಳು, ಕ್ರಿಯಾಶೀಲರು, ಸಾಹಿತ್ಯ ಕಲೆಗಳ ಬಗೆಗೆ ಶ್ರದ್ಧೆ ಮತ್ತು ಆಸಕ್ತಿಯುಳ್ಳವರು, ಅದರಲ್ಲೂ ಕ್ರೀಡೆಯ ಬಗೆಗೆ ಕ್ರಿಕೆಟ್ ಆಟದ ಬಗೆಗೆ ತುಂಬು ಕಾಳಜಿ, ದೇಶಭಾಷೆಗಳನ್ನು ಪ್ರೋತ್ಸಾಹಿಸಬೇಕು ಎಂದು ಹೇಳುವುದರ ಜೊತೆಗೆ ದೇಶಭಾಷೆಗಳು ಪುಷ್ಟಿಗೊಳ್ಳಲು ಅನ್ಯ ಭಾಷೆಗಳು ಅಗತ್ಯವಿದೆ ಎಂದು ಸಾರಿದವರು. ಸಂಸ್ಕೃತವನ್ನು

ಕಲಿಯುವುದರಲ್ಲಿ; ಸಂಸ್ಕೃತ ಕಲಿಕೆಯ ಬಗೆಗೆ ಹೆಚ್ಚಿನ ಆಸಕ್ತಿ ತೋರಬೇಕು ಎಂದರು. ಮಕ್ಕಳು ಬರೀ ವಿದ್ಯಾವಂತರಾದರೆ ಸಾಲದು ಉತ್ತಮ ನಡವಳಿಕೆಯುಳ್ಳವರು ಆಗಬೇಕು ಎಂದು ಹೇಳಿದ ನರಸಿಂಹಾಚಾರ್ಯರು ಸರ್ಕಾರದ ಉನ್ನತ ಹುದ್ದೆಯಲ್ಲಿದ್ದರೂ ಸರಳ ಸಜ್ಜನಿಕೆಗಳಿಂದ ಸ್ನೇಹಜೀವಿ ಎನಿಸಿದರು.

## ಸಮಾಜಸೇವೆ :

ಆರ್.ನರಸಿಂಹಾಚಾರ್ಯರು ಸಾಹಿತ್ಯ ಕ್ಷೇತ್ರಕ್ಕಷ್ಟೇ ಸೀಮಿತರಾದವರಲ್ಲ. ಸಮಾಜಸೇವೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಇದರ ಸಲುವಾಗಿ ಅನೇಕರ ಸಂಪರ್ಕವನ್ನು ಹೊಂದಿದ್ದರು. ಸಂಘ ಸಂಸ್ಥೆಗಳ ಸಂಪರ್ಕ ಹೊಂದಿದ್ದರು. ಅವುಗಳ ಬೆಳವಣಿಗೆಗಾಗಿ ಸಲಹೆ ಸೂಚನೆಗಳನ್ನ ನೀಡುತ್ತಿದ್ದರು. ೧೯೦೨ರಲ್ಲಿ ಮೇಲುಕೋಟೆಯ ಉಭಯ ವೇದಾಂತ ಪ್ರದರ್ಶನ ಸಭೆಯ ಸ್ಥಾಪಕ ಸದಸ್ಯರಾಗಿದ್ದು ಆಜೀವ ಪರಿಯಂತ ಅದರ ಕಾರ್ಯದರ್ಶಿಗಳಾಗಿದ್ದರು.

ಪ್ರತಿವರ್ಷ ರಾಮಾನುಜಾಚಾರ್ಯ ತಿರುನಕ್ಷತ್ರ ಕಾಲದಲ್ಲಿ ವೇದಶಾಸ್ತ್ರ ಪರೀಕ್ಷೆ ನಡೆಸಿ ಅದರಲ್ಲಿ ಉತ್ತೀರ್ಣರಾದವರಿಗೆ ಬಹುಮಾನ ನೀಡುತ್ತಿದ್ದರು. ವಿದ್ವಾಂಸರಿಂದ ಭಾಷಣಗಳನ್ನು ಏರ್ಪಡಿಸಿದ್ದರು. ವಿದ್ಯಾರ್ಥಿಗಳಿಗಾಗಿ ವೇದ ಸ್ತೋತ್ರಗಳಿಗಾಗಿ ಕಿರುಹೊತ್ತಗೆಯನ್ನು ಪ್ರಕಟಿಸಿದರು. ಸಂಸ್ಕತ ಆಸಕ್ತರಿಗಾಗಿ ಬೆಂಗಳೂರಿನಲ್ಲಿ ಪ್ರತ್ಯೇಕ ಸಂಸ್ಕೃತ ಪಾಠ ಶಾಲೆಯನ್ನು ಸ್ಥಾಪಿಸಿ ನಡೆಸಿದರು. ಸ್ವಲ್ಪ ಕಾಲ ಬೆಂಗಳೂರು ಚಾಮರಾಜೇಂದ್ರ ಸಂಸ್ಕೃತ ಮಹಾಪಾಠ ಶಾಲೆಯ ನಿರ್ವಾಹಕ ಮಂಡಳಿಯ ಸದಸ್ಯರಾಗಿದ್ದರು. ಮೈಸೂರು ಸಂಸ್ಥಾನದ ಪ್ರಭುಗಳಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ ಬಗ್ಗೆ ಅಪಾರವಾದ ಗೌರವವನ್ನು ಇಟ್ಟುಕೊಂಡಿದ್ದರು. ಅದಕ್ಕಾಗಿಯೇ ತಮ್ಮೆಲ್ಲ ಗ್ರಂಥಗಳನ್ನು ಪ್ರಭುಗಳಾದ ನಾಲ್ವಡಿ ಅವರಿಗೆ ಅರ್ಪಿಸಿರುವುದನ್ನು ಗಮನಿಸಬಹುದು.

ಎಡ್ವರ್ಡ್ ಪಿ ರೈಸ್ ಅವರು ೧೯೧೫, ಅಕ್ಟೋಬರ್‌ನಲ್ಲಿ 'ಎ ಹಿಸ್ಟರಿ ಆಫ್ ಕನ್ನಡ ಲಿಟರೇಚರ್' ಎಂಬ ಕೃತಿಯನ್ನ ರಚಿಸಿದರು. ಇದನ್ನ ಪುರಾತತ್ವ ಇಲಾಖೆಯ ನಿರ್ದೇಶಕರಾಗಿದ್ದ ರಾವ್‌ಬಹಾದ್ದೂರ್ ಆರ್. ನರಸಿಂಹಾಚಾರ್ಯ ಅವರಿಗೆ ಅರ್ಪಿಸಿದ್ದರೆಂಬುದು ಗಮನಾರ್ಹ ಅಂಶ. ಕನ್ನಡ ನಾಡು ನುಡಿಗಳ ಬಗೆಗೆ ಅಂಧಕಾರದಲ್ಲಿದ್ದ ಕನ್ನಡ ಜನತೆಗೆ ಪ್ರಾಚೀನ ಕನ್ನಡ ಸಾಹಿತ್ಯ ಸಂಪತ್ತಿನ ಬಗೆಗೆ ಅರಿವನ್ನು ಮೂಡಿಸಿ, ಅವರಲ್ಲಿನ ಕೀಳರಿಮೆಯನ್ನ ಹೋಗಲಾಡಿಸಿ ನಾಡಿನ ಸಾಹಿತ್ಯ ಸಂಸ್ಕೃತಿಗಳನ್ನು ಪುನರುದ್ಧರಿಸಲು ಪ್ರೇರಣೆ ನೀಡಿದ ಪ್ರಾಕ್ತನ ವಿಮರ್ಶಾ ವಿಚಕ್ಷಣ ರಾವ್‌ಬಹದ್ದೂರ ಪ್ರಾಚ್ಯವಿದ್ಯಾವೈಭವ ಮಹಾಮಹೋಪಾಧ್ಯಾಯ ಆರ್. ನರಸಿಂಹಾಚಾರ್ಯರು ಭಾರತ ದೇಶದ ವಿದ್ವನ್ಮಂಡಲಿಯಲ್ಲಿ ವಿರಾಜಮಾನರಾಗಲು ಅರ್ಹರಾದ ಕನ್ನಡಿಗರಾಗಿದ್ದಾರೆ.

# ೩. ಸಾಹಿತ್ಯ ಸೇವೆ

ಆರ್. ನರಸಿಂಹಾಚಾರ್ಯರು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗೆ ನೀಡಿದ ಕಾಣಿಕೆ ಚಿರಸ್ಮರಣೀಯವಾದುದು. ಕನ್ನಡ, ಇಂಗ್ಲಿಷ್ ಸಂಸ್ಕೃತ ಮತ್ತು ತಮಿಳು ಭಾಷೆಗಳಲ್ಲಿ ಕೃತಿಗಳನ್ನು ರಚಿಸಿ ನಾಡಿನ ಗಮನ ಸೆಳೆದಿರುವುದು ಗಮನಾರ್ಹ ಅಂಶ. ಪುರಾತತ್ವ ಇಲಾಖೆಯ ಅಧಿಕಾರಿಗಳಾಗಿದ್ದಾಗ ತಮ್ಮ ಸಿಬ್ಬಂದಿಯ ಸಹಕಾರದೊಂದಿಗೆ ಇಲಾಖೆಯ ವಾರ್ಷಿಕ ವರದಿಗಳನ್ನು ಪ್ರಕಟಿಸಿ ಆಶ್ಚರ್ಯ ಕುತೂಹಲಗಳಿಗೆ ಕಾರಣರಾಗಿದ್ದಾರೆ. ಅದಕ್ಕೆ ಮುನ್ನವೇ ಕೃತಿರಚನೆಯಲ್ಲಿ ತೊಡಗಿದ್ದದ್ದುಂಟು. ಮಹಾರಾಣಿ ಕಾಲೇಜಿನಲ್ಲಿ ಸೇವೆಸಲ್ಲಿಸುತ್ತಿರುವಾಗಲೇ "ನೀತಿವಾಕ್ಯಮಂಜರಿ' ಎಂಬ ಕಿರುಹೊತ್ತಿಗೆಯನ್ನು 'ಶಬ್ದರೂಪಾವಳಿ'ಯ ಸಂಶೋಧಿತ ಮುದ್ರಣವನ್ನ 'ಚಂಪೂ ರಾಮಾಯಣ'ದ ಕೆಲವು ಭಾಗಗಳನ್ನು ಪ್ರಕಟಿಸಿದ್ದರು. 'ಹಿತಬೋಧಿನಿ' ಎಂಬ ಪತ್ರಿಕೆಯಲ್ಲಿ ಸಂಗೀತ ಕ್ಷೇತ್ರಕ್ಕೆ ಸಂಬಂಧಿಸಿದ ಹಲವಾರು ಲೇಖನಗಳನ್ನು ಪ್ರಕಟಿಸಿದ್ದರು. ಭಾಷಾಂತರಕಾರರಾದ ನಂತರ ವಸ್ತುಪಾಠಗಳ ಮೇಲೆ ಎರಡು ಪುಸ್ತಕಗಳನ್ನೂ ಬಣ್ಣಗಳೂ ಆಕಾರಗಳೂ' ಎಂಬ ಶೀರ್ಷಿಕೆಯಲ್ಲಿ ಮತ್ತೊಂದು ಪುಸ್ತಕವನ್ನು ಎಂಟು ಕಾಪಿಪುಸ್ತಕಗಳನ್ನು ಇಲಾಖೆಗಾಗಿ ಬರೆದು ಕೊಟ್ಟಿದ್ದರು. ವಿದ್ಯಾ ಇಲಾಖೆಯ ಅನೇಕ ಪ್ರಕಟಣೆಗಳನ್ನ ಸಂಶೋಧಿಸಿ ಪ್ರಕಟಿಸಿದರು.

## ನೀತಿವಾಕ್ಯಮಂಜರಿ

'ನೀತಿವಾಕ್ಯ ಮಂಜರಿ' ಯ ಪ್ರಥಮ ಮುದ್ರಣ ಬಂದದ್ದು ೧೮೮೭ರಲ್ಲಿ. ರಾ.ನ.ಅವರು ಇದನ್ನ ದರ್ಬಾರ್‌ಬಕ್ಷಿಗಳಾದ ಅಂಬಿಲ್‌ನರಸಿಂರಯ್ಯಂಗಾರ ಪ್ರೇರಣೆಯಿಂದ ಹಾಗೂ ಶ್ರೀಮನ್ಮಹಾರಾಣಿಯವರ ಬಾಲಿಕಾ ಪಾಠಶಾಲೆಯ ಉಪಯೋಗಕ್ಕಾಗಿ ಸಿದ್ಧವಾದದ್ದು. ಈ ಪುಸ್ತಕ ತಮಿಳು ಕವಿಗಳಾದ ಅವ್ವೈಯಾರ್ ತಿರುವಳ್ಳುವರ್ ಹಾಗೂ ಸಂಸ್ಕೃತ ಕವಿಗಳಾದ ಕ್ಷೇಮೇಂದ್ರ, ಭತೃಹರಿ - ಮೊದಲಾದವರ ಗ್ರಂಥಗಳ ಆಧಾರದಿಂದ ಮತ್ತು ಪುರಾಣೇತಿಹಾಸಗಳ ಆಧಾರದಿಂದಲೂ ಬರೆಯಲ್ಪಟ್ಟಿತೆಂದು ರಾ.ನ. ತಿಳಿಸಿದ್ದಾರೆ. ನಾಲ್ಕು ಭಾಗಗಳಲ್ಲಿ ಗದ್ಯರೂಪದ ನೀತಿಬೋಧಕ ವಾಕ್ಯಗಳನ್ನು ಒಳಗೊಂಡಿದೆ. (ಕ್ರಮವಾಗಿ ೧೧೩, ೧೨೦, ೮೦ ಮತ್ತು ೬೩) ಮಕ್ಕಳ ವಯಸ್ಸಿಗನುಗುಣವಾಗಿ ಅವರ ನೈತಿಕ ಶಿಕ್ಷಣವನ್ನು ಕುರಿತಂತೆ ಸಂಯೋಜಿಸಲಾಗಿದೆ. ನೀತಿವಾಕ್ಯಗಳು ಸರಿಯಾಗಿ ಅರ್ಥವಾಗಲೆಂದು ಸಂದರ್ಭೋಚಿತವಾದ ಹೋಲಿಕೆಗಳನ್ನು ನೀಡಲಾಗಿದೆ. ಅಲ್ಲದೆ ಪುರಾಣ ಮತ್ತಿತರ ಮೂಲಗಳಿಂದಲೂ ತಕ್ಕ ಉದಾಹರಣೆಗಳನ್ನು ನೀಡಲಾಗಿದೆ.

## ನೀತಿಮಂಜರಿ

ಡಿಸೆಂಬರ್ ೧೮೯೪ ರಿಂದ ಜುಲೈ ೧೯೦೦ರವರೆಗೆ ಕರ್ನಾಟಕ ಗ್ರಂಥಮಾಲೆಯ ಪತ್ರಿಕೆಯಲ್ಲಿ ಬಿಡಿಬಿಡಿಯಾಗಿ ಪ್ರಕಟವಾದದ್ದು 'ನೀತಿ ಮಂಜರಿ'. ಆ ನಂತರ ಪುಸ್ತಕ ರೂಪದಲ್ಲಿ ಒಂದನೆಯ ಭಾಗ ೧೮೯೬ರಲ್ಲೂ

ಎರಡನೆಯ ಭಾಗ ೧೯೧೧ರಲ್ಲೂ ಪ್ರಕಟವಾಯಿತು. ಮೊದಲ ಭಾಗದಲ್ಲಿ ಮೂನ್ನೂರ ಎಪ್ಪತ್ತೊಂಬತ್ತು ಪದ್ಯಗಳಿವೆ. ಅವ್ವೈಯಾರ್ ಮೊದಲಾದವರ ರಚನೆಗಳಾದ 'ನನ್ನೆರಿ', 'ಮೂದುರೆ', 'ನೀತಿ ನೆರಿವಿಳಕ್ಕೆ', 'ನೀತಿವೆಣ್ಬಾ', 'ನಾಲ್ವಡಿಯಾರ್', 'ವೆತ್ತಿವೇರ್ಕ್ಕೈ, 'ನಲ್ವತಿ' - ಮುಂತಾದ ತಮಿಳು ಗ್ರಂಥಗಳ ಆಯ್ದ ಭಾಗಗಳನ್ನು ಹಳಗನ್ನಡದ ಭಾಷೆಯಲ್ಲಿ ಕಂದಪದ್ಯಗಳಾಗಿ ಇಲ್ಲಿ ಭಾಷಾಂತರಿಸಿ ಕೊಟ್ಟಿದೆ. ಕೆಲವು ಸ್ವಂತ ರಚನೆಗಳು ಇಲ್ಲಿವೆ. ಕಠಿಣ ಪದಗಳಿಗೆ ಅಡಿಟಿಪ್ಪಣಿಯಲ್ಲಿ ಅರ್ಥ ನೀಡಿದೆ. ಪದ್ಯಗಳ ಆಯ್ಕೆಯಲ್ಲಿ ಉತ್ತಮಿಕೆಯನ್ನು ಕಾಪಾಡಿಕೊಂಡಿದೆ. ಭಾಷೆ ಶೈಲಿ ಸರಳವಾಗಿಯೂ ಹೃದ್ಯಂಗಮವಾಗಿಯೂ ಇದೆ. ಇದು ಅನೇಕರ ಮೆಚ್ಚುಗೆಗೆ ಪಾತ್ರವಾಗಿದೆ.

"ತಮಿಳಿನಲ್ಲಿ ಅನೇಕ ನೀತಿ ಗ್ರಂಥಗಳಿರುವುದು ಪ್ರಾಯಕವಾಗಿ ಎಲ್ಲರಿಗೂ ತಿಳಿದಿರಬಹುದು. ಅಕ್ಷರಮಾಲೆಯನ್ನು ಕಲಿಯುವುದು ಮೊದಲ್ಗೊಂಡು ಕ್ರಮೇಣ ಆ ಭಾಷೆಯಲ್ಲಿ ಪೂರ್ಣಜ್ಞಾನವನ್ನು ಸಂಪಾದಿಸುವವರೆಗೂ ನೀತಿಗ್ರಂಥಗಳನ್ನು ಓದಬಹುದು. ಇಷ್ಟು ನೀತಿಗ್ರಂಥಗಳು ಇನ್ನಾವ ದ್ರಾವಿಡ ಭಾಷೆಯಲ್ಲಿಯೂ ಇಲ್ಲ. ಇವುಗಳನ್ನು ಭಾಷಾಂತರ ಮಾಡಿದ್ದಾರೆ. ಕನ್ನಡಿಗರಿಗೆ ಬಹಳ ಉಪಯೋಗವಾಗಹುದೆಂಬ ಅಭಿಪ್ರಾಯವು ನನಗೆ ಬಹಳ ದಿವಸದಿಂದ ಇತ್ತು. ಆದರೆ ಇತರ ಕಾರ್ಯಗಳಿಂದ ಈ ಕೆಲಸಕ್ಕೆ ಸಾಕಾಗದಷ್ಟು ಗಮನವನ್ನು ಕೊಡುವುದಕ್ಕೆ ಅವಕಾಶವಾಗಲಿಲ್ಲ. ಈಗ ಈ ಕೆಲಸವನ್ನು ಪ್ರಾರಂಭಿಸಿದ್ದೇನೆ." ನೀತಿಮಂಜರಿಯ ಪೀಠಿಕೆಯಲ್ಲಿ ಹೀಗೆಂದು ವ್ಯಕ್ತಪಡಿಸುವ ಆರ್. ನರಸಿಂಹಾಚಾರ್ಯರು ಕೃತಿಯ ಆಶಯವನ್ನು ಮತ್ತು ಅದರ ಸಂವಹನ ಸಾಧ್ಯತೆಯನ್ನ ಕುರಿತು ಸಹ ತಮ್ಮ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ :

"ಈ ಪದ್ಯಗಳು ವಾಚಕರಿಗೆ ಸ್ವಲ್ಪ ಕಷ್ಟವಾಗಿ ತೋರಬಹುದು. ಗದ್ಯಗ್ರಂಥವು ಹೇಗಿದ್ದರೂ ಇರಲಿ, ಪದ್ಯಗ್ರಂಥವು ಯಾವಾಗಲೂ ಲಕ್ಷಣಬದ್ಧವಾಗಿಯೇ ಇರಬೇಕೆಂಬ ಅಭಿಪ್ರಾಯದಿಂದಲೂ ಸಾಧ್ಯವಾದ ಮಟ್ಟಿಗೆ ಹಳಗನ್ನಡಪದಗಳೂ ಶೈಲಿಯೂ ವ್ಯಾಕರಣಮರ್ಯಾದೆಯೂ ವಾಚಕರ ಕಿವಿಗೆ ಬೀಳುತ್ತಿರಬೇಕೆಂಬ ಉದ್ದೇಶದಿಂದಲೂ ಈ ಗ್ರಂಥವನ್ನು ಪೂರ್ವಕವಿಗಳ ಮಾರ್ಗವನ್ನನುಸರಿಸಿ" ಬರೆದಿರುವೆನೆಂದು ಹೇಳಿದ್ದಾರೆ. ಅದಕ್ಕೂ ಮುಂದುವರಿದು **'¾' '¿'** ಗಳನ್ನು ಪ್ರಯತ್ನಪೂರ್ವಕವಾಗಿ ಉಳಿಸಿಕೊಳ್ಳಲಾಗಿದೆ. ಕನ್ನಡ ಗ್ರಂಥಗಳಲ್ಲಿ ಇವನ್ನ ಪ್ರಚಾರಕ್ಕೆ ತರುವುದು ಅನಗತ್ಯವೆಂದು ತೋರಿದರೂ ಪದ್ಯ ಗ್ರಂಥಗಳಲ್ಲಾದರೂ ಇವು ಇರಬೇಕೆಂಬ ಭಾವನೆ ಅವರಿಗಿದ್ದಂತಿದೆ.

ಇಂಗಡಲ ಕುವರಿ ವಕ್ಷೋ।
ರಂಗದೊಳ ಸಮಾನ ಶೋಭೆಯಂಭೀರೆತಟಿತ ॥
ಸಂಗದೆತೊಳಗುವ ಮುಗಿಲಬೆ ।
ಡಂಗಂನಗುವಂಬುಜಾಕ್ಷನಿಗಮಗೋಳ್ಪಂ॥

ಎಂಬ ಮಂಗಳ ಶ್ಲೋಕದಿಂದ 'ನನ್ನೆರಿ' ಎಂಬ ಗ್ರಂಥದ ಭಾಷಾಂತರ ಆರಂಭಗೊಂಡಿದೆ.

ಭಾರದ್ವಾಜ ಸುಗೋತ್ರಂ ।

ನಾರಾಯಣ ಸೂರಿಸೂನು ಯತಿರಾಜ ಪದಾಂ ||

ಭೋರುಹಭೃಂಗಂ ನರಹರಿ ||

ಯೋರಂತೀ ನೀತಿ ಮಂಜರಿಯನೊಲ್ದೊರೆದಂ ||

ಎಂಬ ಪದ್ಯದೊಂದಿಗೆ ಪ್ರಥಮ ಭಾಗ ಮುಕ್ತಾಯಗೊಂಡಿದೆ.

'ವಿಷಯ ಮತ್ತು ರೀತಿಯಲ್ಲಿ ಅತ್ಯಮೋಘವಾದ ಕೃತಿ' (ನಂಜುಂಡಯ್ಯ) 'ಅತ್ಯುತ್ತಮ ಕೃತಿ' (ಕೆ.ಬಿ.ಪಾಠಕ್), 'ಇದು ಬಹುಬೇಗ ಉತ್ತಮ ಕೃತಿಯಾಗುತ್ತದೆ'. ನಾನು ನಿಮ್ಮ ಪದ್ಯಗಳನ್ನು ಓದುವುದಕ್ಕೆ ಅತ್ಯಂತ ಸಂತೋಷಪಟ್ಟೆ, ಅದರ ಸ್ವಚ್ಛವಾದ ಶೈಲಿ, ಸಹಜಗತಿ, ಉತ್ತಮ ಮಾಧುರ, ಭಾವಪೂರ್ಣತೆ ನನ್ನನ್ನು ಮುಗ್ಧನನ್ನಾಗಿಸಿವೆ' (ಎಚ್. ನಾರಾಯಣರಾಯ), 'ಇಂತಹ ನಿಜವಾದ ಒಳ್ಳೆಯ ಪುಸ್ತಕಗಳನ್ನು ಕಾಣುವುದು ಅಪೂರ್ವ' (ಬಿ. ಮಲ್ಲಪ್ಪ) - ಇತ್ಯಾದಿ ಮೆಚ್ಚಿಕೆಯ ಮಾತುಗಳು ಹೊರಬಂದವು?

ನೀತಿ ಮಂಜರಿಯ ಎರಡನೆಯ ಭಾಗದಲ್ಲಿ ತಿರುವಳ್ಳುವರ್ ಅವರ 'ಕುಱಳ್' ಎಂಬ ಸುಪ್ರಸಿದ್ಧ ತಮಿಳು ರಚನೆಯ ಆಯ್ದ ಸೂಕ್ತಿಗಳು ಹಳಗನ್ನಡದಲ್ಲಿ ಮೂನ್ನೂರತೊಂಭತ್ತು ಕಂದಪದ್ಯದಲ್ಲಿ ಅನುವಾದಗೊಂಡಿವೆ. ನೂರಎಂಟು ವಿಭಾಗಗಳಲ್ಲಿ ಇಲ್ಲಿಯ ನೀತಿವಾಕ್ಯಗಳು ಸಂಯೋಜನೆಗೊಂಡಿದ್ದು ಪದ್ಯಗಳ ಆಯ್ಕೆಯಿಂದ ಹಿಡಿದು ಭಾಷಾಶೈಲಿಯವರೆಗೆ ಉತ್ತಮಿಕೆಯನ್ನು ಕಾಪಾಡಿಕೊಂಡಿವೆ.

ನೀತಿಮಂಜರಿಯ ಪ್ರಥಮ ಮುದ್ರಣದ ಪೀಠಿಕಾ ಭಾಗದಲ್ಲಿ ಆರ್. ನರಸಿಂಹಾಚಾರ್ಯರು ಕೃತಿರಚನೆಯ ಮನೋರಥವನ್ನು ಕುರಿತು ಮಾತನಾಡಿದ್ದಾರೆ. ಬಹಳ ಕಾಲದವರೆಗೆ ಕುಂಟಿತಗೊಂಡ ಈ ಕೆಲಸದ ಬಗೆಗೆ ಮನನೊಂದುಕೊಂಡ ಅವರು "ತಮಿಳಿನಲ್ಲಿ ಉತ್ತಮ ಗ್ರಂಥವಾದ ಕುರಳಿನ ಅಸದೃಶವಾದ ಸೌಂದರ್ಯವನ್ನೂ ಸ್ವಾರಸ್ಯವನ್ನೂ ಸಲ್ಪಮಟ್ಟಿಗಾದರೂ ಅನುಭವಿಸಿ ಆನಂದಿಸುವಂತೆ ಕನ್ನಡಿಗರಿಗೆ ಈ ಅಲ್ಪವಾದ ಸೇವೆಯನ್ನು ಮಾಡುವ ಭಾಗ್ಯವು ದೊರೆತುದಕ್ಕಾಗಿ ಬಹಳ ಸಂತೋಷ ವ್ಯಕ್ತಗೊಳಿಸಿದ್ದಾರೆ.

ತಮಿಳು ಭಾಷೆಯನ್ನು ಬಲ್ಲ ರಾ. ನ. ಅವರು ತಿರುವಳ್ಳುವ ಕವಿಯ ಮತ್ತು ಆತನ ಗ್ರಂಥದ ಮಹತ್ವವನ್ನು ಪೀಠಿಕಾ ಭಾಗದಲ್ಲಿ ವಿವರಿಸಿದ್ದಾರೆ: "ತಿರುವಳ್ಳುವ ಕವಿಯ ಜನ್ಮಸ್ಥಳವು ಮದರಾಸಿಗೆ ಸಮೀಪದಲ್ಲಿರುವ ಮಯಿಲಾಪುರವು. ಆತನು ಜಾತಿಯಲ್ಲಿ ಪಂಚಮನೆಂದೂ ವೃತ್ತಿಯಲ್ಲಿ ನೆಯ್ಗೆಯವನೆಂದೂ ಹೇಳುತ್ತಾರೆ. ಅವನ ಕಾಲವು ಕ್ರಿಸ್ತಶಕದ ಎರಡನೆಯ ಶತಮಾನವೆಂದು ಕೆಲವರು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಈ ಕವಿ ದಕ್ಷಿಣ ಹಿಂದುಸ್ಥಾನದಲ್ಲಿಯ ನೀತಿ ಗ್ರಂಥಕಾರರಲ್ಲಿ ಅಗ್ರಗಣ್ಯನೆಂದು ಭಾವಿಸಲ್ಪಟ್ಟಿದ್ದಾನೆ. ತಮಿಳಿರು ಈತನನ್ನು ಋಷಿಯೆಂದೂ ಸ್ಮೃತಿಕಾರನೆಂದೂ ಭಾವಿಸುವುದಲ್ಲದೆ ಆದಿಕವಿ, ಮಹಾಜ್ಞಾನಿ, ದೇವಕವಿ ಎಂಬ ಬಿರುದುಗಳನ್ನೂ ಕೊಟ್ಟು ಗೌರವಿಸಿದ್ದಾರೆ. ಇವನಿಂದ ರಚಿತವಾದ ಕುರಳು ಅತ್ಯುತ್ತಮವಾದ ನೀತಿಗ್ರಂಥವೆಂದು ಖ್ಯಾತಿಯನ್ನು ಪಡೆದಿದೆ. ಇದಕ್ಕೆ ತಮಿಳು ಸತ್ಯವಾಕ್ಕು, ಉತ್ತರವೇದ, ದ್ರಾವಿಡವೇದ, ಸಾಧಾರಣವೇದ ಎಂಬ ಹೆಸರುಗಳನ್ನೂ

ಕೊಟ್ಟಿದ್ದಾರೆ. ಈ ಗ್ರಂಥವು ಇಂಗ್ಲಿಷ್ ಭಾಷೆಗೆ ಮಾತ್ರವೆ, ಅಲ್ಲದೆ ಲ್ಯಾಟಿನ್, ಫ್ರೆಂಚ್, ಜರ್ಮನ್, ಇಟಾಲಿಯನ್ ಎಂಬ ಭಾಷೆಗಳಿಗೂ ಪರಿವರ್ತಿಸಲ್ಪಟ್ಟಿದೆ. ಹಿಂದುಸ್ಥಾನದ ಯಾವ ಭಾಷೆಯಲ್ಲಿಯೂ ಇದಕ್ಕೆ ಸಮಾನವಾದ ಗ್ರಂಥವಿಲ್ಲವೆಂದು ಕೆಲವರು ವಿದ್ವಾಂಸರ ಅಭಿಪ್ರಾಯವು, ಪಾಶ್ಚಾತ್ಯ ಪಂಡಿತರಲ್ಲಿ ಕೆಲವರು ಈ ಗ್ರಂಥವನ್ನು ಅತ್ಯುತ್ತಮವಾದುದೆಂದು ವಿಶೇಷವಾಗಿ ಶ್ಲಾಘಿಸಿ ಬರೆದಿದ್ದಾರೆ. ಅವರ ಅಭಿಪ್ರಾಯಗಳಲ್ಲಿ ಕೆಲವು ಇಂಗ್ಲಿಷ್ ಪೀಠಿಕೆಯಲ್ಲಿ ಕೊಟ್ಟಿವೆ. ಈ ಗ್ರಂಥಕ್ಕೆ ಹತ್ತು ಪ್ರಾಚೀನ ವ್ಯಾಖ್ಯಾನಗಳಿವೆ. ಇದರಲ್ಲಿ ಪ್ರಾಯಿಕವಾಗಿ ಸರ್ವಮತ ಸಾಧಾರಣವಾದ ವಿಷಯಗಳು ಪ್ರತಿಪಾದಿತವಾಗಿರುವುದರಿಂದ ಹಿಂದುಸ್ಥಾನದ ಹಲವು ಮತದವರೂ ಈ ಕವಿ ನಮ್ಮವನು ತಮ್ಮವನು ಎಂದು ಹೇಳಿಕೊಳ್ಳುತ್ತಿದ್ದಾರೆ. ಈ ಕಾರಣದಿಂದಲೇ ಇದಕ್ಕೆ ಸಾಧಾರಣ ವೇದವೆಂಬ ಹೆಸರು ಬಂದಂತೆ ಕಾಣುತ್ತದೆ".

'ಕುರಳ್' ಎಂಬ ಶಬ್ದಕ್ಕೆ ಕುಳ್ಳು ಎಂದರ್ಥವು. 'ಕುರಳ್' ಎಂಬ ತಮಿಳು ಛಂದಸ್ಸಿನಲ್ಲಿ ಬರೆದು ಸಣ್ಣ ದ್ವಿಪದಿಗಳುಳ್ಳುದಾದುದರಿಂದ ಈ ಗ್ರಂಥಕ್ಕೆ ಕುರಳ್ ಎಂಬ ಹೆಸರು ಬಂದಿದೆ. ಈ ದ್ವಿಪದಿಗಳಿಗೆ ಮೊದಲು ಪಾದದಲ್ಲಿ ೪ ಗಣಕ ಎರಡನೆಯದರಲ್ಲಿ ೩ ಗಣಗಳೂ ಇವೆ. ಈ ಗ್ರಂಥದಲ್ಲಿ ಹತ್ತು ಹತ್ತು ದ್ವಿಪದಿಗಳುಳ್ಳ ೧೩೩ ಅಧಿಕಾರಗಳಿವೆ; ಧರ್ಮ, ಅರ್ಥ, ಕಾಮ ಎಂಬ ತ್ರಿವರ್ಗವೇ ಇದರಲ್ಲಿ ಪ್ರತಿಪಾದಿತವಾದ ವಿಷಯವು. ಈ ದ್ವಿಪದಿಗಳು ಸೂತ್ರಗಳಂತೆ ಅತಸಂಗ್ರಹವಾಗಿ ಆಕಾರದಲ್ಲಿ ಸಣ್ಣವಾಗಿದ್ದರೂ ವಿಪುಲವಾದ ಅರ್ಥವನ್ನು ಗರ್ಭೀಕರಿಸಿಕೊಂಡಿವೆ. ಈ ಅಂಶವನ್ನು ಪರಣರ್, ಇಡೈಕ್ಕಾಡರ್ ಎಂಬ ಇಬ್ಬರು ಪ್ರಾಚೀನಕವಿಗಳು ಈ ರೀತಿಯಾಗಿ ವರ್ಣಿಸಿದ್ದಾರೆ:

ವಿಷ್ಣು ಕುರಳಾಗಿ (ಎಂದರೆ ಕುಳ್ಳಾಗಿ, ವಾಮನನಾಗಿ) ಸ್ವರ್ಗವನ್ನೂ ಭೂಮಿಯನ್ನೂ ಎರಡು ಪಾದಗಳಿಂದ ಅಳೆದಂತೆ ತಿರುವಳ್ಳುವಕವಿ ತನ್ನ ಕುರಲ್ (ಸಣ್ಣ) ಪದ್ಯಗಳ ಎರಡು ಪಾದಗಳಿಂದ ಪ್ರಪಂಚವನ್ನೆಲ್ಲಾ ಅಳೆದಿದ್ದಾನೆ. (ಮಾಲುಂ ಕುರಳಾಯ ವಳಿನ್ದಿರಣ್ಡು ಮಾಣಡಿಯಾನ್ ಞಾಲಮುಳುದು ನಯನ್ದಳನ್ದಾನ್ - ವಾಲರುರ್ವವಳ್ಳುವರುಂ ತು ಅಜ್ಞೂರಳ್‌ವೆಣ್ಬಾಡಿಯಾಲ್ ವೈಯತ್ತಾರ್ ಉಳ್ಳುವವೆಲ್ಲಾಮಳನ್ದಾರೋನ್ರ್ದು) ತಿರುವಳ್ಳುವ ಕವಿಯ ದ್ವಿಪದಿಗಳು ಸಾಸವೆಯ ಕಾಳಿನಲ್ಲಿ ದ್ವಾರವನ್ನು ಮಾಡಿ ಸಪ್ತಸಮುದ್ರಗಳನ್ನೂ ಹೊಗಿಸಿದಂತೆ ಇವೆ. (ಕಡುಗೈತ್ತುಳೈತ್ತೇಳ್ ಕಡಲೈಪ್ಪುಗಟ್ಟಿ ಕುರುಗತ್ತರೆತ್ತಕುರಿಳ್.)

ಈ ಗ್ರಂಥದ ೧೩೩ ಅಧಿಕಾರಗಳೊಳಗೆ ೪ ಅಧಿಕಾರಗಳು ಅವತರಣಿಕಾರೂಪವಾಗಿವೆ; ಉಳಿದುವುಗಳಲ್ಲಿ ೩೪ ಧರ್ಮವನ್ನೂ ೭೦ ಅರ್ಥವನ್ನೂ ೨ ಕಾಮವನ್ನೂ ಪ್ರತಿಪಾದಿಸುತ್ತಿವೆ. ಅರ್ಥ ಭಾಗದಲ್ಲಿ ಅರ್ಥಶಾಸ್ತ್ರದಲ್ಲಿ ಹೇಳುವಂತೆ ರಾಜನ ವಿಷಯವಾಗಿಯೂ ರಾಜ್ಯಾಂಗಗಳ ವಿಷಯವಾಗಿಯೂ ಹಲವು ಅಂಶಗಳು ಹೇಳಿವೆ. ಈ ಶ್ಲಾಘ್ಯವಾದ ರತ್ನಖನಿಯಿಂದ ಕೆಲವು ರತ್ನಗಳನ್ನು ಮಾತ್ರ ಆರಿಸಿಕೊಂಡು ಯಥಾವತಿ ಕನ್ನಡಕ್ಕೆ ಪರಿವರ್ತಿಸಿದ್ದೇನೆ. ಅರಿಸಿರುವ ಭಾಗಗಳು-ಅವತರಣಿಕೆಯಿಂದ ೨ ಅಧಿಕಾರಗಳು. ಧರ್ಮಭಾಗದಿಂದ ೨೫ ಅಧಿಕಾರಗಳು, ಅರ್ಥಭಾಗದಿಂದ ೧೦ ಅಧಿಕಾರಗಳು: ಒಟ್ಟು ೩೮ ಅಧಿಕಾರಗಳು. ಅಧಿಕಾರಗಳಿಗೆ ಮಾತೃಕೆಯಲ್ಲಿರುವಂತೆಯೇ

ಈ ಭಾಗವನ್ನೂ ಹಳಗನ್ನಡದಲ್ಲಿ ಸಾಧ್ಯವಾದಮಟ್ಟಿಗೆ ಪ್ರಾಚೀನಜೈನ ಕವಿಗಳ ಸರಣಿಯನ್ನು ಅನುಸರಿಸಿ ಬರೆದಿದ್ದೇನೆ. ಕನ್ನಡದಲ್ಲಿ ಈಗ ಅದೃಶ್ಯವಾಗಿರುವ ಱ, ೞ ಎಂಬ ಅಕ್ಷರಗಳು ಇತರ ದ್ರಾವಿಡ ಭಾಷೆಗಳಲ್ಲಿ ಪ್ರಾಯಿಕವಾಗಿ ಬಳಕೆಯಲ್ಲಿರುವುದರಿಂದಲೂ ಶಬ್ದ ವ್ಯುತ್ಪತ್ತಿಶಾಸ್ತ್ರದ (Philology) ಜ್ಞಾನಕ್ಕೆ ಬಹಳಮಟ್ಟಿಗೆ ಸಹಕಾರಿಯಾಗಿರುವುದರಿಂದಲೂ ಅವುಗಳನ್ನು ಪದ್ಯಗ್ರಂಥಗಳಲ್ಲಿಯಾದರೂ ಪ್ರಚಾರಕ್ಕೆ ತರುವುದು ಪ್ರಯೋಜನಕಾರಿಯಾಗದೆ ಇರಲಾರದೆಂದು ಭಾವಿಸಿ ಆ ಅಕ್ಷರಗಳನ್ನು ಈ ಗ್ರಂಥದಲ್ಲಿಯೂ ಉಪಯೋಗಿಸಿದ್ದೇನೆ. ವಾಚಕರ ಸೌಕರ್ಯಕ್ಕಾಗಿ ಕ್ಲಿಷ್ಟಪದಗಳಿಗೆ ಅರ್ಥವು ಗ್ರಂಥಾಂತ್ಯದಲ್ಲಿ ಕೊಟ್ಟಿದೆ"

ಶ್ರೀಕಾಂತಂ ಕರುಣಾತಟ |
ನೀಕಾಂತಂ ಪಾದ ಪಂಕಜಾನತವಾಗ್ದೇ ||
ವೀಕಾಂತಂ ಪಾಲಿಕೆ ಜಗ |
ಲೇಕಾಂತಂ ಭಕ್ತವರ್ಗಮಂ ಭಗವಂತಂ ||
ಪಿರಿದುಂ ಸಂಸ್ಕೃತಿ ಚಕ್ರದೆ |
ನರಲ್ವ ನರರೀಂಟೆ ಪಡೆಯ ನಿಃಶ್ರೇಯ ಸಮಂ||
ತಿರುವಾಯೊಡೆಯೆಂಬಮರ್ದಂ |
ತಿರೆಯೊಳ್ ಪಸರಿಸಿದ ಮಾಲಿನಡಿಗೆರಗಿದಪೆಂ ||

ಮಂಗಳ ಶ್ಲೋಕಗಳಿಂದ ಆರಂಭಗೊಂಡಿರುವ 'ನೀತಿಮಂಜರಿ'ಯ ಪದ್ಯಗಳಲ್ಲಿ ದೇವರು, ಧರ್ಮ ಗೃಹಣಿಯಗುಣ, ಮಕ್ಕಳನ್ನು ಪಡೆಯುವುದು - ಪ್ರೀತಿ, ಅತಿಥಿಸತ್ಕಾರ, ಕೃತಜ್ಞತೆ, ಪಕ್ಷಪಾತವಿಲ್ಲದಿರುವುದು ಆತ್ಮಸಂಯಮ, ದಾನ, ಕೀರ್ತಿ, ದಯ, ವಿದ್ಯೆ, ಸ್ನೇಹ, ಬಡತನ, ಕವಿ ವಿಷಯ - ಮುಂತಾದ ಹಲವಾರು ವಿಷಯಗಳ ವಸ್ತುವಿರುವುದನ್ನು ಗಮನಿಸಬಹುದು. ಪದಲಾಲಿತ್ಯ, ಭಾಷಾಶುದ್ಧತೆ, ವಿಷಯವಿವೇಚನೆ - ಈ ಎಲ್ಲ ದೃಷ್ಟಿಯಿಂದ ಸೊಗಸಾದ ಪದ್ಯಗಳಾಗಿವೆ. ಆದ್ದರಿಂದಲೇ ಅನೇಕ ಹಿರಿಯರು ಈ ಕೃತಿಯ ಮೊದಲ ಮತ್ತು ಎರಡನೆಯ ಭಾಗದ ಬಗೆಗೆ ಪ್ರಶಂಸೆ ವ್ಯಕ್ತಪಡಿಸಲು ಸಾಧ್ಯವಾಗಿದೆ. ಕೆಲವು ಪತ್ರಿಕೆಗಳೂ ಸಹ ಮೆಚ್ಚುಗೆ ವ್ಯಕ್ತಪಡಿಸಿವೆ. ಈ ಪುಸ್ತಕದ ಕೊನೆಯಲ್ಲಿರುವ ಅಭಿಪ್ರಾಯಗಳನ್ನು ಓದುಗರ ಅನುಕೂಲಕ್ಕಾಗಿ ಇಲ್ಲಿ ಒದಗಿಸಲಾಗಿದೆ: ನೀತಿಮಂಜರಿ ಕುರಿತಂತೆ :

**NITIMANJARI, PART |**

I have found many stanzas in it which are admirable in matter and manner.

**Mr. H. V. NANJUNDAIYA, M.A., M.L., C.1.E.**

Your Nitimanjari is an excellent work.

**PROFESSOR K. B. PATHAK, B.A.,**

There are thoughts in it so striking and similes so apposite and beautiful that while reading it I have often had to put down the book for a long while to reflect and to admire. Your have undoubtedly enriched the Kanarese literature in a way which may well be imitated by those who are content with relating old stories and expressing worn-out ideas by new collocations of words. I know few works which can surpass your stanzas in their mellifluence. If your translation had been composed a century ago, it would to-day have been regarded as a classic, and I have no doubt it will come to be regarded as such by another generation.

**Mr. H. NARAYANA RAO, B.A., B.L.**

I was simply overjoyed to read your verses. The chaste style the natural foiw and smoothness and the choce expressions clothing excellent ideas, simply charmed me so much so that I thought for the time being I was reading some of those beautiful original wrtiers of the stamp of Abhinava Pampa and others that preceded him.

**Mr. M. S. PUTTANNA, B.A.**

The Kannada reading public cannot be too thankful to you for your work as it gives them an opportunity of acquainting themselves with the teachings of such a great moralist as Avvaiyar. It gives us much pleasure to see that your work is not marred by any of those defects that generally characterize translations. Your verses run smoothly and the language is clear, idiomatic and chaste. In these days it is very rarely that one comes accorss such a really good book.

**Messrs. B. MALAPPA & S. G. NARASIMHACHAR.**

This is indeel a valuable contribution to Kannada literature. Its grammatical accuracy and elegant style indicate the high position the author is likely to occupy among the Kannada poets. We trust that this book, decidedly better than many of its kind now extant in Kannad will be read and enjoyed by all the Kannada speaking people.

**THE EDUCATIONAL REVIEW**

This part of your contribution to Kannada literature is no less valuable than the rest, and I think the Kannada gems into which you have translated the Tamil gems of Tiruvalluvar will be no less enduring and admired than the originals.

**- RAO BAHADUR'S, MANGESA RAO, B.A.**

I have read through some portions and find that it even excels Part-I in point of style and sweet flow.

**- Mr. B. RAMA RAO M.A., LL.B.**

The elegant and chaste style in which it is written and its diction are thoroughly in keeping with the lofty thought. The notes appended at the end of the book are of great help to students. I hope the book will find its way to all the Vernacular Schools in the Province.

**- ANOTHER KANNADA SCHOLAR**

The public of Mysore are indebted to Mr. Narasimhachar for the translation of this masterpiece of Tamil literature. We think that this is the best production of Mr. Narasimhachar and one which entitles him to stand side by side with the greatest of Kanarese poets. It is written in the chaste Jaina style of the Classical period of Kannada literature. A better translator of the Kural into Kannada poetry could not be had. It is a matter for congratulation that Mr. Narasimhachar made it a labour of love and he has eminently succeeded in his instructive and edifying work. It is not only in the field of Kanarese poetry that Mr. Narasimhachar has made a name and fame for himself, but he has also succeeded in establishing a European and American reputation for himself in Archaeology as well as in Oriental scholarship. We look upon the 2nd Part of Nitimanjari as a very valuable addition to Kanarese literaure.

**-SADHVI.**

ಇದು ಒಳ್ಳೇ ನೀತಿಪರವಾಗಿಯೂ ಸುಬೋಧವಾಗಿಯೂ ಉಪದೇಶ ಪರವಾಗಿಯೂ ಇದ್ದು ಸ್ವಲ್ಪ ಬೆಲೆಗೆ ದೊರೆಯುತ್ತಿರುವುದರಿಂದ ಅದನ್ನು ಯಾವತ್ತೂ ಸಂಗ್ರಹಿಸುವುದಕ್ಕೆ ಯೋಗ್ಯ ಗ್ರಂಥವಾಗಿರುತ್ತದೆಂದು ನಾವು ಆಗ್ರಹ ಪೂರ್ವಕವಾಗಿ ಸೂಚಿಸುತ್ತೇವೆ.

**ವಾಗ್ಭೂಷಣ –**

ತಮ್ಮ ಕವಿತಾಶೈಲಿಯು ಕೇಳುವವರಿಗೆ ಕರ್ಣಾವತಂಸವಾಗಿರುವುದು ಮಾತ್ರವಲ್ಲದೆ ತಮ್ಮಿಂದ ರಚಿತವಾದ "ಕವಿಚರಿತೆ', ನೀತಿಮಂಜರಿ' ಎಂಬೀ ಗ್ರಂಥಗಳೆರಡೂ ನಮ್ಮ ಕರ್ಣಾಟಭಾಷಾವನಿತೆಗೆ ನಿತ್ಯಸೌಮಂಗಲ್ಯವನ್ನು ಕಾಪಾಡಿಡತಕ್ಕ ಎರಡು ಕರ್ಣಕುಂಡಲಗಳಾಗಿರುವುವೆಂದೇ ನನ್ನ ಮುಖ್ಯಾಭಿಪ್ರಾಯವು.

**- ಪಂಡಿತ ದೇ. ಅಳಸಿಂಗರಾಚಾರ್ಯ**

ಕರ್ಣಾಟಕ ಭಾಷೆಯ ಪ್ರಾಚೀನತ್ವವನ್ನೂ ಸೊಬಗನ್ನೂ ಪರಿಶೋಧನೆಯಿಂದ ಕಂಡುಹಿಡಿದು ಕನ್ನಡಿಗರಿಗೆ ತೋರಿಸಿ ಆ ಭಾಷಾಸೇವೆಯನ್ನು ಮಾಡಿರುವ ಮಹನೀಯರಾದ ಪಂಡಿತಾಗ್ರೇಸರರಲ್ಲಿ ಮೆ॥ನರಸಿಂಹಾಚಾರ್ಯರವರು ಪ್ರಥಮಸ್ಥಾನವನ್ನು ಪಡೆದಿರುವರು. ಇವರು ರಚಿಸಿರುವ ಕರ್ಣಾಟಕ ಕವಿಚರಿತೆಯೆಂಬ ಒಂದು ಪುಸ್ತಕದಿಂದಲೇ ಇವರ ಅಪಾರವಾದ ಪಾಂಡಿತ್ಯವೂ ಶೋಧನಾಶಕ್ತಿಯೂ ಮತ್ತು ಇವರು ಕನ್ನಡಿಗರಿಗೆ ಮಾಡಿರುವ ಮಹತ್ತರವಾದ ಉಪಕಾರವೂ ಪ್ರಕಾಶಪಡುತ್ತಿರುವುವು. ಇಂತಹ ಪಂಡಿತೋತ್ತಮರು ಕರ್ಣಾಟಕ ಭಾಷೆಯ ಮೇಲಿರುವ ತಮ್ಮ ಅತಿಶಯವಾದ ಪ್ರೀತಿಯ ದೆಸೆಯಿಂದ 'ನೀತಿಮಂಜರಿ'ಯನ್ನು ಬರೆದು ಪ್ರಕಟಿಸಿರುವುದರಿಂದ ಅದು ಅತ್ಯಂತ ಅಮೂಲ್ಯವಾದ ಗ್ರಂಥವೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ. ನಾವು ಓದಿರುವ ಮತ್ತು ಕೇಳಿರುವ ನೀತಿಬೋಧಕವಾದ ಪುಸ್ತಕಗಳ ಪೈಕಿ 'ನೀತಿಮಂಜರಿ'ಗೆ ಸರಿಸಮಾನವಾಗಿ ತೋರುವ ಗ್ರಂಥವು ಬೇರೊಂದಿಲ್ಲವೆಂದು ನಮಗೆ ತೋರುತ್ತದೆ. ಪ್ರತಿ ಶ್ಲೋಕದಲ್ಲಿಯೂ ಸಾಧ್ಯವಾದಷ್ಟು ಸಂಕ್ಷೇಪವಾಗಿರುವ ಭಾಷೆಯಲ್ಲಿ ಅತ್ಯಂತ ವಿಪುಲವಾದ ಅರ್ಥವು ಗರ್ಭೀಕರಿಸಲ್ಪಟ್ಟಿರುವುದು ನಮ್ಮ ಸರ್ಕಾರದವರು ಸರ್ಕಾರಿ ಪಾಠಶಾಲೆಗಳಲ್ಲಿ ನೀತಿಬೋಧನೆಗೆ ಏರ್ಪಾಡು ಮಾಡಿರುವಷ್ಟೆ. ಇದಕ್ಕೆ ಈ ನೀತಿ ಮಂಜರಿಯ ಪುಸ್ತಕಗಳನ್ನೇ ಇಟ್ಟು ಉಳಿದ ನಾನಾ ತರಹೆಯ ಸಾಧಾರಣ ಪುಸ್ತಕಗಳನ್ನು ತೆಗೆದುಹಾಕಿದರೆ ಸರ್ವೋತ್ತಮವಾಗಿರುವುದು.

**- ಒಕ್ಕಲಿಗರ ಪತ್ರಿಕೆ.**

ಉಭಯಭಾಷಾ ಪಂಡಿತೋತ್ತಮರಾದ ಮ॥ ಆಚಾರ್ಯರು ಇದನ್ನು ಕಂದ ಪದ್ಯಗಳಲ್ಲಿ ಬಹು ಮಧುರವಾಗಿಯೂ ಲಲಿತವಾಗಿಯೂ ರಚಿಸಿರುತ್ತಾರೆ. ಇಂಥ ಅಮೂಲ್ಯವೂ ರತ್ನಪ್ರಾಯವೂ ಆದ ಪುಸ್ತಕವನ್ನು ಕನ್ನಡಿಗರು ತರಿಸಿ ಓದಿ ಸಂತೋಷಪಡುವರೆಂದು ಹಾರೈಸುತ್ತೇವೆ.

**- ವೃತ್ತಾಂತ ಪತ್ರಿಕೆ.**

ಅಮೂಲ್ಯವಾದ ಈ ಪುಸ್ತಕವು ನಮ್ಮ ಪುಸ್ತಕ ಭಾಂಡಾಗಾರದಲ್ಲಿ ರತ್ನದಂತೆ ಕಾಪಾಡಲ್ಪಡತಕ್ಕುದಾಗಿದೆ. ಕರ್ಣಾಟಕ ಭಾಷೆಯನ್ನು ಉದ್ಧರಿಸಿದ ಜೈನ ಕವಿಗಳಿಂದೀಚೆಗೆ ಇಂತಹ ಪ್ರಾಚೀನಶೈಲಿಯ ಅತ್ಯುತ್ತಮ ನೀತಿಪದ್ಯಗಳ ಗ್ರಂಥವನ್ನು ಕಂಡುದು ಈಗಲೇ ಎಂದು ಹೇಳಬಹುದು. ಪದಲಾಲಿತ್ಯ, ಭಾಷಾಶುದ್ಧತೆ, ವಿಷಯ

ವಿವೇಚನೆ ಇವುಗಳ ವಿಷಯದಲ್ಲಿ ಬಲು ಚೆನ್ನಾಗಿರುವುದು. ಮಧ್ಯವರ್ಗದ ಮೊದಲು ಅತ್ಯಂತ ಪ್ರೌಢವರ್ಗದ ವಿದ್ಯಾರ್ಥಿಗಳವರೆಗೂ ತಿಳಿದುಕೊಳ್ಳಬೇಕಾದ ಎಷ್ಟೋ ವಿಷಯಗಳು ಲೋಕೋತ್ತರವಾದ ನಿದರ್ಶನಗಳಿಂದ ಪ್ರತಿಪಾದಿಸಲ್ಪಟ್ಟಿರುವುವು. ಪ್ರತಿ ಪಾಠಶಾಲೆಯಲ್ಲಿಯೂ ಪ್ರತಿ ಪರೀಕ್ಷೆಯಲ್ಲಿಯೂ ಪ್ರತಿ ವಿದ್ಯಾರ್ಥಿಯಲ್ಲಿಯೂ ಈ ಪುಸ್ತಕವು ಇದ್ದೇ ತೀರಬೇಕೆಂದು ನಾವು ಒತ್ತಿಯೊತ್ತಿ ಹೇಳುವೆವು.

**-ಮಧುರವಾಣಿ.**

**ನಗೆಗಡಲು**

ಎಲ್ಲರಿಗೂ ಆಪ್ಯಾಯಮಾನವಾದ ಕಥೆಗಳ ಅವಶ್ಯಕತೆಯ ಮನೋಭಾವ ಮನುಷ್ಯನ ಮೂಲಬದುಕಿನಲ್ಲಿಯೇ ಅಂತರ್ಗತವಾಗಿರುವ ವಿಚಾರ. ಜನಪದ ಕತೆಗಳು, ಮಾಟಮಂತ್ರದ ಕತೆಗಳು, ಈಸೋಪಿನ ನೀತಿ ಕಥೆಗಳು, ಪಂಚವಿಂಶತಿ ಕಥೆಗಳು, ಗುಲೆಬಕಾವಲಿ ಕಥೆಗಳು-ಮುಂತಾದವೆಲ್ಲ ಜನಮನದಲ್ಲಿ ಉಳಿದಿರುವಂಥವೇ. ದೇಶೀಯ ಲೇಖಕರೂ ರಂಜನೆ ಪ್ರಧಾನವಾದ ಕಥೆಗಳನ್ನ ಬರೆಯ ತೊಡಗಿದರು. ವಾಚನಾಭಿರುಚಿಯನ್ನು ಹೆಚ್ಚಿಸುವಲ್ಲಿ ಅನುವಾದಗಳತ್ತಲೂ ಗಮನಹರಿಸಿದರು. ವ್ಯಾವಹಾರಿಕವಾಗಿಯೂ ಅದರಿಂದ ಪ್ರಯೋಜನವಿದೆ ಎಂದು ಭಾವಿಸಿದವರು ತೆಲುಗು, ತಮಿಳು ಮತ್ತಿತರ ಭಾಷೆಗಳಿಂದಲೂ ಅನುವಾದ ಮಾಡತೊಡಗಿದರು. ಧೂರ್ಜಟಿಲಕ್ಷ್ಮೀಪತಿ (ಹಂಸವಿಂಶತಿ), ಶೇಷಾಚಲನಾಯುಡು (ಹನ್ನೆರಡು ಜನ ರಾಜಪುತ್ರರ ಕತೆ) - ಮುಂತಾದ ತೆಲುಗು ಲೇಖಕರ ಕೃತಿಗಳನ್ನು ಅನುವಾದಿಸಿದರು. ಕತೆ ಸೊಗಸಾಗಿದ್ದರೆ ಸಾಕು ಅದರ ಕರ್ತೃ ಯಾರಾದರೇನು ಎನ್ನುವಷ್ಟರ ಮಟ್ಟಿಗೆ ಆಯಿತು. ತಮಿಳಿನಿಂದ ಇಂತಹ ಕಥಾ ಪರಂಪರೆ ಹರಿಯಿತು. ತಾಂಡವರಾಯ ಮೊದಲಿಯಾರನ ಕಥಾಮಂಜರಿ (೧೮೬೯) ಮುಖ್ಯವಾದುದು. ಕ್ಯಾರೆಟ್ ಇದನ್ನ ಸರಿಪಡಿಸಿ ಮತ್ತೊಮ್ಮೆ ಬೆಂಗಳೂರು ಸರಕಾರಿ ಮುದ್ರಣಾಲಯದಿಂದ ೧೮೬೬ರಲ್ಲಿ ಪ್ರಕಟಿಸಿದ. “ಹದಿನೇಳನೇ ಶತಮಾನದ ಬೆಸ್ಕಿಯು ಬರೆದ ಪರಮಾರ್ಥ ಗುರುವಿನ ಕಥೆಯ ಎರಡು ಆವೃತ್ತಿಗಳು ಕಳೆದ ಶತಮಾನದಲ್ಲಿ ಪ್ರಕಟವಾದುವು. ಜೆ.ಬ್ಯಾರಿಲ್ ಕನ್ನಡದ ಜೊತೆಗೆ ಇಂಗ್ಲಿಷ್ ಲ್ಯಾಟಿನ್ ಅನುವಾದಗಳನ್ನು ತನ್ನ ಪುಸ್ತಕದಲ್ಲಿ ಸೇರಿಸಿದನು (೧೮೭೭). ಮೂರ್ಖಗುರು, ಕಡುಮೂರ್ಖ ಶಿಷ್ಯರಿಗೆ ಸಂಬಂಧಿಸಿದ ಈ ಪುಸ್ತಕವನ್ನು ಆರ್. ನರಸಿಂಹಾಚಾರ್ಯರು ಕನ್ನಡದಲ್ಲಿ ತಂದರಷ್ಟೆ (ನಗೆಗಡಲು). ಹಾಗೆ ಮಾಡುವಾಗ ಕೆಲವು ಹೊಸಅಂಶಗಳನ್ನು ಸೇರಿಸಿದ್ದಾರೆ. ಅಲ್ಲಲ್ಲಿ ಮಾರ್ಪಾಟು ಮಾಡಿಕೊಂಡಿದ್ದಾರೆ. ಗುರುವಿನ ಹೆಸರು 'ಗಾಂಪರೊಡೆಯ'ನೆಂಬ ಅಚ್ಚಕನ್ನಡ ರೂಪವನ್ನು ತಾಳಿದೆ. ಅಲ್ಲಲ್ಲಿ ಕಂದಪದ್ಯಗಳು, ಸಂಸ್ಕೃತಶ್ಲೋಕಗಳು ಮತ್ತು ಗಾದೆಮಾತುಗಳು ಸೇರಿಕೊಂಡಿವೆ. ಮಹತ್ವದ್ದೆಂದರೆ ಒಂದೆರಡು ಹೊಸ ಕತೆಗಳನ್ನು ಸೃಷ್ಟಿಸಿದುದು. ಕೃತಿಯ ಆರಂಭದಲ್ಲಿ ಇರುವ 'ಮೂರ್ಖರು ಯಾರು' ಎಂಬ ಕಥಾಪ್ರಸಂಗವು ಮೂಲದಲ್ಲಿ ಇಲ್ಲ. ಇನ್ನೆರಡು ಹೊಸಕತೆಗಳಲ್ಲಿ 'ಹಸುವನ್ನು ಕೊಂಡ ಕತೆ'ಯು ಅಚ್ಚಗನ್ನಡ ಶಬ್ದವಾದ 'ಕರೆ' (ಹಾಲು ಹಿಂಡುವುದು, ಕರೆಯುವುದು) ಎಂಬುದನ್ನು ಶಿಷ್ಯರು ಅಪಾರ್ಥ ಮಾಡಿಕೊಂಡಿದ್ದನ್ನು ವಿವರಿಸುತ್ತದೆ. ಪರಿಶುದ್ಧ ಹಾಸ್ಯದ ಈ ಕೃತಿಯನ್ನು ಮೆಚ್ಚಿದವರ ಸಂಖ್ಯೆ ಅಪಾರವಾದುದು. ಅಲ್ಲದೆ ೨೦ನೇ ಶತಮಾನದಲ್ಲಿ ಈ ಬಗೆಯ

ಕಥನವನ್ನು ಕೆಲವರು ಮುಂದುವರಿಸಿದುದೂ ಇದೆ (ಉದಾಹರಣೆಗೆ: ನಾ. ಕಸ್ತೂರಿ, ದಾಶರಥಿ ದೀಕ್ಷಿತ ಮತ್ತು ರಾ.ಶಿ.) (ಹೊಸಗನ್ನಡ ಅರುಣೋದಯ, ಪು, ೫೨೧).

೧೯೭೭ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾಗಿರುವ 'ನಗೆಗಡಲು' ಹಾಸ್ಯದ ಹೊತ್ತಗೆಯ ಬಗೆಗೆ ರಂ. ಶ್ರೀ. ಮುಗಳಿಯವರು ಮುನ್ನುಡಿಯಲ್ಲಿ ಈ ರೀತಿ ಅಭಿಪ್ರಾಯಪಟ್ಟಿದ್ದಾರೆ: 'ಪ್ರಾಕ್ತನ ವಿಮರ್ಶವಿಚಕ್ಷಣ, ರಾವ್‌ಬಹದೂರ್ ಎಂಬ ಬಿರುದುಗಳನ್ನು ಸಂಪಾದಿಸಿದ 'ಕರ್ನಾಟಕ ಕವಿಚರಿತೆ'ಯ ಮೂರು ಸಂಪುಟಗಳನ್ನು ಸಿದ್ಧಪಡಿಸಿದ, ಕರ್ನಾಟಕದ ಸಾಹಿತ್ಯ ಚರಿತ್ರೆ, ಭಾಷಾ ಚರಿತ್ರೆಗಳನ್ನು ಪ್ರಸಿದ್ಧಪಡಿಸಿದ ಆರ್. ನರಸಿಂಹಾಚಾರ್ಯರು 'ಹಾಸ್ಯರಸ'ಕ್ಕೆ ಮೀಸಲಾದ "ನಗೆಗಡಲನ್ನು ಹರಿಸಿದರು ಎಂದರೆ ಆಶ್ಚರ್ಯಕರವಾದ ಸಂಗತಿಯೇ. ಸಂಶೋಧನೆ ಮತ್ತು ವಿಮರ್ಶೆಯಂಥ ಗಂಭೀರ ವಿಷಯಗಳ ಅಭ್ಯಾಸದ ನಡುವೆ ಈ ಹಾಸ್ಯದ ಬರವಣಿಗೆ ಅವರ ಮನೋಭಾವವನ್ನು ವ್ಯಕ್ತಪಡಿಸುತ್ತದೆ. ರಾ. ನರಸಿಂಹಾಚಾರ್ಯರು ನೀತಿಮಂಜರಿ, ಶಾಸನ ಪದ್ಯಮಂಜರಿ ಎಂಬ ಗಂಭೀರ ವಿಷಯಗಳನ್ನು ಕುರಿತ ಗ್ರಂಥಗಳನ್ನು ರಚಿಸಿದ್ದಾರೆ. ಅಂದರೆ ಅವರ ಮನಸ್ಸಿನ ವೈವಿಧ್ಯವನ್ನು, ವೈಶಾಲ್ಯವನ್ನು ಗುರುತಿಸಬಹುದು.

"ನಗೆಗಡಲು' ಕನ್ನಡದಲ್ಲಿ ಮೊದಲನೆಯ ಹಾಸ್ಯದ ಹೊತ್ತಿಗೆ, ಅವರು ಸೃಷ್ಟಿಸಿದ ಗಾಂಪರು ಮತ್ತು ಅವರ ಗುರುಗಳು ಕನ್ನಡಿಗರ ಜೀವನದಲ್ಲಿ ಬೆರೆತು ಹೋಗಿದ್ದಾರೆ. ಆ ಗುಂಪಿನ ಸದಸ್ಯರ ಹೆಸರುಗಳು ಎಷ್ಟೋ ವೇಳೆ ಅನ್ವರ್ಥವಾಗಿ ಬಳಕೆಗೆ ಬಂದುಬಿಟ್ಟಿವೆ. ಅವರ ಪರಿಚಯವನ್ನು ಈಗ ಮತ್ತೆ ಜನಕ್ಕೆ ಮಾಡಿಕೊಡಲಾಗುತ್ತದೆ. "ನಗೆಗಡಲು'ನ್ನು ಮನರ್ಮುದ್ರಿಸಲು ಅನುಮತಿಯಿತ್ತ ದಿ||ರಾ.ನರಸಿಂಹಾಚಾರ್ಯರ ಮಕ್ಕಳಾದ ಶ್ರೀ ತಿರುನಾರಾಯಣ ಅಯ್ಯಂಗಾರರಿಗೆ ನಮ್ಮ ಅನಂತ ಕೃತಜ್ಞತೆಗಳು'.

ಪುಸ್ತಕ ಜನಪ್ರಿಯವಾಗಿ ಕನ್ನಡಿಗರ ಸ್ವಾಗತವನ್ನು ಪಡೆಯುತ್ತಿದೆ ಎಂದು ನಂಬಲಾಗಿದೆ. ಪುಸ್ತಕದಲ್ಲಿ ಒಂದೊಂದನ್ನು 'ಪ್ರಕರಣ'ವೆಂದೇ ಕರೆಯಲಾಗಿದೆ. ಅವತರಣಿಕೆ, ಹೊಳೆಯನ್ನು ದಾಟಿದುದು, ಕುದುರೆ ಮೊಟ್ಟೆಯನ್ನು ಕೊಂಡುಕೊಂಡುದು, ಹಸುವನ್ನು ಕೊಂಡುಕೊಂಡುದು, ಬಾಡಿಗೆಯೆತ್ತನ್ನು ಹತ್ತಿಕೊಂಡು ಹೋದುದು, ಕುದುರೆಯನ್ನು ಹಿಡಿಯುವುದಕ್ಕೆ ಗಾಳಹಾಕಿದುದು, ಕುದುರೆಯನ್ನು ಏರಿಕೊಂಡು ಹೋದುದು, ಬ್ರಾಹ್ಮಣನು ಜೋಯಿಸ ಹೇಳಿದುದು, ಗುರುಗಳು ಕುದುರೆಯ ಮೇಗಣಿಂದ ಬಿದ್ದುದು, ಗುರುಗಳನ್ನು ಒಪ್ಪಮಾಡಿದುದು - ಹೀಗೆ ಹತ್ತು ಪ್ರಕರಣಗಳಿವೆ.

ಎಪ್ಪತ್ತಾರು ಪುಟಗಳ ಈ ಪುಸ್ತಕದಲ್ಲಿ ಗಾಂಪರ ಶಿಷ್ಯರ ಕತೆ ಆರಂಭವಾಗುವುದೇ ಒಂದು ವಿಶಿಷ್ಟ ರೀತಿಯಲ್ಲಿ : "ಕೃಷ್ಣಾನದಿಯ ತಡಿಯಲ್ಲಿ ಗಾಂಪರೊಡೆಯರು ಎಂಬ ಹೆಸರುಳ್ಳ ಗುರುಗಳೊಬ್ಬರು ಒಂದು ಮಠವನ್ನು ಮಾಡಿಕೊಂಡು ಅದರಲಿ ವಾಸಮಾಡುತ್ತಿದ್ದರು. ಅವರ ಮಠದಲ್ಲಿ ಹೇಳಿದ ಕೆಲಸವನ್ನು ಮಾಡುತ್ತ ಮರುಳ, ಮಂಕ, ಮುಲ್ಡಾಳ, ಮಡೆಯ, ಮಡ್ಡಿ ಎಂಬ ಬಿರುದುಗಳನ್ನು ಹೊಂದಿದ ಐವರು ಶಿಷ್ಯರಿದ್ದರು. ಈ ಬಿರುದುಗಳು ಇವರಿಗೆ ಸುಮ್ಮನೆ ಬಂದುವೆಂದು ತಿಳಿಯಕೂಡದು", ಹೀಗೆ ಆರಂಭಗೊಳ್ಳುವ ಕಥನದಲ್ಲಿ ಬಿರುದುಗಳನ್ನು ಹೊಂದಿದ ಈ ಐವರೂ ಗಾಂಪರೊಡೆಯರಲ್ಲಿ ಬಂದು ಸೇರಿ ಆಪ್ತಶಿಷ್ಯರಾಗಿಬಿಡುತ್ತಾರೆ. ಇವರ ಮತ್ತಷ್ಟು ಮೂರ್ಖತನಗಳು

ಮುಂದಿನ ಪ್ರಕರಣಗಳಲ್ಲಿ ಅಚ್ಚುಕಟ್ಟಾಗಿ ವ್ಯಕ್ತವಾಗುತ್ತವೆ. ಗಾಂಪರೊಡೆಯರ ಶಿಷ್ಯರಾದ ಮಂಕ, ಮಡಿಯ, ಮುಲ್ಲಾಳ, ಮಡ್ಡಿಯೆಂಬುವರ ಜೀವನಚಿತ್ರವನ್ನು ಕಟ್ಟಿಕೊಡುವಲ್ಲಿ ಇಲ್ಲಿಯ ಕಥೆಗಳು ಯಶಸ್ಸನ್ನು ಹೊಂದುತ್ತವೆ. ಇವುಗಳ ಮೂಲಕ ರಾ. ನ. ಅವರ ಹಾಸ್ಯ ಮನೋಭಾವ ವ್ಯಕ್ತವಾಗದಿರದು.

ಐವರು ಶಿಷ್ಯರು ತಮ್ಮ ಗುರುಗಳ ಸಮ್ಮುಖದಲ್ಲಿ ತಾನೇ ಹೆಚ್ಚು ಮೂರ್ಖನೆಂದು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ವಾದಿಸುತ್ತಿರುತ್ತಾರೆ. ಅದರಲ್ಲಿ ಮೊದಲನೆಯವನು ತನ್ನ ಸಾಹಸಗಾಥೆಯನ್ನು ವರ್ಣಿಸುವ ರೀತಿ ಇದು : “ನನಗೆ ಇಬ್ಬರು ಹೆಂಡಿರು ನಾನು ಅವರಿಬ್ಬರಲ್ಲಿಯೂ ಎಳ್ಳಷ್ಟು ಭೇದವಿಲ್ಲದೆ ಒಂದೇ ರೀತಿಯಾದ ಪ್ರೇಮವನ್ನು ತೋರಿಸಿ ಅನುಕೂಲವಾಗಿದ್ದೆನು. ಒಂದು ದಿನ ನಾನು ಇಬ್ಬರ ಹೆಂಡಿರ ಮೇಲೆಯೂ ಕೈಗಳನ್ನು ಹಾಕಿಕೊಂಡು ನಿದ್ದೆ ಮಾಡುತ್ತಿದ್ದಾಗ ಒಂದು ಇಲಿ ದೀಪದಲ್ಲಿ ಉರಿಯುತ್ತಿದ್ದ ಬತ್ತಿಯನ್ನು ಕಚ್ಚಿಕೊಂಡು ಮೇಲಕ್ಕೆ ಹೋಯಿತು. ಬತ್ತಿಯ ಜ್ವಾಲೆ ತಗುಲಿ ಬಾಯಿಸುಡಲು, ಇಲಿ ಬಾಯಿ ತೆರೆದು ಬತ್ತಿಯನ್ನು ಕೆಳಕ್ಕೆ ಕೆಡಹಿತು. ಉರಿವ ಬತ್ತಿ ನನ್ನ ಕಣ್ಣ ಮೇಲೆ ಸರಿಯಾಗಿ ಗುರಿಕಟ್ಟಿ ಹಾಕಿದಂತೆ ಬಿದ್ದಿತು. ನಾನು ಅದನ್ನು ನಂದಿಸುವುದಕ್ಕೆ ಯಾವ ಕೈಯೆತ್ತಿದರೂ ಹೆಂಡರಿಗೆ ಭೇದ ಮಾಡಿದಂತಾಗುವುದು. ಹಾಗಿಲ್ಲದೆ ಎರಡು ಕೈಗಳನ್ನು ಎತ್ತಿದರೆ ನಿದ್ರಾಭಂಗವಾಗುವುದು ಎಂದೆಣಿಸಿ ಸುಮ್ಮನೆ ನೋವನ್ನು ಸೈರಿಸಿಕೊಂಡಿದ್ದೆನು. ಅದರಿಂದ ಕಣ್ಣು ಡೊಳ್ಳಾಯಿತು. ಆಮೇಲೆ ನನಗೆ ದೊಳ್ಳೆಗಣ್ಣು ಎಂಬ ಹೆಸರು ಬಂದಿತು. ಇದೇ ನನ್ನ ಮೂರ್ಖತನ”. ರಾ.ನರಸಿಂಹಾಚಾರ್ಯ ಅವರ ಸೃಜನಶೀಲ ಪ್ರತಿಭೆಗೆ ಈ ನಿರೂಪಣ ಕ್ರಮ ತಕ್ಕ ಸಾಕ್ಷಿಯಾಗಿದೆ. ಹಾಸ್ಯಭರಿತವಾದ ಶೈಲಿ ಅವರ ಉಳಿದ ಬರಹಗಳಿಗಿಂತ ಭಿನ್ನವಾಗಿ ಕಂಡುಬರುತ್ತದೆ.

## ಆಕೃತಿ ಮತ್ತು ಬಣ್ಣ

ಮೈಸೂರು ಸರಕಾರದ ವಿದ್ಯಾ ಇಲಾಖೆಯ ವತಿಯಿಂದ ೧೯೦೦ರಲ್ಲಿ ಪ್ರಕಟವಾದ ಪುಸ್ತಕ 'ಆಕೃತಿ ಮತ್ತು ಬಣ್ಣ ಇವನ್ನು ಕುರಿತು ಸರಳ ಪಾಠಗಳು' (Essay Lessons on Form and Color), ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳನ್ನ ಗಮನದಲ್ಲಿರಿಸಿಕೊಂಡು ಸಿದ್ಧಮಾಡಿದ ಪುಸ್ತಕವಿದ್ದಂತಿದೆ. ಇದರಲ್ಲಿ ಆಕೃತಿ, ಬಣ್ಣ ಎಂಬ ಎರಡು ಭಾಗಗಳಿವೆ. 'ಆಕೃತಿ' ಭಾಗದಲ್ಲಿ ೧೭ ಪ್ರಕರಣಗಳೂ 'ಬಣ್ಣ' ಭಾಗದಲ್ಲಿ ೧೭ ಪ್ರಕರಣಗಳೂ ಇದ್ದು ರೇಖಾಗಣಿತ ಮತ್ತು ಚಿತ್ರಲೇಖನದ ತಿಳುವಳಿಕೆಗೆ ಸಂಬಂಧಿಸಿದ ಮಾಹಿತಿಯನ್ನು ಒಳಗೊಂಡಿದೆ. ರೇಖಾಗಣಿತದ ಮೂಲಾಂಶಗಳನ್ನು ಪರಿಚಯಿಸುವುದರ ಜೊತೆಗೆ ಚಿತ್ರಲೇಖನದ ಸಂದರ್ಭದಲ್ಲಿ ಬಣ್ಣಗಳ ಬಗೆಗೆ ತಿಳುವಳಿಕೆ ಮೂಡಿಸಲಾಗಿದೆ. ಮುಖ್ಯವಾಗಿ ಮಿಶ್ರಛಾಯೆಯ ಬಣ್ಣಗಳ ಬಗೆಗೆ ಪುಸ್ತಕದ ಕೊನೆಯಲ್ಲಿ ಪಾರಿಭಾಷಿಕ ಪದಗಳನ್ನು ಅಕಾರಾದಿಯಾಗಿ ಒದಗಿಸಲಾಗಿದೆ. ಕನ್ನಡ ಶಬ್ದಗಳಿಗೆ ಸಂವಾದಿಯಾದ ಇಂಗ್ಲಿಷ್ ಪದಗಳನ್ನು ನೀಡುವುದನ್ನು ರಾ.ನ. ಮರೆತಿಲ್ಲ. ಮಕ್ಕಳಿಗಾಗಿ ಬರೆದದ್ದರಿಂದ ಬಹುಬೇಗ ಅವರ ಮನಸ್ಸಿಗೆ ನಾಟಿಸುವ ಉದ್ದೇಶದಿಂದ ಪ್ರಶ್ನೋತ್ತರ ಮಾದರಿಯನ್ನ ಅನುಸರಿಸಿರುವುದು ಗೋಚರವಾಗುವ ಅಂಶ. ಇದಕ್ಕೆ ಪೂರಕವಾಗಿ ನಕ್ಷೆಗಳನ್ನ ಒದಗಿಸಲಾಗಿದೆ. ಅಭಿವ್ಯಕ್ತ ಕ್ರಮ ಸರಳ ಮತ್ತು ನೇರವಾಗಿದೆ. “ಆಚಾರ್ಯರು ತಮ್ಮ ಎಫ್.ಎ. ತರಗತಿಯಲ್ಲಿ

ವಿಜ್ಞಾನದ ವಿದ್ಯಾರ್ಥಿಗಳಾಗಿದ್ದುದು ಆರಂಭದ ವರ್ಷಗಳಲ್ಲಿ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಬೋಧಿಸಿದುದು ಈ ಬಗೆಯ ಪುಸ್ತಕ ರಚನೆಗೆ ಸಹಾಯವಾಗಿರಬಹುದು. ಅವರು ಎಂ.ಎ. ಪದವೀಧರರಾದ ಮೇಲೆ ಈ ಪುಸ್ತಕವನ್ನು ರಚಿಸಿ ಪ್ರಕಟಿಸಿದರೆನ್ನುವುದು ಸ್ವಾರಸ್ಯದ ಸಂಗತಿ" (ಪ್ರಾಕ್ತನ xxxiv).

## ಕಾವ್ಯಾವಲೋಕನ :

ನಾಗವರ್ಮನ 'ಕಾವ್ಯಾವಲೋಕನಂ' ಲಕ್ಷಣಗ್ರಂಥ. ಅವನ ಕೃತಿಗಳಲ್ಲೆಲ್ಲ ಪ್ರಸಿದ್ಧವಾದುದು. ೧೯೦೩ರಲ್ಲಿ ಇದರ ಪ್ರಥಮ ಮುದ್ರಣ ಬೆಂಗಳೂರಿನಿಂದ ಹೊರಬಂತು. ಆರ್.ನರಸಿಂಹಾಚಾರ್ಯರು ನಾಲ್ಕು ಹಸ್ತಪ್ರತಿಗಳನ್ನು ಬಳಸಿ ಇದರ ಮೊದಲ ಪರಿಷ್ಕರಣ ರೂಪವನ್ನ ನೀಡಿದರು. ತಾವು ಬಳಸಿಕೊಂಡ ಹಸ್ತಪ್ರತಿಗಳ ಉಪಯುಕ್ತತೆಯನ್ನ ಕುರಿತಂತೆ ಆರ್. ನರಸಿಂಹಾಚಾರ್ಯರ ವ್ಯಕ್ತಪಡಿಸಿದ್ದಾರೆ.

"ನರಸಿಂಹಾಚಾರ್ಯರು ತಾವು ಬಳಿಸಿದ ಹಸ್ತಪ್ರತಿಗಳಿಗೆ ಸಂಕೇತಗಳ ಕೊಟ್ಟಿಲ್ಲ. ಅಲ್ಲದೆ ಪಾಠಾಂತರಗಳನ್ನು ಸೂಚಿಸುವಾಗಲೂ ಅವು ಯಾವ ಯಾವ ಪ್ರತಿಯದು ಎನ್ನುವುದನ್ನು ತಿಳಿಸಿಲ್ಲ. ಆದರೆ ಪಾಠಾಂತರಗಳನ್ನು ಅಡಿಟಿಪ್ಪಣಿಯಲ್ಲಿಯೇ ಸೂಚಿಸಿರುವುದು ಒಂದು ತೃಪ್ತಿಕರ ವಿಷಯ. 'ಕಾವ್ಯಾವಲೋಕನದ ಉದಾಹರಣ ಪದ್ಯಗಳ ಆಕರಗ್ರಂಥಗಳಲ್ಲಿ ಕಂಡುಬರುವ ಆಯಾಪದ್ಯದ ಪಾಠಾಂತರಗಳನ್ನು ಪರಿಶಿಷ್ಟ ಭಾಗದಲ್ಲಿ ಕೊಟ್ಟಿದೆ. ಶ್ರೀಯುತರು ಪ್ರಾಯಃ ಆಧಾರ ಪ್ರತಿಯೊಂದನ್ನು ಇಟ್ಟುಕೊಂಡು, ಉಳಿದ ಪ್ರತಿಗಳ ಸಹಾಯಪಡೆದು, ಎಲ್ಲ ಪ್ರತಿಗಳ ಉತ್ತಮಾಂಶಗಳ ಒಂದು ಸಮ್ಮಿಶ್ರ ಪರಿಷ್ಕರಣವನ್ನು ಸಿದ್ಧಪಡಿಸಿರಬಹುದು. ಅವರು ಹಳಗನ್ನಡ ಭಾಷೆ ಸಾಹಿತ್ಯಗಳ ಉತ್ಕೃಷ್ಟ ವಿದ್ವಾಂಸರಾಗಿದ್ದುದರಿಂದ ಅವರ ಪರಿಷ್ಕರಣದ ಪಾಠಶುದ್ಧಿ ಪ್ರಮಾಣಭೂತವಾದುದಾಗಿದೆ; ಇತರರಿಗೆ ಮಾದರಿಯಾಗಬಲ್ಲುದಾಗಿದೆ. ಉದಾಹರಣೆಗೆ "ಎನಗೆ ಕೂರ್ಪುದನಾ ಘಟ ಸಂಭವಂ' ಎಂಬಂತಹ (ಪು. ೧೫೫) ಪದ್ಯಗಳಲ್ಲಿ ಅವರ ಭಾಷಾಜ್ಞಾನ ಹೇಗೆ ಕೆಲಸಮಾಡಿದೆ ಎಂಬುದನ್ನು ಗಮನಿಸಬಹುದು. ಶಬ್ದರೂಪಗಳನ್ನು ಮುದ್ರಿಸುವಲ್ಲಿ ಮಾತ್ರ ಅವರು ರೈಸ್ ಅವರ ಹಾಗೆಯೇ ಶಾಸನಗಳಲ್ಲಿ ಹಾಗೂ ಹಸ್ತಪ್ರತಿಗಳಲ್ಲಿ ಬರೆದಿರುವಂತೆ ದ್ವಿತ್ವರೂಪದಲ್ಲಿ ಸರೇಫ ಶಬ್ದಗಳನ್ನು ಮುದ್ರಿಸುವ ಪರಿಪಾಠಿಯನ್ನೇ ಮುಂದುವರಿಸಿದ್ದಾರೆ." (ಉದ್ಧೃತ : ಪ್ರಾಕ್ತನ, ಪುಟ xxi)

ಶ್ರೀ ವರ್ದ್ಧಮಾನನಾನತ |
ದೇವಾಧಿಪಮಕುಟಕೋಟಿ ಘಟ್ಟಿತ ಚರಣಂ ||
ಕೇವಲ ಏಬೋಧಲೋಚನ |
ನಾವಗಮೊಲ್ದೀಗೆ ಕಾವ್ಯದೊಳ್ ನಮಗರೆವಂ ||

ಪರಮಾಗಮಮೂರ್ತಿ ಚರಾ |
ಚರಲೋಕಾಲೋಕ ಸಂಪ್ರದಾಯಿನಿ ವಿಬುಧೋ||

ತ್ಕರ ಮಾನಸಾಬ್ಜ ವಾಸಿನಿ ॥

ಸರಸ್ವತೀದೇವಿ ವರದೆಯಕ್ಕೆಮಗೆಂದುಂ॥

ಹೀಗೆ ಆರಂಭವಾಗುವ ನಾಗವರ್ಮ ಕವಿ ವಿರಚಿತ ಕಾವ್ಯಾವಲೋಕನಂನಲ್ಲಿ 'ಶಬ್ದಸ್ಮೃತ್ಯಧಿಕರಣಂ, ಕಾವ್ಯಮಲವ್ಯಾವೃತ್ತಧಿಕರಣಂ, ಗುಣವಿವೇಕಾಧಿಕರಣಂ, ರೀತಿಕ್ರಮರಸನಿರೂಪಣಾಧಿಕರಣಂ, ಕವಿಸಮಯಾಧಿಕರಣಂ ಎಂದು ಐದು ಅಧಿಕರಣಗಳಿವೆ. ಶಬ್ದಸ್ಮೃತಧಿಕರಣದಲ್ಲಿ ಸಂಜ್ಞಾ ಸಂಧಿ, ನಾಮ, ಸಮಾಸ, ತದ್ಧಿತ, ಆಖ್ಯಾತ ಪ್ರಕರಣಗಳಿವೆ. ಕಾವ್ಯಾಮಲವ್ಯಾವೃತ್ತಧಿಕರಣದಲ್ಲಿ ಪದಪದಾರ್ಥ ಸಂಧಿದೋಷವಿನಿಶ್ಚಯ ಪ್ರಕರಣ, ವಾಕ್ಯವಾಕ್ಯಾರ್ಥ ದೋಷಾನುಕೀರ್ತನ ಪ್ರಕರಣ - ಎಂಬ ಎರಡು ಪ್ರಕರಣಗಳು ಗುಣವಿವೇಕಾಧಿಕರಣದಲ್ಲಿ ಮಾರ್ಗ ವಿಭಾಗದರ್ಶನ, ಶಬ್ದಾಲಂಕಾರನಿರ್ಣಯ ಅರ್ಥಾಲಂಕಾರ ಪ್ರಕರಣ - ಎಂಬ ಮೂರು ಪ್ರಕರಣಗಳಿವೆ. ನಾಲ್ಕನೇ ಅಧಿಕರಣದಲ್ಲಿ ರೀತಿ, ರಸ ಎಂಬ ಎರಡು ಪ್ರಕರಣಗಳು, ಐದನೇ ಅಧಿಕರಣದಲ್ಲಿ ಅಸದಾಖ್ಯಾತಿ ಪ್ರಕರಣಂ, ಸದಕೀರ್ತನ ಪ್ರಕರಣಂ, ನಿಯಮಾರ್ಥ ಪ್ರಕರಣಂ, ಐಕ್ಯ ಪ್ರಕರಣಂ - ಎಂಬ ನಾಲ್ಕು ಪ್ರಕರಣಗಳಿವೆ. 'ಕಾವ್ಯಾವಲೋಕನಂ' ಅಂತ್ಯಗೊಂಡಿರುವುದು ಹೀಗೆ :

ಕಂ ॥ ಛಂದೋ ವಿಚಿತಿಯಲಂಕೃತಿ ।
ಸದಭಿಧಾನ ಕೋಶಮೆಂಬಿವು ವಾಕ್ ಶ್ರೀ ॥
ಸುಂದರಿಗೆ ರತ್ನಮಂಡನ ।
ದಂದದೊಳಿರ್ದ್ದಮವು ನಾಗವರ್ಮನ ಕೃತಿಗಳ್ ॥

ಇದು ಸಕಲ ಸುಕವಿ ಜನ ಮನಸ್ಸರೋಜನೀ
ರಾಜಹಂಸಾಯ ಮಾವಾನೂನ ಕವಿತಾಗುಣೋ
ದಯಶ್ರೀಮನ್ನಾಗವರ್ಮ್ಮ ಪ್ರಣೀತಮಪ್ಪ
ಕಾವ್ಯಾವಲೋಕನದೊಳ್ ಕವಿಸಮಯವೆಂಬುದು
ಪಂಚಮಾಧಿಕರಣಂ

ನಾಗವರ್ಮನು ಕಾವ್ಯಾವಲೋಕನದಲ್ಲಿ ಉದಾಹರಿಸಿರುವ ಪದ್ಯಗಳಲ್ಲಿ ಹಲವು ಇತರ ಗ್ರಂಥಗಳಲ್ಲಿ ದೊರೆಯುತ್ತವೆ. ಆ ಗ್ರಂಥಗಳಲ್ಲಿಯ ಪಾಠಾಂತರಗಳ ಪಟ್ಟಿಯನ್ನು ಕೊನೆಯಲ್ಲಿ ನೀಡಲಾಗಿದೆ. ಪರಿಶಿಷ್ಟ-೧ರಲ್ಲಿ ಕಾವ್ಯಾವಲೋಕನದಲ್ಲಿಯ ಸೂತ್ರೋದಾಹರಣೆಗಳಿಗೆ ಸಂವಾದಿಗಳಾದ ಸಂಸ್ಕೃತದ ಅಲಂಕಾರ ಗ್ರಂಥಗಳಲ್ಲಿಯ ಸೂತ್ರೋದಾಹರಣೆಗಳನ್ನು ಅಂದರೆ ದಂಡಿ, ರುದ್ರಟ, ವಾಮನ, ಭಾಮಹ - ಮೊದಲಾದ ಅಲಂಕಾರ ಗ್ರಂಥಗಳಲ್ಲಿಯ ಸೂತ್ರೋದಾಹರಣೆಗಳನ್ನು ನೀಡಲಾಗಿದೆ. ಪರಿಶಿಷ್ಟ-೨ರಲ್ಲಿ ನಾಗವರ್ಮನ ಸೂತ್ರೋದಾಹರಣೆಗಳಿಗೆ ಸಂವಾದಿಗಳಾದ ಕವಿರಾಜಮಾರ್ಗದಲ್ಲಿನ ಸೂತ್ರೋದಾಹರಣೆಗಳಿವೆ. ಕೆಲವು ಕಡೆ ನೃಪತುಂಗ, ನಾಗವರ್ಮ - ಇವರಿಬ್ಬರೂ ದಂಡಿಯ ಸೂತ್ರೋದಾಹರಣೆಗಳನ್ನು ಕನ್ನಡಕ್ಕೆ ಪರಿವರ್ತನೆ

ಮಾಡಿರುವುದನ್ನು ಗುರುತಿಸಲಾಗಿದೆ. ಪರಿಶಿಷ್ಟ ಮೂರರಲ್ಲಿ ಕಾವ್ಯಾವಲೋಕನದ ಸೂತ್ರಗಳಿಗೆ ಸಂವಾದಿಗಳಾದ ಕರ್ಣಾಟಕ ಭಾಷಾಭೂಷಣ ಶಬ್ದಮಣಿದರ್ಪಣ - ಇವುಗಳಲ್ಲಿಯ ಸೂತ್ರಗಳ ವಿವರ ನೀಡಲಾಗಿದೆ (ಸಂಖ್ಯೆಗಳನ್ನ ಸೂಚಿಸಲಾಗಿದೆ).

ಪರಿಶಿಷ್ಟ ನಾಲ್ಕರಲ್ಲಿ ಕಾವ್ಯಾವಲೋಕನದಲ್ಲಿಯ ಉದಾಹರಣ ಪದ್ಯಗಳೊಳಗೆ ಕರ್ಣಾಟಕ ಭಾಷಾಭೂಷಣ, ಶಬ್ದಮಣಿದರ್ಪಣ - ಇವುಗಳಲ್ಲಿ ಸಂಪೂರ್ಣವಾಗಿ ಅಥವಾ ಖಂಡಶಃ ಉದಾಹರಿಸಲ್ಪಟ್ಟಿರುವ ಪದ್ಯಗಳ ವಿವರವಿದೆ. ಪರಿಶಿಷ್ಟ ಐದರಲ್ಲಿ ಕಾವ್ಯಾವಲೋಕನದಲ್ಲಿ ಪಂಪ, ರನ್ನ, ಪೊನ್ನ, ಗುಣವರ್ಮ - ಮೊದಲಾದ ಕನ್ನಡ ಕವಿಗಳ ಗ್ರಂಥಗಳಿಂದ ಉದಾಹೃತವಾಗಿರುವ ಪದ್ಯಗಳ ವಿವರ ನೀಡಲಾಗಿದೆ. ಪರಿಶಿಷ್ಟ ಆರರಲ್ಲಿ ಕೆಲವು ಪದ್ಯಗಳಿಗೆ ಮಾತೃಕೆಗಳಾದ ಅಥವಾ ಸಂವಾದಿಗಳಾದ ಸಂಸ್ಕೃತ ಶ್ಲೋಕಗಳು ಮತ್ತು ಕನ್ನಡ ಪದಗಳನ್ನು ಸೂಚಿಸಲಾಗಿದೆ. ಕೊನೆಯಲ್ಲಿ ಕಾವ್ಯಾವಲೋಕನದಲ್ಲಿ ಬರುವ ಸಾಂಕೇತಿಕ ಶಬ್ದಗಳ ಪಟ್ಟಿಯನ್ನು ಒದಗಿಸಲಾಗಿದೆ. ಆರ್. ನರಸಿಂಹಾಚಾರ್ಯರು ಇಂಗ್ಲಿಷ್‌ನಲ್ಲಿ (೧೯ ಅಕ್ಟೋಬರ್ ೧೯೦೨ರಲ್ಲಿ) ಬರೆದಿರುವ ಪೀಠಿಕಾಭಾರತೀ ೫೪ ಪುಟಗಳನ್ನು ಒಳಗೊಂಡಿದೆ. ದೀರ್ಘವಾದ ಉಪೋದ್ಘಾತ ಭಾಗ ಅವರ ವಿದ್ವತ್ ಪ್ರತಿಭೆಯನ್ನು ಸಾಬೀತುಪಡಿಸುತ್ತದೆ.

ಕಾವ್ಯಾವಲೋಕನ ನಾಗವರ್ಮನ ಬಹುಮುಖ ಪ್ರತಿಭೆಗೆ ಸಾಕ್ಷಿಯಾದದ್ದು. "ಈ ಅಲಂಕಾರ ಶಾಸ್ತ್ರದಲ್ಲಿ ಭಾರತೀಯ ಕಾವ್ಯಮೀಮಾಂಸೆಯ ತತ್ತ್ವಗಳನ್ನು ಸಂಕ್ಷೇಪವಾಗಿ ನಿರೂಪಿಸಿದೆ. ಕನ್ನಡ ಭಾಷೆಯಲ್ಲಿರುವ ಅಲಂಕಾರ ಗ್ರಂಥಗಳಲ್ಲೆಲ್ಲ ಇದು ಸಮಗ್ರವಾದ್ದು, ಅಧಿಕೃತವಾದ್ದು. ಸೂತ್ರಗಳು ಕಂದ ಪದ್ಯಗಳಲ್ಲಿವೆ. ಆದರೆ ಅಧಿಕರಣದ ಆದಿಯಲ್ಲಿ ಒಂದು ವೃತ್ತ ಅಂತ್ಯದಲ್ಲಿ ಗೀತಿಕೆಯೊಡಗೂಡಿದ ಒಂದು ವೃತ್ತ, ಹೀಗೆ ಕ್ರಮ ತಪ್ಪದೆ ಬರುವ ಹಾಗೆ ರಚಿಸಿರುವುದು 'ಸರ್ವತ್ರ ಭಿನ್ನವೃತ್ತಾಂತೈರುಪೇತಂ' ಎಂಬ 'ಕಾವ್ಯಾದರ್ಶ'ದ ಸರ್ಗಬಂಧ ಲಕ್ಷಣಾಂಶವನ್ನು ನೆನಪುಮಾಡುತ್ತದೆ. ಶಾಸ್ತ್ರಗ್ರಂಥಗಳನ್ನು ಕಾವ್ಯಗ್ರಂಥಗಳೆಂಬಂತೆ ಭಾವಿಸುವ ಪರಿಪಾಠ ಕನ್ನಡ ಕವಿಗಳಿಗಿತ್ತೆಂದು ಇದರಿಂದ ತೋರುತ್ತದೆ. ಇನ್ನು ಲಕ್ಷಣವನ್ನು ವಿಶದಪಡಿಸಲು ಪ್ರಾಚೀನಕನ್ನಡ ಸಾಹಿತ್ಯದಿಂದ ಅಧಿಕವಾಗಿ ಪದ್ಯಗಳನ್ನಾಯ್ದು ಲಕ್ಷ್ಯಗಳನ್ನಾಗಿಕೊಟ್ಟಿದೆ. ಈ ಆಯ್ಕೆಯಲ್ಲಿ ವೃತ್ತ ಕಂದಗಳು ಮಾತ್ರ ಸೇರಿವೆಯಲ್ಲದೆ ದೇಶ್ಯ ಛಂದಸ್ಸಿನ ಯಾವೊಂದು ಪದ್ಯಜಾತಿಯೂ ಸೇರಿಲ್ಲದಿರುವುದು ಕುತೂಹಲಕರವಾಗಿದೆ" (ಕ.ಸಾ.ಚ. ಪುಟ : ೭೨೮).

ನಾಗವರ್ಮ ಲಕ್ಷಣ ಗ್ರಂಥದ ಸಿದ್ಧತೆಯಲ್ಲಿ ತೋರಿದ ದೃಷ್ಟಿ ಮತ್ತು ಸಾಧನೆಯ ಬಗೆಗೆ ಆರ್. ನರಸಿಂಹಾಚಾರ್ಯರು ಹೀಗೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ: "ಈತನ ಕಾವ್ಯದ ಗುಣದೋಷ ವಿವೇಚನೆ ಸಾಕಷ್ಟು ವಿಸ್ತಾರವಾಗಿದೆ. ಅಲಂಕಾರಗಳ ನಿರೂಪಣೆ 'ಕವಿರಾಜಮಾರ್ಗ' ಮತ್ತು ಇತರ ಕನ್ನಡ ಅಲಂಕಾರ ಗ್ರಂಥಗಳಲ್ಲಿ ಬಂದಿರುವುದಕ್ಕಿಂತ ಸಮಗ್ರವಾಗಿದೆ. ಈಗ ಇರುವ ಸ್ವರೂಪದಲ್ಲಿ ಬಹುಪಾಲು ಲಕ್ಷಪದ್ಯಗಳು ಅಶುದ್ಧವಾಗಿದ್ದರೂ ಒಟ್ಟು ಸು. ೨೫ ಚಿತ್ರಕಾವ್ಯ ಭೇದಗಳನ್ನು ಕುರಿತಿದೆ. ಕವಿಸಮಯಕ್ಕೆ ಒಂದು ಪ್ರತ್ಯೇಕವಾದ ಅಧಿಕರಣವನ್ನು ಮೀಸಲಿಟ್ಟಿರುವುದು ಈತನ ಒಂದು ವಿಶೇಷ ರೀತಿರಸಗಳ ಬಗೆಗೆ ಬಂದಿರುವ ಸಂಗತಿಗಳು ಸಂಕ್ಷಿಪ್ತವಾಗಿದ್ದರೂ

ಬಹುಮಟ್ಟಿಗೆ ಸಮಗ್ರವೇ ಆಗಿದೆ. ನಾಯಕ ನಾಯಿಕಾ ಸಂಬಂಧದ ವಿವರಗಳನ್ನು ಕೈಬಿಟ್ಟಿರುವುದರ ಕಾರಣ, ಆತ ಶ್ರವ್ಯಕಾವ್ಯ ಸ್ವರೂಪದ ನಿರ್ವಚನವನ್ನು ಲಕ್ಷ್ಯದಲ್ಲಿ ಒಳಗೊಂಡಿದ್ದರೂ ಇರಬಹುದು. ಧ್ವನಿಯ ಬಗೆಗೆ ಏಕೆ ಹೇಳಿಲ್ಲವೋ ತಿಳಿಯದು; ಧ್ವನಿಯುಕ್ತ ಕಾವ್ಯಗಳು ಕನ್ನಡದಲ್ಲಿ ವಿರಳವೆಂದು ಕೈಬಿಟ್ಟನೋ ಏನೋ" (ಕ ಸಾ ಚ ಪುಟ ೭೩೦).

ಟಿ. ವಿ. ವೆಂಕಟಾಚಲಶಾಸ್ತ್ರೀ ಅವರು ಅಭಿಪ್ರಾಯಪಡುವಂತೆ "ಭಾಮಹನ "ಕಾವ್ಯಾಲಂಕಾರ'ದ ಹಸ್ತಪ್ರತಿಯನ್ನು ಮದರಾಸಿನ ಪ್ರೊ. ರಂಗಾಚಾರ್ಯರ ಮೂಲಕ ಅದನ್ನು ತರಿಸಿಕೊಂಡು ಅದರ ವಸ್ತುವಿವರಗಳನ್ನು ದಂಡಿ ಭಾಮಹರ ಪೌರ್ವಾಪರ್ಯಗಳನ್ನು ಮೊದಲ ಸಲ ಇಲ್ಲಿ ಉಲ್ಲೇಖಿಸಿದರೆಂಬುದನ್ನು ವಿಶೇಷವಾಗಿ ನೆನೆಯಬೇಕು" (ಪ್ರಾಕ್ತನ, ಪು xxii)

## ಕರ್ಣಾಟಕ ಭಾಷಾಭೂಷಣ

ಸಂಸ್ಕೃತ ಭಾಷೆಯಲ್ಲಿ ನಾಗವರ್ಮ ರಚಿಸಿರುವ ಕನ್ನಡ ವ್ಯಾಕರಣ 'ಕರ್ಣಾಟಕ ಭಾಷಾಭೂಷಣ'. ೧೯೦೩ರಲ್ಲಿ ಕಾವ್ಯಾವಲೋಕನದ ಜೊತೆಯಲ್ಲಿಯೇ ಸಂಪಾದಿಸಿ ಪ್ರಕಟಿಸಿದ್ದು, ಶಬ್ದಸ್ಮೃತಿಯೊಂದಿಗೆ ಇದನ್ನ ಹೋಲಿಸಿ ಅಭ್ಯಾಸಮಾಡಲು ಅನುಕೂಲ ಮಾಡಿಕೊಟ್ಟಂತಾಗಿರುವುದು ಗಮನಾರ್ಹ ಅಂಶ. ಕಾವ್ಯಾವಲೋಕನಕ್ಕೆ ಬರೆದಿರುವ ದೀರ್ಘಪೀಠಿಕೆಯಲ್ಲಿಯೇ ಇದರ ಆಶಯವನ್ನು ಕುರಿತಂತೆ ಹಾಗೂ ಕನ್ನಡ ಮತ್ತು ಸಂಸ್ಕೃತ ಸಾಹಿತ್ಯ ಚರಿತ್ರೆಗಳ ಮೇಲೆ ಬೀರಿದ ಇದರ ಪ್ರಭಾವವನ್ನು ಗುರುತಿಸಲಾಗಿದೆ.

"ರೈಸ್ ಪರಿಷ್ಕರಣದಲ್ಲಿ ಕೊಟ್ಟ ಹಾಗೆ ಇಲ್ಲಿ ರೋಮನ್ ಲಿಪಿಯಲ್ಲಿ ಗ್ರಂಥಪಾಠವನ್ನು ಕೊಡದೆ, ಬರಿಯ ಕನ್ನಡ ಲಿಪಿಯ ಪಾಠವನ್ನು ಕೊಟ್ಟಿದೆ. ಈ ಪರಿಷ್ಕರಣಕ್ಕೆ ೨ ಬೇರೆ ಓಲೆ ಪ್ರತಿಗಳನ್ನು ಒಂದು ಅಸಮಗ್ರ ನಕಲನ್ನು ಬಳಸಿದೆ. ಹಿಂದಿನ ಪರಿಷ್ಕರಣದಲ್ಲಿದ್ದ ಹೊಸಗನ್ನಡ 'ತಾತ್ಪರ್ಯ'ವನ್ನು ಕೈಬಿಟ್ಟು ಪ್ರಾಚೀನವಾದ "ಟೀಕು'ವೊಂದನ್ನು ಪ್ರಾಚೀನವಾದ ೨ ಓಲೆಪ್ರತಿಗಳ ಆಧಾರದಿಂದ ಸಂಪಾದಿಸಿಕೊಟ್ಟಿದೆ. ಎರಡೂ ಸಂದರ್ಭಗಳಲ್ಲಿ ಪ್ರತಿಗಳಿಗೆ ಸಂಕೇತಾಕ್ಷರಗಳನ್ನು ಸೂಚಿಸಿರದ ಕಾರಣ ತೋರಿಸಿರುವ ಪಾಠಾಂತರಗಳು ಯಾವ ಯಾವ ಪ್ರತಿಯದು ಎಂದು ತಿಳಿಯದೇ ಹೋಗಿದೆ. ಪಾಠಾಂತರಗಳನ್ನೇನೊ ಧಾರಾಳವಾಗಿ ತೋರಿಸಿದ್ದಾರೆ. ಟೀಕಿನ ಭಾಗವನ್ನು ಈಗ ತೋರಿಸಿರುವಂತೆ ಗ್ರಂಥ ಶರೀರದಲ್ಲಿ ತೋರಿಸದೆ ಪ್ರತ್ಯೇಕವಾದ ವಿಭಜನ ರೇಖೆಗಳ ನಡುವೆ ತೋರಿಸಿದ್ದಾರೆ. ಅದರ ಅನ್ಯ ಕರ್ತೃತ್ವ ಸ್ಪಷ್ಟವಾಗುತ್ತಿದ್ದಿತು. ಆದರೆ ಇದೇನೂ ಮುಖ್ಯವಲ್ಲ. ಈ ಪರಿಷ್ಕರಣ ಇದರ ಹಿಂದಿನ ಎರಡು ಪರಿಷ್ಕರಣಗಳಿಗಿಂತ ಭಾಷೆ, ಶಬ್ದರೂಪ, ಪಾಠವಿಚಾರಗಳಲ್ಲಿ ವಿವಿಧವಾದ ಲೋಪದೋಷಗಳಿಂದ ಮುಕ್ತವಾಗಿರುವುದು ಗಮನಿಸತಕ್ಕದ್ದಾಗಿದೆ. ಆಶಯದ ವೈಪರೀತ್ಯಗಳು ಸಹ ಕಂಡುಬರುವುದಿಲ್ಲ" (ಉದ್ದತ : ಪ್ರಾಕ್ತನ ಪು xxii)

ಸರ್ವಜ್ಞಂ ತದಹಂ ವಂದೇ | ಪರಂಜ್ಯೋತಿ ಸ್ತ ಮೊಪಹಂ

ಪ್ರವರ್ತ್ತಾ ಯುನ್ಮುಖಾದ್ದೇವೀ । ಸರ್ವಭಾಷಾ ಸರಸ್ವತೀ ॥

ಹೀಗೆ ಪ್ರಾರಂಭಗೊಳ್ಳುವ ನಾಗವರ್ಮನ ಕೃತಿ 'ಕರ್ಣಾಟಕ ಭಾಷಾಭೂಷಣ' ದಲ್ಲಿ ಸಂಜ್ಞಾ ವಿಧಾನಂ, ಸಂಧಿವಿಧಾನಂ, ವಿಭಕ್ತ ವಿಧಾನಂ, ಕಾರಕವಿಧಾನಂ, ಯುಷ್ಮದಾದಿ ವಿಧಾನಂ, ಸಮಾಸ ವಿಧಾನಂ, ತದ್ಧಿತ ವಿಧಾನಂ, ಆಖ್ಯಾತ ವಿಧಾನಂ, ಅನ್ವಯ ವಿಧಾನಂ, ನಿಪಾತ ವಿಧಾನಂ ಎಂದು ಹತ್ತು ಭಾಗಗಳಿವೆ. ಕೊನೆಯಲ್ಲಿ ಎರಡು ಪರಿಶಿಷ್ಟಗಳಿವೆ. ಸೂತ್ರಗಳ ವರ್ಣಾನುಕ್ರಮಣಿಕೆ, ಕರ್ಣಾಟಕ ಭಾಷಾಭೂಷಣದಲ್ಲಿಯ ಸೂತ್ರಗಳಿಗೆ ಸಂವಾದಿಗಳಾದ ಕಾವ್ಯಾವಲೋಕನ, ಶಬ್ದಮಣಿದರ್ಪಣ, ಕರ್ಣಾಟಕ ಶಬ್ದಾನುಶಾಸನ ಗಳಲ್ಲಿಯ ಸೂತ್ರಗಳು - ಇತ್ಯಾದಿ ವಿವರಗಳನ್ನ ನೀಡಲಾಗಿದೆ. ಈ ಎರಡು ಗ್ರಂಥಗಳ ಸಂಪಾದನೆಯ ಸಂದರ್ಭದಲ್ಲಿ ಆರ್. ನರಸಿಂಹಾಚಾರ್ಯರ ಕಾರ್ಯ ಚಟುವಟಿಕೆಯನ್ನು ಮತ್ತು ಅವರ ವಿದ್ವತ್ ಪ್ರತಿಭೆಯನ್ನು ಅನೇಕರು ಪ್ರಶಂಸಿಸಿದ್ದಾರೆ:

"ಇಂಗ್ಲಿಷ್ ಪೀಠಿಕೆಯು ಸಾಕಷ್ಟು ಆಸಕ್ತಿಯುಳ್ಳ ವಿಷಯಗಳನ್ನು ಒಳಗೊಂಡಿರುತ್ತದೆ. ಕವಿ ಮತ್ತು ಅವರ ಕೆಲಸಗಳು ಹಾಗೂ ಬೇರೆ ಪುಸ್ತಕಗಳ ಬಗೆಗಿನ ಕವಿಯ ರಚನೆ ಕನ್ನಡ ಭಾಷೆಯಲ್ಲಿದೆ. ನರಸಿಂಹಾಚಾರ್ ಅವರು ಬಹಳ ಕಾಲ ತಮ್ಮ ಸಂಶೋಧನೆಯಲ್ಲಿ ತೊಡಗಿದ್ದವರು. ಹಾಗೂ ಅದರಲ್ಲಿ ತಲ್ಲೀನರಾಗುವಂತೆ ಮಾಡಿದರು. ಈ ಮೂಲಕ ಕನ್ನಡ ಸಾಹಿತ್ಯದಲ್ಲಿ ಆಸಕ್ತಿ ಉಳ್ಳವರಿಗೆಲ್ಲ ವಂದನೆಗಳನ್ನು ಸಲ್ಲಿಸುತ್ತಾರೆ. ಮೈಸೂರು ಸರ್ಕಾರ ನರಸಿಂಹಾ ಚಾರ್ಯರಿಗೆ ತಮ್ಮ ಪಾಂಡಿತ್ಯದ ಬಗ್ಗೆ ಹಾಗೂ ಈ ಒಂದು ಮುಖ್ಯ ಕಾರ್ಯದ ಬಗ್ಗೆ ಧನ್ಯವಾದಗಳನ್ನು ತಿಳಿಸುತ್ತದೆ".

**ಕ್ರಿಶ್ಚಿಯನ್ ಕಾಲೇಜ್ ಮ್ಯಾಗಜಿನ್**

"ಈ ಸಂಪುಟವನ್ನು ಅಸಿಸ್ಟೆಂಟ್ ಆರ್. ನರಸಿಂಹಾಚಾರ್ಯ ಎಂ.ಎ. ಕೈಗೊಳ್ಳುತ್ತಾರೆ. ಅವರು ಓದುವುದರಲ್ಲಿ ಹಾಗೂ ಕೆಲಸದಲ್ಲಿ ಸಮರ್ಥವಾಗಿದ್ದರು. ಮಹಾರಾಜರ ಅಪ್ಪಣೆಯಿಂದ ಸಂಪುಟವನ್ನು ಅವರು ಸಂಪೂರ್ಣವಾಗಿ ಮುಗಿಸಿದರು.'

**ಬಿ. ಎಲ್. ರೈಸ್‌ಸಿ.ಐ.ಇ.**

"ನಾವು ಅಂದುಕೊಂಡಂತೆ ಇದನ್ನ ಮುಖಸ್ತುತಿಯನ್ನಾಗಿ ಮಾಡಬಾರದು. ಈ ಪೀಠಿಕೆಯ ಗ್ರಹಿಕೆ ಮತ್ತು ಸಂಶೋಧನೆಯಲ್ಲಿ ಆಳವಾಗಿರುವ ಪ್ರತಿಭೆಯನ್ನ ಪ್ರದರ್ಶಿಸುತ್ತದೆ. ಕನ್ನಡದ ಕೆಲಸವನ್ನು ಪ್ರದರ್ಶಿಸುವುದನ್ನ ಎಲ್ಲೂ ನೋಡಿಲ್ಲವೆಂದು ಹೇಳುತ್ತಾರೆ. ದುಡಿತ ತನ್ನ ದಿನಾಂಕದ ಮೂಲಕ ಹಾಗೂ ಕವಿಯ ಉಲ್ಲೇಖಿತ ಅದರ ಮೂಲಸ್ಥಾನಗಳು ಒಂದು ಒಳ್ಳೆಯ ಪುಸ್ತಕಕಾರ್ಯವನ್ನು ಪಡೆದುಕೊಳ್ಳಬೇಕಾದರೆ ಕಷ್ಟವೆಂದು ಹೇಳಬಾರದು. ಇದೊಂದು ಅದ್ಭುತವಾದುದು ಮತ್ತು ಎಲ್ಲಾ ಪಂಡಿತರು ಹಾಗೂ ಕನ್ನಡದ ವಿದ್ಯಾರ್ಥಿಗಳು ಈ ಒಂದು ಕಲಿಕೆಯಲ್ಲಿ ಮತ್ತು ಸಂಶೋಧನೆಯಲ್ಲಿ ಒಳಗಾಗುತ್ತಾರೆ. ಕವಿಯು ತಿಳಿದಂತೆ ಸ್ವಲ್ಪ ಜನ ಮಾತ್ರ ತಮ್ಮ ಕಲಿಕೆಯನ್ನು

ಪ್ರದರ್ಶಿಸುತ್ತಾರೆ ಮತ್ತು ಆಸಕ್ತಿಯನ್ನ ವ್ಯಕ್ತಪಡಿಸುತ್ತಾರೆ. ಈ ಒಂದು ಕಠಿಣ ಕೆಲಸವನ್ನ ತರುವುದಕ್ಕೆ ಸಾಧ್ಯವೇನೆಂದರೆ ಭಾಷೆಯ ಬಗ್ಗೆ ಹಾಗೂ ಕನ್ನಡ ಸಾಹಿತ್ಯದ ಬಗ್ಗೆ ಇರುವ ಪ್ರೀತಿ'.

**ರಾವ್ ಬಹದೂರ್ ಮಂಗೇಶರಾಯ**

"ಈ ಒಂದು ಕೆಲಸದಲ್ಲಿ ಪ್ರತಿ ಪುಟದಲ್ಲೂ ಅವರ ಪಾಂಡಿತ್ಯ ಹಾಗೂ ಪರಿಪೂರ್ಣತೆ ಕಂಡುಬರುತ್ತದೆ'.

**ಹೆಚ್. ನಾರಾಯಣರಾವ್ ಬಿ.ಎ. ಬಿ.ಎಲ್.,**

ಭಟ್ಟಾಕಳಂಕ ಸಂಸ್ಕೃತದಲ್ಲಿ ಬರೆದ ಕನ್ನಡ ವ್ಯಾಕರಣ "ಕರ್ಣಾಟಕ ಶಬ್ದಾನುಶಾಸನಂ'. ಬಿ.ಎಲ್.ರೈಸ್ ೧೮೯೦ರಲ್ಲಿ ಇದನ್ನ ಸಂಪಾದಿಸಿ ಪ್ರಕಟಿಸಿದ್ದರು. ನಂತರ ಐದು ಹಸ್ತಪ್ರತಿಗಳ ಸಹಾಯದಿಂದ ಆರ್. ನರಸಿಂಹಾಚಾರ್ಯರು ೧೯೨೩ರಲ್ಲಿ ಹೊರತಂದರು. ಪರಿಷ್ಕೃತ ಮುದ್ರಣಕ್ಕೆ ಅವರು ಬರೆದಿರುವ ಮಾತುಗಳನ್ನ ಗಮನಿಸಿದರೆ ಅವರ ಸತತ ಪರಿಶ್ರಮದ ಫಲ ಏನೆಂಬುದು ತಿಳಿಯುತ್ತದೆ. ಈ ಗ್ರಂಥವನ್ನು ಸಂಪಾದಿಸುವಲ್ಲಿ ಅವರು ಅನುಸರಿಸಿದ ಮಾರ್ಗದ ಬಗೆಗೂ ಅದರಲ್ಲಿ ಮಾಹಿತಿ ನೀಡಿದ್ದಾರೆ :

"ಇದರ ಪುನರ್ಮುದ್ರಣ ಹೊರಬರಲು ಸುಮಾರು ವರ್ಷಗಳೇ ಆದವು. ಪುನರ್ಮುದ್ರಣ ಕೆಲಸದ ಸಲುವಾಗಿ ನಾನು ಕಚೇರಿಯ ಇತರ ಕೆಲಸಗಳನ್ನು ಸರಿಯಾಗಿ ನಿರ್ವಹಿಸಲು ಆಗಲಿಲ್ಲ. ಪುನರ್ಮುದ್ರಣದ ಕೆಲಸ ಸುಲಭವಾದದ್ದೇನೂ ಅಲ್ಲ. ಅದೊಂದು ಸವಾಲಿನ ಸಂಗತಿ ಇಂತಹ ಕಾರ್ಯವನ್ನು ನೆರವೇರಿಸಲು ನಮ್ಮ ಕಚೇರಿಯಲ್ಲಿ ಸಿಬ್ಬಂದಿ ಇರಲಿಲ್ಲ. ಅದನ್ನು ನಾನೇ ನಿರ್ವಹಿಸಬೇಕಾಗಿ ಬಂತು. ಹಸ್ತಪ್ರತಿಗಳ ಸಂಗ್ರಹದಿಂದ ಹಿಡಿದು ಮುದ್ರಣ ಹಂತದಲ್ಲಿ ಕರಡನ್ನು (ಪ್ರೂಫ್) ತಿದ್ದುವ ಬಗೆಗೆ ಎಲ್ಲವನ್ನು ನಾನೇ ನಿರ್ವಹಿಸಬೇಕಾಗಿ ಬಂತು. ಹಾಗಾಗಿ ಈ ಕೆಲಸ ಪೂರ್ಣಗೊಳ್ಳಲು ಸಾಕಷ್ಟು ಕಾಲಾವಕಾಶ ಬೇಕಾಗಿತ್ತು".

"ಇದಕ್ಕೆ ಬಳಸಿರುವ ಹಸ್ತಪ್ರತಿಗಳ ವಿವರಗಳನ್ನು ಇದಕ್ಕೆ ಬರೆದಿರುವ ಉಪೋದ್ಘಾತದಲ್ಲಿ ತಿಳಿಸಲಾಗಿದೆ. ಓದುಗರು ಮೆಚ್ಚುವ ರೀತಿಯಲ್ಲಿ ಎರಡನೆಯ ಪ್ರಕಟಣೆ ಹೊರಬಂತು. ಇದರ ನೆಪದಲ್ಲಿ ಸಾಕಷ್ಟು ಹಸ್ತಪ್ರತಿಗಳನ್ನು ಸಂಗ್ರಹಿಸಲು ಸಾಧ್ಯವಾಯಿತು. ಇದರ ಗಾತ್ರವೂ ಕೂಡ ಓದುಗರ ಕೈಗೆ ಎಟಕುವ ರೀತಿಯಲ್ಲಿ ಕ್ವಾರ್ಟೋದಿಂದ ಆಕ್ಟೋವ್‌ಗೆ ತರಲು ಸಾಧ್ಯವಾಯಿತು. ಗ್ರಂಥ ವಿಷಯಕ್ಕೆ ತಕ್ಕಂತೆ ಪ್ಯಾರಗಳನ್ನ ಮಾಡಲಾಯಿತು. ಹಾಗೆಯೇ ಕೃತಿಯ ಆಶಯ ಸ್ಪಷ್ಟವಾಗುವಂತೆ ವಿರಾಮ ಚಿಹ್ನೆಗಳನ್ನ ಬಳಸಲಾಯಿತು. ಸೂತ್ರಗಳನ್ನ ಹಾಗೂ ವಿವರಣೆಗಳನ್ನು ದಪ್ಪ ಅಕ್ಷರಗಳಲ್ಲಿ ನೀಡಲಾಯಿತು. ಅದರ ಪಕ್ಕದಲ್ಲಿಯೇ ಸೂತ್ರಗಳ ಆಕರಗಳನ್ನ ಆವರಣಗಳಲ್ಲಿ ಸೂಚಿಸಲಾಯಿತು. ಪಾಣಿನಿ, ಶಾಕಟಾಯನ ಮತ್ತು ಕಾತಂತ್ರ ಎಂಬುದಕ್ಕೆ 'ಪಾ' 'ಶಾ' ಮತ್ತು 'ಕಾ' ಎಂಬ ಸಂಕೇತಾಕ್ಷರಗಳನ್ನ ಬಳಸಲಾಯಿತು. ಗ್ರಂಥದ ಕೊನೆಯಲ್ಲಿ ಆರು ಪರಿಶಿಷ್ಟಗಳನ್ನ ಮತ್ತು ಪಾರಿಭಾಷಿಕ ಶಬ್ದಗಳ ಸೂಚಿಯನ್ನ ನೀಡಲಾಗಿದೆ. ಓದುಗರಿಗೆ ಅನುಕೂಲವಾಗುವಂತೆ ಅಗತ್ಯ ಪಾಠಾಂತರಗಳನ್ನ ಅಡಿ ಟಿಪ್ಪಣಿಯಲ್ಲಿ ನೀಡಲಾಗಿದೆ. ಇದಕ್ಕೆ ಮುಂಚಿನ ಸಂಪುಟದಲ್ಲಿ ರೋಮನ್ ಲಿಪ್ಯಂತರವನ್ನು ಬಳಸಲಾಯಿತು. ಬಹುತೇಕ

ಕನ್ನಡಿಗರಿಗೆ ಅದನ್ನು ಓದಲು ಸಾಧ್ಯವಾಗಲಿಲ್ಲ, ಆದ್ದರಿಂದ ಅದನ್ನ ಕೈಬಿಡಲಾಗಿದೆ. ಪ್ರಸ್ತುತ ಸಂಪುಟದಲ್ಲಿ ಸೂತ್ರಗಳ ಇಂಗ್ಲಿಷ್ ಅನುವಾದವನ್ನು ಇಂಗ್ಲಿಷ್ ಟಿಪ್ಪಣಿಗಳನ್ನು ಎಚ್ಚರಿಕೆಯಿಂದ ಉಳಿಸಿಕೊಳ್ಳಲಾಗಿದೆ".

ಹೀಗೆ ಗ್ರಂಥದ ಸಾಧಕ ಬಾಧಕಗಳನ್ನು ವಿವರಿಸಿದ ಆರ್. ನರಸಿಂಹಾಚಾರ್ಯರು ಗ್ರಂಥದ ಪರಿಶಿಷ್ಟ ಮತ್ತು ಪದಸೂಚಿಯನ್ನು ಸಿದ್ಧಪಡಿಸಿದ ಆರ್ಕ್ಯಾಲಾಜಿಕಲ್ ಆಫೀಸ್‌ನ ಪಂಡಿತ್ ಎಲ್. ನಂಜುಂಡಶಾಸ್ತ್ರೀ ಅವರನ್ನು, ತಮ್ಮ ನಿವೃತ್ತಿ ನಂತರವು ಈ ಗೌರವಾನ್ವಿತ ಕೆಲಸವನ್ನು ಯಶಸ್ವಿಯಾಗಿ ನಿಭಾಯಿಸಿದ ಸಂಗತಿಗಳನ್ನ ಮತ್ತು ಈ ಕೆಲಸಗಳು ನೆರವೇರಲು ಕಾರಣರಾದವರನ್ನು ಅತ್ಯಂತ ಕೃತಜ್ಞತೆಯಿಂದ ಸ್ಮರಿಸಿಕೊಂಡಿದ್ದಾರೆ.

ಆರ್. ನರಸಿಂಹಾಚಾರ್ಯರು ಇಂಗ್ಲಿಷ್ ಭಾಷೆಯಲ್ಲಿ ೨೦ ಪುಟದ ದೀರ್ಘ ಪೀಠಿಕೆಯನ್ನ ಇದಕ್ಕೆ ಬರೆದಿದ್ದಾರೆ. ಆರಂಭದಲ್ಲಿ ಭಾರತೀಯ ವ್ಯಾಕರಣಶಾಸ್ತ್ರ ಪರಂಪರೆಯನ್ನ ವಿವರಿಸಿದ್ದಾರೆ. ಪಾಣಿನಿ, ಶರ್ವವರ್ಮ, ಶಾಕಟಾಯಾನ - ಮುಂತಾದವರ ವ್ಯಾಕರಣಶಾಸ್ತ್ರ ಪರಂಪರೆಯನ್ನು ಹಿನ್ನೆಲೆಯಾಗಿ ವಿವರಿಸಿರುವ ಔಚಿತ್ಯ ಸಮಂಜಸವಾದುದು. ನಂತರ ಕರ್ಣಾಟಕ ಶಬ್ದಾನುಶಾಸನದ ಕರ್ತೃ ಭಟ್ಟಾಕಳಂಕನ ಇತಿವೃತ್ತ, ಕೃತಿಯ ವಸ್ತು, ಆಕರ ಮತ್ತು ಪ್ರಯೋಗಗಳನ್ನು ಪರಿಚಯಿಸಲಾಗಿದೆ. ಜೊತೆಗೆ ದ್ರಾವಿಡಭಾಷಾವ್ಯಾಕರಣಗಳ ಸಮೀಕ್ಷೆಯನ್ನ ಮನದಟ್ಟು ಮಾಡಿಕೊಡಲಾಗಿದೆ. ಒಟ್ಟಾರೆಯಾಗಿ ಕನ್ನಡ ವ್ಯಾಕರಣಶಾಸ್ತ್ರ ಪರಂಪರೆಯನ್ನ ಅಭ್ಯಸಿಸುವುದಕ್ಕೆ ಬೇಕಾಗುವ ಅಗತ್ಯ ಹಿನ್ನೆಲೆಯನ್ನ ನರಸಿಂಹಾಚಾರ್ಯರು ಈ ಅವತರಣಿಕೆಯಲ್ಲಿ ಒದಗಿಸಿರುವುದು ಈ ಕ್ಷೇತ್ರದ ಬಗೆಗೆ ಅವರಿಗಿರುವ ಪಾಂಡಿತ್ಯ ವಿದ್ವತ್ಪ್ರತಿಭೆಯನ್ನ ಸೂಚಿಸುತ್ತದೆ. ಗ್ರಂಥದ ಕೊನೆಯಲ್ಲಿ ಪರಿಶಿಷ್ಟ ೧ರಲ್ಲಿ ಕರ್ಣಾಟಕ ಶಬ್ದಾನುಶಾಸನ ಸೂತ್ರ ಪಾಠವನ್ನು; ೨ರಲ್ಲಿ ಸೂತ್ರಗಳ ವರ್ಣಾನುಕ್ರಮಣಿಕೆಯನ್ನ; ೩ರಲ್ಲಿ 'ಕರ್ಣಾಟಕ ಶಬ್ದಾನುಶಾಸನದಲ್ಲಿ ಪಾಣಿನಿ, ಶಾಕಟಾಯನ, ಕಾತಂತ್ರ ಜೈನೇಂದ್ರ ಸಾರಸ್ವತ - ಈ ವ್ಯಾಕರಣಗಳಿಂದ ಅನುವಾದ ಮಾಡಿರುವ ಸೂತ್ರಾದಿಗಳ ಮತ್ತು ವಾರ್ತಿಕ ಮಹಾಭಾಷ್ಯ, ಪಾಣಿನೀಯ ಶಿಕ್ಷಾ, ಅಮೋಘವೃತ್ತಿ, ನ್ಯಾಸ - ಇವುಗಳಿಂದ ಉದ್ಧೃತವಾದ ಪ್ರಮಾಣ ವಚನಗಳ ವರ್ಣಾನುಕ್ರಮಣಿಕೆ ಇದೆ. ೪ರಲ್ಲಿ ಕರ್ಣಾಟಕ ಶಬ್ದಾನುಶಾಸನದಲ್ಲಿ ಅನುವಾದ ಮಾಡಿರುವ ಇತರವಾದ ಸಂಸ್ಕೃತ ಪ್ರಮಾಣ ವಚನಗಳ ವರ್ಣಾನುಕ್ರಮಣಿಕೆಯನ್ನ ನೀಡಲಾಗಿದೆ. ೫ರಲ್ಲಿ ಇಲ್ಲಿಯ ಸೂತ್ರಗಳಿಗೆ ಸಂವಾದಿಗಳಾದ ಶಬ್ದಮಣಿದರ್ಪಣ ಕಾವ್ಯಾವಲೋಕನ, ಕರ್ಣಾಟಕ ಭಾಷಾಭೂಷಣ ಇವುಗಳಲ್ಲಿಯ ಸೂತ್ರಗಳ ಸಂಖ್ಯೆಯ ಕೋಷ್ಟಕವನ್ನ ನೀಡಲಾಗಿದೆ. ೬ರಲ್ಲಿ ಈ ಗ್ರಂಥದಲ್ಲಿ ಶಬ್ದಮಣಿದರ್ಪಣದಿಂದ ಉದ್ಧೃತವಾದ ಸೂತ್ರಗಳ ವರ್ಣಾನುಕ್ರಮಣಿಕೆ ಮತ್ತು ಆಕರವನ್ನ ನಂತರ ಪಾರಿಭಾಷಿಕ ಶಬ್ದಗಳ ಪಟ್ಟಿಯನ್ನು ಒದಗಿಸಲಾಗಿದೆ.

## ಕರ್ನಾಟಕ ಕವಿಚರಿತೆ

ಆರ್. ನರಸಿಂಹಾಚಾರ್ಯರ ವಿದ್ವತ್ತು ಬಹುಮುಖವಾದುದು. ಅವರು ಸಿದ್ಧಪಡಿಸಿರುವ ಕರ್ಣಾಟಕ ಕವಿಚರಿತೆಯ ಮೂರು ಸಂಪುಟಗಳು ಅವರ ವಿದ್ವತ್ತಿಗೆ ಸಾಕ್ಷಿಯಾಗಿವೆ. ಸು. ೪೦೦ ರಿಂದ ೧೪ನೇ ಶತಮಾನದ

ಕೊನೆಯವರೆಗೆ ಒಳಗೊಂಡ ಪ್ರಥಮ ಸಂಪುಟ ೧೯೦೭ರಲ್ಲಿ ಪ್ರಕಟವಾಯಿತು. ದ್ವಿತೀಯ ಸಂಪುಟ (೧೭ನೇ ಶತಮಾನದ ಕೊನೆಯವರೆಗೆ) ೧೯೧೯ರಲ್ಲಿ ಪ್ರಕಟವಾಯಿತು. ತೃತೀಯ ಸಂಪುಟ (೧೮ ಮತ್ತು ೧೯ನೇ ಶತಮಾನಗಳು) ೧೯೨೯ರಲ್ಲಿ ಪ್ರಕಟವಾಯಿತು. "ಪ್ರಥಮ ಸಂಪುಟವು ಮತ್ತೆ ಪರಿಶೀಲನೆಗೊಂಡು ೧೯೨೪ರಲ್ಲಿ ಪುನರ್ಮುದ್ರಣವಾಯಿತು. ಇದಲ್ಲದೆ ಶ್ರೀಯುತರು ಕವಿಚರಿತೆಗೆ ಸಂಬಂಧಪಟ್ಟಂತೆ ಎರಡು ಅನುಬಂಧಗಳನ್ನು ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಪ್ರಕಟಿಸಿದರು. ಒಬ್ಬೊಬ್ಬ ಕವಿಯ ಚರಿತೆಯನ್ನ ಬರೆದ ಕ್ರಮವನ್ನ ಕುರಿತು ನರಸಿಂಹಾಚಾರ್ಯರು ಹೀಗೆ ವಿವರಿಸಿದ್ದಾರೆ :

"ಮೊದಲು ಕವಿಯ ಹೆಸರೂ ಅದರ ಪಕ್ಕದಲ್ಲಿ ವರ್ಷ ಸಂಖ್ಯೆಯೂ ಕೊಟ್ಟಿವೆ. ವರ್ಷ ಸಂಖ್ಯೆಗಳಲ್ಲಿ ಕ್ರಿಸ್ತಶಕೆಗೆ ಅನ್ವಯಿಸುತ್ತವೆ ಎಂದು ತಿಳಿಯಬೇಕು. ಈ ವರ್ಷಸಂಖ್ಯೆ ಪ್ರಾಯಿಕವಾಗಿ ಗ್ರಂಥ ರಚನಾ ಕಾಲವನ್ನೂ ಸೂಚಿಸುತ್ತದೆ. ಕೆಲವು ಕಡೆ ಈ ಸಂಖ್ಯೆಯ ಹಿಂದೆ ಸುಮಾರು ಎಲ್ಲಾ ಅರ್ಥವನ್ನು ಸೂಚಿಸುವಂತೆ ಸು. ಎಂಬ ಅಕ್ಷರವು ಬರೆದಿದೆ. ಬಳಿಕ ಆ ಕವಿಯಿಂದ ರಚಿತವಾದ ಗ್ರಂಥಗಳ ಹೆಸರು ಕೊಟ್ಟಿದೆ. ಕೆಲವೆಡೆಗಳಲ್ಲಿ ಆ ಕವಿ ಬರೆದುದಾಗಿ ಇತರ ಕಾರಣಗಳಿಂದ ತಿಳಿಯಬರುವ ಗ್ರಂಥಗಳ ಹೆಸರೂ ಸೇರಿದೆ. ತರುವಾಯ ಕವಿಯದೇಶ, ವಂಶ, ಮತ, ಗುರು, ಪೋಷಕ, ಬಿರುದುಗಳು ಇವೇ ಮೊದಲಾದ ಅವನ ಜೀವನ ವೃತ್ತಾಂತದ ಅಂಶಗಳು ಹೇಳಿವೆ. ಅನಂತರ ವಿಚಾರಪೂರ್ವಕವಾಗಿ ಕಾಲನಿರ್ಣಯ ಮಾಡಿದೆ. ಆಮೇಲೆ ಆ ಕವಿಯನ್ನು ಸ್ತುತಿಸುವ ಇತರ ಕವಿಗಳ ಹೆಸರುಗಳು ಕೊಟ್ಟಿವೆ. ಅಲ್ಲಿಂದ ಮುಂದೆ ಆ ಕವಿ ಸ್ಮರಿಸುವ ಪೂರ್ವಕವಿಗಳ ಹೆಸರುಗಳು ಹೇಳಿವೆ. ಅನಂತರ ಆ ಕವಿ ತನ್ನ ಕವಿತಾಚಾತುರಿ, ಗುಣಗಳು ಮೊದಲಾದುವನ್ನು ಹೇಳಿಕೊಳ್ಳುವ ಪದ್ಯಗಳು ಉದ್ಧರಿಸಿ ಬರೆದಿವೆ. ಬಳಿಕ ಕವಿಕೃತವಾದ ಗ್ರಂಥಗಳನ್ನು ಒಂದೊಂದಾಗಿ ತೆಗೆದುಕೊಂಡು ಅದರದರ ಸ್ವರೂಪ, ಪ್ರತಿಪಾದ ವಿಷಯ; ಕಥಾಗರ್ಥ ಆಶ್ವಾಸ ಸಂಖ್ಯೆ, ಇಷ್ಟದೇವತಾಸ್ತುತಿ, ಗುರುಪರಂಪರೆ, ಗ್ರಂಥ ರಚನೆಗೆ ಕಾರಣ ಕನ್ನಡ ಮೊದಲಾದುವನ್ನು ವಿವರಿಸಿ ಬಳಿಕ ಅಶ್ವಾಸಾಂತ್ಯಗಳಲ್ಲಿ ದೊರೆವ ಗದ್ಯಗಳು ಅನುವಾದ ಮಾಡಲ್ಪಟ್ಟಿವೆ. ಅನಂತರ ಗ್ರಂಥದ ಬಂಧದ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಿ ಕವಿತೆಯ ಧೋರಣೆಯನ್ನು ತೋರಿಸುವುದಕ್ಕಾಗಿ ಕೆಲವು ಪದ್ಯಗಳು ಉದಾಹೃತವಾಗಿವೆ. ಪ್ರಾಯಿಕವಾಗಿ ಈ ಕ್ರಮವನ್ನು ಅನುಸರಿಸಿ ಕವಿಗಳ ಚರಿತೆ ಬರೆಯಲ್ಪಟ್ಟಿದ್ದರೂ ಮೇಲೆ ವಿವರಿಸಿದ ಅಂಶಗಳೆಲ್ಲಾ ತಿಳಿದುಬಾರದಿರುವ ಕೆಲವರು ಕವಿಗಳ ಚರಿತೆ ಯಥೋಚಿತವಾಗಿ ಸಂಕ್ಷೇಪಿಸಿ ಬರೆದಿದೆ". (ಕರ್ನಾಟಕ ಕವಿಚರಿತೆ ಭಾಗ-೧, ಪುಟ ೧೭-೧೮).

ಪ್ರಥಮ ಸಂಪುಟದ ಪರಿಷ್ಕರಣೆಗೆ ಸಂಬಂಧಿಸಿದಂತೆ ತಮ್ಮ ಅಭಿಪ್ರಾಯವನ್ನ ಆರ್.ನರಸಿಂಹಾಚಾರ್ಯರು ವ್ಯಕ್ತಪಡಿಸಿರುವ ಬಗೆ ಹೀಗಿದೆ:

"ಕರ್ನಾಟಕ ಕವಿಚರಿತೆಯ ಪ್ರಥಮ ಸಂಪುಟವು ಹಲವು ವರ್ಷಗಳಿಗೆ ಹಿಂದೆ ೧೯೦೭ರಲ್ಲಿ ಮುದ್ರಿತವಾಯಿತು. ಆ ಮುದ್ರಣದ ಪ್ರತಿಗಳೆಲ್ಲ ಮುಗಿದು ಹೋದುದರಿಂದ ಪುಸ್ತಕವನ್ನು ಪರಿಷ್ಕರಿಸಿ ಮತ್ತೊಂದು ಮುದ್ರಣವನ್ನು ಕೈಗೊಳ್ಳುವುದು ಉಚಿತವೆಂದು ತೋರಿತು. ಅದೇ ಮೇರೆಗೆ ತಿದ್ದುವ ಕೆಲಸವು ಒಂದೂವರೆ ವರ್ಷಕ್ಕೆ

ಹಿಂದೆಯೇ ಆರಂಭವಾಗಿ ಪುಸ್ತಕವು ಈ ರೀತಿಯಾಗಿ ಮುದ್ರಿತವಾಗಿದೆ. ಇದರಲ್ಲಿ ಪ್ರಥಮ ಸಂಪುಟದ ಹಿಂದಣ ಮುದ್ರಣದ ೧ನೆಯ ಪರಿಶಿಷ್ಟದಲ್ಲಿಯೂ, ದ್ವಿತೀಯ ಸಂಪುಟದ ಮೊದಲ ೪೨ ಪುಟಗಳು, ೩ನೆಯ ಪರಿಶಿಷ್ಟ ಇವುಗಳಲ್ಲಿಯೂ ಹೇಳಿರುವ ಕವಿಗಳನ್ನ ಸೇರಿಸಿರುವುದಲ್ಲದೆ ಹಲವರು ಹೊಸ ಕವಿಗಳ ಚರಿತೆಯೂ, ಶಾಂತಿನಾಥನ ಸುಕುಮಾರಚರಿತೆ (ಪುಟ ೮೩) ಹರೀಶ್ವರನ ಮುಡಿಗೆಯ ಅಷ್ಟಕ (ಪುಟ ೨೩೪) ಆಚಣ್ಣನ ಶ್ರೀಪಾದಶೀತಿ (ಪುಟ ೩೦೪) ಇವೇ ಮೊದಲಾದ ಹಿಂದೆ ದೊರೆಯದ ಹಲವು ಹೊಸ ಗ್ರಂಥಗಳೂ ಸೇರಿಸಿವೆ. ಅಲ್ಲದೆ ವೀರಶೈವ ವಚನಕಾರರಲ್ಲಿ ಹಿಂದೆ ತಿಳಿಯದೆ ಇದ್ದ ಕೆಲವು ಚರಿತೆಯನ್ನು ಬರೆದಿರುವುದಲ್ಲದೆ ದ್ವಿತೀಯ ಸಂಪುಟದಲ್ಲಿ ಸರಿಯಾಗಿ ಬರೆಯದೆ ಇದ್ದ ಹಲವರು ವಚನಕಾರರ ಚರಿತೆ ತಿದ್ದಿ ಬರೆಯಲ್ಪಟ್ಟಿದೆ (ಪುಟಗಳು ೧೮೯-೨೧೦), ಹಿಂದಣ ಮುದ್ರಣದಲ್ಲಿ ಹೇಳಿರುವ ಕೃತಿಗಳ ಸಂಖ್ಯೆ ಸು ೨೩೦. ಇದರಲ್ಲಿಯ ಕವಿಗಳ ಸಂಖ್ಯೆ ಸು. ೨೮೦. ಈ ಕವಿಗಳಲ್ಲಿ ಸು. ೪೦ ಮಂದಿ ಶಾಸನಗಳನ್ನು ಬರೆದಿದ್ದಾರೆ. ಮತಗಳ ಪ್ರಕಾರ ವಿಂಗಡಿಸಿದರೆ ಸು. ೯೫ ಮಂದಿ ಜೈನರೂ ೯೦ಮಂದಿ ವೀರಶೈವರೂ ೪೫ ಮಂದಿ ಬ್ರಾಹ್ಮಣರೂ ೫೦ ಮಂದಿ ಇತರರೂ ಆಗಿದ್ದಾರೆ. ಈ ಕವಿಗಳಲ್ಲಿ ೬ ಮಂದಿ ಹೆಂಗಸರು. ಅವತರಣಿಕೆಯಲ್ಲಿ ತಿದ್ದುಪಾಡುಗಳು ಮಾಡಿವೆ. ಹಿಂದಣ ಮುದ್ರಣಕ್ಕೆ ಸೇರಿಸಿದ್ದ ಅನುಬಂಧದಲ್ಲಿಯ ಕವಿಗಳೂ ಗ್ರಂಥಗಳೂ ಬಹಳಮಟ್ಟಿಗೆ ದ್ವಿತೀಯ, ತೃತೀಯ ಸಂಪುಟಗಳಲ್ಲಿ ಸೇರಿರುವುದರಿಂದ ಆ ಅನುಬಂಧವು ಈ ಮುದ್ರಣದಲ್ಲಿ ಬಿಡಲ್ಪಟ್ಟಿದೆ ಉಳಿದಿರುವ ಕವಿಗಳ ಮತ್ತು ಗ್ರಂಥಗಳ ಪಟ್ಟಿ ತೃತೀಯ ಸಂಪುಟಗಳ ಅನುಬಂಧವಾಗಿ ಕೊಡಲ್ಪಟ್ಟಿರುವುದು" (ಪು. ೧೮-೧೯). ಈ ಪುಸ್ತಕವನ್ನು ಪರಿಷ್ಕರಿಸುವಾಗ ನೆರವಾದ ಕೆಲವು ಮಹನೀಯರನ್ನು ನರಸಿಂಹಾಚಾರ್ ಅವರು ಇದರಲ್ಲಿ ಸ್ಮರಿಸಿಕೊಂಡಿದ್ದಾರೆ. ಕೆಲವು ಪತ್ರಿಕೆಗಳಲ್ಲಿ ಕವಿ ಚರಿತೆಯ ವಿಷಯವಾಗಿ ಬಂದ ಆಕ್ಷೇಪಣೆಗಳಿಗೆ ಉತ್ತರಗಳನ್ನು ನೀಡಿರುವುದಲ್ಲದೆ ಕೊನೆಯಲ್ಲಿ ಕಾವ್ಯ ರೂಪದಲ್ಲಿ ಅವರಣಿಕೆ ಭಾಗವನ್ನು ಮುಕ್ತಾಯಗೊಳಿಸಿದ್ದಾರೆ.

ಮುನ್ನಂ ಕೃತಿರತ್ನಂಗಳ । ನೆನ್ನರುಮೆರ್ದೆಯಲ್ಲಿ ಧರಿಸುವನ್ನಂ ಪೇರ್ಹಾ ।
ಕನ್ನಡ ಕವಿಗಳ ಚರಿತಂ । ಕನ್ನಡಿಗರ ಬಗೆಗೆ ಮುದಮನೊದವಿಸುಗನಿಶಂ ॥
ಶ್ರೀರಾಮಾನುಜಪದಸರ 1 ಸೀರುಹಷಟ್ಪದನನಂ ತದೇಶಿಕ ವಂಶ್ಯಂ ।
ನಾರಾಯಣಾರಿತನುಭವ । ನೊರಂ ತೊರೆದಂ ನೃಸಿಂಹಕವಿಯೇ ಕೃತಿಯಂ॥

'ಪ್ರಥಮ ಸಂಪುಟದ ಅವತರಣಿಕೆಯಲ್ಲಿ ಕನ್ನಡನಾಡಿನ ಮತ್ತು ಕನ್ನಡನುಡಿಯ ಪ್ರಾಚೀನತೆ, ಕನ್ನಡ ನುಡಿಗೆ ರಾಜರು ನೀಡುವ ಪ್ರೋತ್ಸಾಹ ಈ ವಿಷಯಗಳು ಸಂಗ್ರಹವಾಗಿ ನಿರೂಪಿತವಾಗಿವೆ. ಕನ್ನಡಿಗರಿಗೆ ತಮ್ಮ ನಾಡು-ನುಡಿಗಳಲ್ಲಿ ಗೌರವ ಬುದ್ಧಿಯ ಆದರಾತಿಶಯವು ಹುಟ್ಟಿ ಅವುಗಳ ಏಳಿಗೆಗಾಗಿ ಉತ್ಸಾಹದಿಂದ ಒಡಗೂಡಿದ ಪ್ರಯತ್ನವು ಉಂಟಾಗಬೇಕೆಂಬ ಉದ್ದೇಶದಿಂದ ಮೇಲೆ ಹೇಳಿದ ವಿಷಯಗಳನ್ನು ಅವಕ್ಕೆ ಸಂಬಂಧಿಸಿದ ಇನ್ನು ಕೆಲವು ವಿಷಯಗಳನ್ನು ದ್ವಿತೀಯ ಸಂಪುಟದ ಅವತರಿಣಿಕೆಯಲ್ಲಿ ಪ್ರಸ್ತಾಪಿಸಲಾಗಿದೆ. ಕನ್ನಡ ನುಡಿಯ ಪ್ರಾಚೀನತೆ, ಕನ್ನಡನಾಡಿನ ಮಹಿಮೆ, ಕನ್ನಡ ನುಡಿಗೆ ಪ್ರೋತ್ಸಾಹ, ದಕ್ಷಿಣೋತ್ತರ ಮಾರ್ಗಗಳು - ಈ ಶೀರ್ಷಿಕೆಗಳ ಅಡಿಯಲ್ಲಿ ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ ಹಲವು ವಿಚಾರಗಳನ್ನು ಪರಿಚಯಿಸಲಾಗಿದೆ.

ಪ್ರಥಮ ಸಂಪುಟ ಪ್ರಕಟವಾದ ಹನ್ನೆರಡು ವರ್ಷಗಳ ನಂತರ ದ್ವಿತೀಯ ಸಂಪುಟ ಹೊರಬರ ಬೇಕಾಯಿತು. ಇದರ ವಿಳಂಬಕ್ಕೆ ನರಸಿಂಹಾಚಾರರು ಅತ್ಯಂತ ವಿನಮ್ರವಾಗಿ ಕಾರಣಗಳನ್ನು ನೀಡಿದ್ದಾರೆ. ಸಹಕರಿಸಿದವರನ್ನು ನೆನಪಿಸಿಕೊಂಡಿದ್ದಾರೆ: "ಪ್ರಥಮ ಸಂಪುಟವನ್ನು ಬರೆವಾಗ ನನಗೆ ವಿಶೇಷ ಸಹಾಯಕರಾಗಿದ್ದ ಮ|| ರಾ|| ಎಸ್.ಜಿ. ನರಸಿಂಹಾಚಾರ್ಯರು ಆ ಪುಸ್ತಕವು ಪ್ರಕಟವಾದ ಕೆಲವು ವರ್ಷಗಳಲ್ಲಿಯೇ ವೈಕುಂಠವಾಸಿಯಾದ ಸಂಗತಿ ಎಲ್ಲರಿಗೂ ವಿದಿತವಾಗಿಯೇ ಇದೆ. ಇವರಿಗಿದ್ದ ಕೂಲಂಕಷವಾದ ಕರ್ನಾಟಕ ಭಾಷಾಪಾಂಡಿತ್ಯವೂ ಮನೋಹರವಾದ ಕವಿತಾಮಾರ್ಗವೂ ಇಂಥ ವೈದುಷ್ಯಕ್ಕೆ ಅಲಂಕಾರವಾದ ವಿನಯ ಸಂಪತ್ತಿಯೂ ಎಲ್ಲರ ಮನಸ್ಸನ್ನೂ ಆಕರ್ಷಿಸುತ್ತಿದ್ದುವು. ಇವರ ಅಕಾಲ ಮರಣದಿಂದ ಮೈಸೂರು ದೇಶಕ್ಕೆ ಮಾತ್ರವೇ ಅಲ್ಲದೆ ಕನ್ನಡ ನಾಡೆಲ್ಲಕ್ಕೂ ವಿಶೇಷ ನಷ್ಟವುಂಟಾಯಿತೆಂದು ಹೇಳಿದರೆ ಅತ್ಯುಕ್ತಿಯಾಗಲಾರದು. ನನಗಂತೂ ಇವರ ಮರಣದಿಂದ ಬಲಭುಜವೇ ಹೋದ ಹಾಗಾಯಿತು. ಮುಂದಣ ಕೆಲಸವನ್ನು ನಿರ್ವಹಿಸಬೇಕೆಂಬ ಉತ್ಸಾಹವು ತಗ್ಗಿತು. ಶಾಸನ ಇಲಾಖೆಯ ಹಲವು ವಿಧವಾದ ಕೆಲಸಗಳನ್ನು ಸಮರ್ಪಕವಾಗಿ ಮಾಡಿಕೊಂಡು ಈ ಕರ್ನಾಟಕ ಕವಿಚರಿತೆಯ ಕೆಲಸಕ್ಕೂ ಬೇಕಾದ ಅವಕಾಶವನ್ನು ಒದಗಿಸಿಕೊಳ್ಳುವುದು ಅಸಾಧ್ಯವಾಗಿ ಕಂಡುಬಂದಿತು. ಹಲವು ಮಾತುಗಳಿಂದೇನು ಇನ್ನಾರಾದರೂ ಕನ್ನಡ ಭಾಷಾಭಿಮಾನಿಗಳು ಈ ಕಾರ್ಯವನ್ನು ಕೈಗೊಂಡು ಕೊನೆಗಾಣಿಸಲಿ, ನನ್ನಿಂದ ಸಾಧ್ಯವಿಲ್ಲ ಎಂಬ ಭಾವನೆಯಿಂದ ಬುದ್ಧಿ ತಟಸ್ಥವಾಯಿತು. ಹೀಗೆ ಕೆಲವು ಕಾಲವು ಕಳೆಯಿತು. ಈ ಕೆಲಸಕ್ಕೆ ಇನ್ನಾರೂ ಕೈಹಾಕುವ ಸಂಭವವು ತೋರಲಿಲ್ಲ. ಪ್ರಥಮ ಸಂಪುಟವನ್ನು ಬರೆದುದರಿಂದ ಉಂಟಾದ ಅನುಭವವೂ ದ್ವಿತೀಯ ಸಂಪುಟಕ್ಕಾಗಿ ಸಂಗ್ರಹಿಸಿದ ಸಾಮಗ್ರಿಯೂ ವ್ಯರ್ಥವಾಗಬಾರದೆಂದು ಮನಸ್ಸಿಗೆ ತೋರಿತು. ಹೇಗಾದರೂ ಅವಕಾಶ ಮಾಡಿಕೊಂಡು ಎಷ್ಟು ಕಷ್ಟವಾದರೂ ಈ ಕಾರ್ಯವನ್ನು ನೆರವೇರಿಸುವುದು ಅವಶ್ಯ ಕರ್ತವ್ಯವೆಂಬ ಭಾವನೆ ಹುಟ್ಟಿತು. ಅದರ ಮೇಲೆ ಈ ವಿಧವಾದ ಭಾಷಾಸೇವೆಯನ್ನು ಮಾಡಿಯೇ ತೀರಬೇಕೆಂಬ ದೃಢಸಂಕಲ್ಪವನ್ನು ಕೈಗೊಂಡೆನು" (ಪುಟ ೪೬). - ದ್ವಿತೀಯ ಸಂಪುಟದ ಕೆಲಸವನ್ನು ಆರಂಭಿಸಿದ ನಂತರ ತಮಗೆ ಒದಗಿಬಂದ ಕಷ್ಟಗಳೇನೆಂಬುದನ್ನು ಸಹ ನರಸಿಂಹಾಚಾರ್ಯರು ಸೂಚಿಸಿದ್ದಾರೆ: ಮದರಾಸಿನ ಪ್ರಾಚ್ಯಕೋಶಾಲಯ ಮುಂತಾದ ಸ್ಥಳಗಳಲ್ಲಿ ಒಮ್ಮೆ ನೋಡಿ ಬಂದ ಪುಸ್ತಕಗಳು ಇನ್ನೊಮ್ಮೆ ಹೋಗಿ ನೋಡುವಾಗ 'ಹುಳುಗಳ ಬಾಯಿಗೆ ತುತ್ತಾಗಿ ನಾಶವಾಗಿ ಹೋಗಿದ್ದವು. ಹೀಗೆ ಹಾಳಾದ ಪುಸ್ತಕಗಳು ಬೇರೆ ಕಡೆಗಳಲ್ಲಿ ಸಿಗದೆ ಹೋದಾಗ "ಕೆಲವು ಕವಿಗಳ ಚರಿತೆಯನ್ನ ಹಿಂದೆ ಗುರುತು ಹಾಕಿದ ಅಲ್ಲ ವಿಷಯಗಳ ಆಧಾರದ ಮೇಲೆ ಅತಿ ಸಂಗ್ರಹವಾಗಿ ಬರೆಯಬೇಕಾಯಿತು. ಮಾಹಿತಿಗಾಗಿ ಶೋಧ ನಡೆಸುತ್ತಿರುವಾಗ ಕೆಲವರು ಪುಸ್ತಕಗಳನ್ನು ಮನೆಯಲ್ಲಿಟ್ಟುಕೊಂಡಿದ್ದರೂ ಇಲ್ಲವೆಂದು ಹೇಳುತ್ತಿದ್ದರೆಂದೂ ಇನ್ನು ಕೆಲವರು ತೋರಿಸುವುದಕ್ಕೆ ಹಿಂದೆಗೆಯುತ್ತಿದ್ದರೆಂದೂ ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ. ಒಟ್ಟಾರೆ "ಕಷ್ಟವಾದ ಸರಕಾರದ ಕೆಲಸವನ್ನು ಸಮರ್ಪಕವಾಗಿ ನಿಗ್ರಹಿಸಿಕೊಂಡು ಅವಕಾಶವು ದೊರೆತ ಹಾಗೆಲ್ಲ ಅತಿಶ್ರಮ ಸಾಧ್ಯವಾದ ಈ ಗ್ರಂಥ ರಚನಾಕಾರ್ಯವನ್ನು ಮತ್ತೊಬ್ಬನ ಸಹಾಯವಿಲ್ಲದೆ ಕೇವಲ ಭಾಷಾಭಿಮಾನದ ಬಲದಿಂದ ನಿರ್ವಹಿಸುತ್ತ ಬಂದುದರಿಂದ ವಿಳಂಬಕ್ಕೆ ಕಾರಣವಾಯಿತು" ಎಂದಿದ್ದಾರೆ. ಸಂಪುಟ ಸಿದ್ಧತೆಗೆ ಪುಸ್ತಕಗಳಿಗಾಗಿ ಕ್ಷೇತ್ರಕಾರ್ಯ

ಕೈಗೊಂಡ ನರಸಿಂಹಾಚಾರ್ಯರು 'ಪರೀಕ್ಷಿಸಿದ ತಾಳಪತ್ರದ ಪುಸ್ತಕಗಳ ಸಂಖ್ಯೆ ಸುಮಾರು ಒಂದು ಸಾವಿರದ ಮೇಲಿರಬಹುದು. ಈ ಎಲ್ಲ ಪ್ರಯತ್ನದ ಫಲವೆಂಬಂತೆ ದ್ವಿತೀಯ ಸಂಪುಟ ೧೫ನೇ ಶತಮಾನದ ಆದಿಭಾಗದಿಂದ ೧೭ನೇ ಶತಮಾನದ ಕೊನೆಯವರೆಗೆ ಬಾಳಿದ ಸುಮಾರು ೩೫೦ ಕವಿಗಳ ಚರಿತೆಯನ್ನ ಒಳಗೊಂಡಿದೆ ಎಂಬುದು ವಿಶೇಷಸಂಗತಿ. ಇವುಗಳಲ್ಲಿ ೧೬೦ ಮಂದಿ ವೀರಶೈವರೂ ೭೫ ಮಂದಿ ಜೈನರೂ ೬೦ ಮಂದಿ ಬ್ರಾಹ್ಮಣರೂ ೫೦ ಮಂದಿ ಇತರರೂ ಸೇರಿದ್ದಾರೆ. ಕವಿಚರಿತೆಕಾರರ ದೃಷ್ಟಿಯಲ್ಲಿ ಇವರೆಲ್ಲ ಉದ್ದಾಮ ಕವಿಗಳಲ್ಲದಿದ್ದರೂ ಅವರ ಗ್ರಹಿಕೆಗೆ ಬಂದ ಪ್ರತಿಯೊಬ್ಬ ಗ್ರಂಥಕರ್ತನ ಹೆಸರೂ ಅದರಲ್ಲಿ ದಾಖಲಾಗಬೇಕೆಂಬ ಸದುದ್ದೇಶದಿಂದ ಎಲ್ಲರನ್ನೂ ಒಂದೆಡೆ ಸೇರಿಸಿರುವುದರಿಂದ ಸಾಧಾರಣ ಕವಿಗಳ ಹೆಸರುಗಳು ಬಿಟ್ಟುಹೋಗದಂತೆ ಜಾಗರೂಕತೆಯನ್ನ ವಹಿಸಲಾಗಿದ್ದು ಹಿಂದೆ ತಿಳಿಯದಿದ್ದ ಅನೇಕ ಕವಿಗಳ ಚರಿತೆಯನ್ನ ಈ ಸಂಪುಟ ಒಳಗೊಂಡಿದೆ ಎಂಬುದು ಸಂತಸದ ಸಂಗತಿ.

೧೫, ೧೬, ೧೭ನೇ ಶತಮಾನದ ಎಲ್ಲ ಕವಿಗಳನ್ನು ಇದರಲ್ಲಿ ಸೇರಿಸಲಾಗಿದೆ ಎಂದು ಹೇಳಲಾಗದಿದ್ದರೂ ನರಸಿಂಹಾಚಾರ್ಯರ ತಿಳುವಳಿಕೆಗೆ ಬಂದ ಯಾವ ಕವಿಯ ಹೆಸರನ್ನು ಬಿಟ್ಟಿಲ್ಲವೆಂಬುದು ಮಾತ್ರ ಖಚಿತ. ಕೆಲವು ಕವಿಗಳ ಬಗೆಗೆ ಹೆಚ್ಚಿನ ಅಂಶಗಳು ತಿಳಿದುಬಂದಿಲ್ಲವಾದ ಕಾರಣದಿಂದ ತೀರಾ ಸಂಗ್ರಹಗೊಂಡಿದೆ. ಇದನ್ನ ಗಮನಿಸಿದ ಕೆಲವರು ಕೆಲವು ಕವಿಗಳ ಚರಿತೆ ಅತಿ ಸಂಗ್ರಹವಾಗಿ ಬರೆಯಲ್ಪಟ್ಟಿದೆ' ಎಂದು ಆಕ್ಷೇಪಿಸಿರಬೇಕು. ಅದಕ್ಕೆ ನರಸಿಂಹಾಚಾರ್ಯರ ಉತ್ತರ ಹೀಗಿದೆ : "ಕವಿಗಳ ಕಾಲವನ್ನು ನಿರ್ಧರಿಸುವುದರಲ್ಲಿ ಬೇರೆ ಆಧಾರವಿಲ್ಲದ ಕಡೆ ಪುಸ್ತಕಗಳ ಸ್ವರೂಪ, ಅಕ್ಷರದ ರೀತಿ, ಪ್ರತಿಮಾಡಿದವರು ಹೇಳುವ ಕಾಲ, ಭಾಷಾಶೈಲಿ - ಮುಂತಾದವುಗಳಿಂದ ಕಾಲವನ್ನು ಊಹಿಸಿದ್ದೇನೆ. ಸಾಧನ ಸಂಪತ್ತಿಯುಳ್ಳ ಮಹನೀಯರು ಈ ಕೊರತೆಗಳನ್ನ ಸಾಧ್ಯವಾದ ಮಟ್ಟಿಗೆ ನಿವಾರಣೆ ಮಾಡಲು ಸಹಾಯ ಮಾಡಿದರೆ ಬಹಳ ಉಪಕಾರವಾಗುವುದು" (ಪುಟ ೪೯). - "ಕೊರತೆಗಳಿವೆ ಎಂದು ತಿಳಿದೂ ಈ ಗ್ರಂಥವನ್ನು ಕನ್ನಡಿಗರಿಗೆ ಕಾಣಿಕೆಯಾಗಿ ಒಪ್ಪಿಸಿದ್ದೇನೆ' ಎನ್ನುವ ನರಸಿಂಹಾಚಾರ್ಯರು "ಭಾಷಾಸೇವೆಯನ್ನ ಮಾಡಬೇಕೆಂಬ ಉತ್ಕಟೇಚ್ಛೆಯಿಂದ ಈ ಗ್ರಂಥವನ್ನು ಬರೆದಿದ್ದೇನೆಯೇ ಹೊರತು ಖ್ಯಾತಿ, ಲಾಭ ಪೂಜೆಗಳಿಗಾಗಿ ಅಲ್ಲ. ಇದರಲ್ಲಿರಬಹುದಾದ ಗುಣಗಳನ್ನು ಮಾತ್ರ ಗ್ರಹಿಸಿ ಅಭಿನಂದಿಸುವುದು ಸಹೃದಯರಾದ ಮಹನೀಯರುಗಳ ಸ್ವಭಾವವಾಗಿದೆ. ಆದರೂ ಇದರಲ್ಲಿರುವ ತಪ್ಪುಗಳನ್ನು ನಿರ್ದಾಕ್ಷಣ್ಯವಾಗಿ ತಿಳಿಸಿ ನನಗೂ ಕನ್ನಡ ಸಾಹಿತ್ಯಕ್ಕೂ ಉಪಕಾರ ಮಾಡಬೇಕೆಂದು ವಿನಮ್ರವಾಗಿ ಬೇಡಿಕೊಂಡಿದ್ದಾರೆ. ಅವರಿಗಿರುವ ವಿನಮ್ರತೆ, ಕರ್ಣಾಟಕ ಮತ್ತು ಕನ್ನಡ ಕವಿತಿಲಕರ ಬಗೆಗಿನ ಗೌರವ ಎಂಥದ್ದೆಂಬುದನ್ನು ಈ ಸಂಪುಟದ ಅವತರಣಿಕೆಯ ಕೊನೆಯಲ್ಲಿ ಅವರು ರಚಿಸಿರುವ ಪದ್ಯಗಳಿಂದ ಗೋಚರವಾಗುತ್ತದೆ.

ಕನ್ನಡ ಕವಿಗಳ ಜಸಮಂ
ಕನ್ನಡಪೀ ಗ್ರಂಥದೊಂದನೆಯ ಸಂಪುಟಮಂ

ಮುನ್ನಂ ಕನ್ನಡ ನಾಡಿನ
ಬಿನ್ನಣಿಗಳ್ಗೊಲ್ದು ಕಾಣಿಯಾಗರ್ಪಿಸಿದೆಂ ||

ಇನ್ನಿತ್ತ ಮೆರೆದ ಕವಿಗಳ
ಸನ್ನುತ ಚರಿತಾಬ್ಧಿಯಲ್ಲಿ ನಾನರುವನಿತಂ
ಕನ್ನಡಿಗರ ಮನಕೊಲವ
ಪ್ರನ್ನಂ ಬಣ್ಣಿಸಿದೆನೆರಡನೆಯ ಸಂಪುಟದೊಳ್

ಇದರಲ್ಲಿ ದೋಷಮಿರ್ದೊಡೆ
ಸದಯರ್ ವಿಬುಧರ್ ಸಮಂತು ತಿರ್ದುಗೆ ಮುದದಿಂ
ಓದುಲ್ಲಿನಿಸಾನುಂ ಗುಣ
ಮೊಂದವಿರ್ದೊಡೆ ಮೆಚ್ಚಿಕೊಳ್ಳೆ ಸೌಹೃದದಿಂದಂ ||

ಶ್ರೀ ರಾಮಾನುಜ ಪದಸರ
ಸೀರುಹ ಷಟ್ಪದನನಂತದೇಶಿಕವಶ್ಯಂ
ನಾರಾಯಣಾದ್ಯ ತನುಭವ
ನೋರಂತೊರೆದಂ ನೃಸಿಂಹ ಕವಿಯೀಕೃತಿಯಂ ||

ಪ್ರಥಮ ಸಂಪುಟದ ಅವತರಣಿಕೆಯಲ್ಲಿ ದ್ರಾವಿಡ ಭಾಷೆಗಳಿಗೆ ಸಂಬಂಧಿಸಿದ ಕೆಲ ಅಂಶಗಳು ಉಕ್ತವಾಗಿವೆ. ತೃತೀಯ ಸಂಪುಟದ ಅವತರಣಿಕೆಯಲ್ಲಿ ಭಾಷೆಗಳ ವಿಷಯವಾಗಿ ರಾ. ನ. ಮತ್ತಷ್ಟು ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ.

ದ್ರಾವಿಡ ಭಾಷೆಗಳು, ದ್ರಾವಿಡ ಶಬ್ದದ ಅರ್ಥ, ವ್ಯುತ್ಪತ್ತಿ, ದ್ರಾವಿಡರ ನಾಗರೀಕತೆ, ದ್ರಾವಿಡರನ್ನು ಕುರಿತು ಹೊರಬಿದ್ದ ವಿಷಯಗಳು, ದ್ರಾವಿಡ ಭಾಷೆಗೂ ಸಂಸ್ಕೃತಕ್ಕೂ ಇರುವ ವೈಲಕ್ಷ ಸಂಸ್ಕತ, ಗೌಡ ಭಾಷೆಗಳು ಇವುಗಳಿಂದ ದ್ರಾವಿಡ ಭಾಷೆಗಳಲ್ಲಿ ಉಂಟಾದ ಪರಿಣಾಮ, ದಕ್ಷಿಣ ದ್ರಾವಿಡ ಭಾಷೆಗಳು, ಕನ್ನಡದ ಉಪಭಾಷೆಗಳು, ಕನ್ನಡಿಗರ ನಾಗರೀಕತೆ - ಮುಂತಾದ ವಿಷಯಗಳ ಮೇಲೆ ಬೆಳಕು ಚೆಲ್ಲುವ ವಿದ್ವತ್ಪೂರ್ಣ ಸಂಗತಿಗಳು ಇಲ್ಲಿಯ ನಿರೂಪಣೆಯಲ್ಲಿ ವ್ಯಕ್ತಗೊಂಡಿವೆ. ಇಷ್ಟೆಲ್ಲ ತಾತ್ತಿಕ ಚೌಕಟ್ಟನ್ನು ಒದಗಿಸಿದ ನಂತರ ರಾ. ನ. ಅವರು ತೃತೀಯ ಸಂಪುಟದ ಸಿದ್ಧತೆ, ಅದರಲ್ಲಾದ ವಿಳಂಬದ ಬಗೆಗೆ ವ್ಯಕ್ತಪಡಿಸಿರುವ ಮಾತುಗಳು ಹೀಗಿವೆ : - "ಮುದ್ರಣಾಲಯದಲ್ಲಿ ಉಂಟಾದ ಕಾಲವಿಳಂಬದಿಂದಲೂ ಬೇರೆ ಕೆಲವು ಅನಿವಾರ್ಯಗಳಿಂದಲೂ ಪ್ರಕಟನಕಾರ್ಯವು ಶೀಘ್ರವಾಗಿ ನಡೆಯಲು ಅವಕಾಶವಾಗಲಿಲ್ಲ. ಈ ಕಾಲ ವಿಳಂಬವು ಶೋಚನೀಯವಾದರೂ ಕೆಲವು ಹೊಸ ವಿಷಯಗಳನ್ನು

ದೊರೆತ ಹಾಗೆಲ್ಲ ಸೇರಿಸಲು ಅನುಕೂಲವಾಯಿತು. ಹೀಗೆ ಅಭಿಪ್ರಾಯ ಪಟ್ಟಿರುವ ರಾ. ನ. ಅವರು ಕವಿಚರಿತೆ ಸಂಪುಟಗಳಲ್ಲಿ ದಾಖಲಾಗಿರುವ ಗ್ರಂಥಕರ್ತರ ಒಟ್ಟು ಸಂಖ್ಯೆಯನ್ನ ಅವತರಣಿಕೆ ಭಾಗದಲ್ಲಿ ದಾಖಲಿಸಿದ್ದಾರೆ:

| ಸಂಪುಟ | ಗ್ರಂಥಕರ್ತರ ಸಂಖ್ಯೆ | ಜೈನರು | ವೀರಶೈವರು | ಬ್ರಾಹ್ಮಣರು | ಇತರರು |
|---|---|---|---|---|---|
| ೧ | ೨೮೦ | ೯೫ | ೯೦ | ೪೫ | ೫೦ |
| ೨ | ೩೦೧ | ೫೬ | ೧೪೫ | ೭೬ | ೨೪ |
| ೩ ಪೂರ್ವಿಕರು | ೩೫೨ | ೨೩ | ೧೯೧ | ೧೦೮ | ೩೦ |
| ೪ ಆಧುನಿಕರು | ೨೧೫ | ೦೧ | ೨೭ | ೧೫೯ | ೨೮ |
| ಒಟ್ಟು | ೧,೧೪೮ | ೧೭೫ | ೪೫೩ | ೩೮೮ | ೧೩೨ |

ಸುಮಾರು ೪೦ ವರ್ಷಗಳ ಸುದೀರ್ಘ ಫಲದ ಶ್ರಮವಾಗಿ ಕವಿಚರಿತೆ ಸಂಪುಟಗಳು ಹೊರಬಂದಿವೆ. ವಿಶ್ವಕೋಶ ಸದೃಶವಾದ ಈ ಸಂಪುಟಗಳಲ್ಲಿ ರಾ. ನ. ಅವರು ಸಾಹಿತ್ಯಕ ವಕೌಲ್ಯ ಎದ್ದು ಕಾಣುವ ರೀತಿಯಲ್ಲಿ ಸಂದರ್ಭಾನುಸಾರವಾಗಿ ಗದ್ಯಪದ್ಯಗಳನ್ನು ಉದ್ಧರಿಸುವುದರ ಮೂಲಕ ಅದಕ್ಕೊಂದು ಸಮಗ್ರ ಸ್ವರೂಪ ಬರುವಂತೆ ಮಾಡಿದ್ದಾರೆ.

ಕವಿಗಳ ಕಾಲ ದೇಶ ಮತ್ತು ಗ್ರಂಥಸ್ವರೂಪ ಇತ್ಯಾದಿಗಳೆಲ್ಲಾ ಸಮಗ್ರವಾಗಿ ರೂಪುಗೊಳ್ಳುವುದರ ಜೊತೆಗೆ ಕವಿಗಳ ಕವಿತಾಶಕ್ತಿ ಅವರ ಕಾವ್ಯಗಳು ಹೊರಡಿಸುವ ಧೋರಣೆ, ಪರಂಪರೆಯ ಅನುಸರಣೆ, ಹಿರಿಯ ಕವಿಗಳ ಪ್ರಭಾವ - ಮುಂತಾದವು ಎಲ್ಲಾ ಸರಳವಾಗಿ, ನೇರವಾಗಿ ಈ ಗ್ರಂಥಗಳಲ್ಲಿ ಒದಗಿಸಿದ್ದಾರೆ. ಈ ಮೂರು ಸಂಪುಟಗಳ ಮೂಲಕ ರಾ. ನ. ಅವರು ಕನ್ನಡ ಸಾಹಿತ್ಯ ಚರಿತ್ರೆಯ ಒಂದು ನೀಲನಕ್ಷೆಯನ್ನು ರೂಪಿಸಿದವರು. ನಂತರ ಹಲವಾರು ಕನ್ನಡ ಸಾಹಿತ್ಯ ಚರಿತ್ರೆಗಳು ಹೊರಬರಲು ಸಾಧ್ಯವಾಯಿತು. ಅವುಗಳಿಗೆ ಎಲ್ಲ ಕವಿಚರಿತೆ ಸಂಪುಟಗಳು ಆಕರಗಳಾದದ್ದು ಮಹತ್ವದ ಸಂಗತಿ. ಕನ್ನಡ ಸಾಹಿತ್ಯದ ಅಧ್ಯಯನಕ್ಕೆ ಪ್ರಮಾಣಗ್ರಂಥವೂ ಆಯಿತು. ತಾಳೆಗರಿಯಲ್ಲಿದ್ದ ಕವಿಕೃತಿಗಳನ್ನು ಪರಿಶೀಲಿಸಿ ಅವುಗಳಲ್ಲಿರುವ ಸ್ವಾರಸ್ಯಕರ ಭಾಗವನ್ನು ಸಂಗ್ರಹಿಸಿ ಕೊಟ್ಟಿರುವುದಂತೂ ಆ ಕಾಲದ ಮಹತ್ವದ ಸಾಧನೆ. ಅದಕ್ಕಾಗಿಯೇ ಪಾಶ್ಚಾತ್ಯ ವಿದ್ವಾಂಸರು, ದೇಶೀಯ ವಿದ್ವಾಂಸರು ಕವಿಚರಿತೆ ಸಂಪುಟಗಳ ಸಾಧನೆಯನ್ನ ಮೆಚ್ಚಿ ಹೊಗಳಿದ್ದಾರೆ :

ಬಿ.ಎಲ್.ರೈಸ್ ಅವರು ದಿನಾಂಕ ೩/೭/೧೯೦೯ರ ಪತ್ರದಲ್ಲಿ "ಆರ್.ನರಸಿಂಹಾಚಾರ್‌ರವರು ತಮ್ಮ ಕೃತಿಯನ್ನು ನನ್ನ ಕೆಲವು ಟಿಪ್ಪಣಿಗಳ ಆಧಾರದ ಮೇಲೆ ಪ್ರಾರಂಭಿಸಿದರೂ ಅದನ್ನು ಮುಂದುವರೆಸಿ ಹೆಚ್ಚಿನ ನಿಷ್ಕೃಷ್ಟ ಸಂಶೋಧನೆಗಳಿಂದ ಬೆಳೆಸಿದ್ದಾರೆ. ಇದನ್ನು ಪ್ರಮಾಣಗ್ರಂಥವಾಗಿ ಅಂಗೀಕಾರ ಮಾಡಬಹುದು ಎಂದು ತಿಳಿಸಿದ್ದಾರೆ. ಜೆ.ಎಫ್.ಫೀಟ್ ಮತ್ತು ಎಫ್.ಡಬ್ಲೂ. ಥಾಮಸ್ ಮುಂತಾದವರು 'ಇದು ಬಹು ಕಷ್ಟಸಾಧ್ಯವಾದ ಕೆಲಸ'

ಎಂದರು. ಪ್ರೊಫೆಸರ್ ರಂಗಾಚಾರ್ಯರು 'ಇದೊಂದು ಉತ್ತಮ ಕೃತಿ ಇವರ ಒಂದೊಂದು ಪುಟದಲ್ಲಿಯು ಕೃತಿಕಾರನ ಅಮೋಘವಾದ ದುಡಿಮೆಯು, ಚಿಂತನೆಯೂ ಎದ್ದು ಕಾಣುತ್ತದೆ' ಎಂದರೆ; ಶಾಮರಾಯರು 'ಇದು ವಿಶೇಷ ಶ್ರಮ, ವ್ಯಾಸಂಗ ಮತ್ತು ಸಂಶೋಧನೆಗಳ ಫಲ' ಎಂದರು.

ಬೆನಗಲ್ ರಾಮರಾಯರು ತಮ್ಮ ಅಮರವಾದ ಕೀರ್ತಿ ಸ್ಥಾಪನೆಗೆ ಇದೊಂದೇ ಕೃತಿ ಸಾಕು' ಎಂದರು. ಕೆಲವು ಪತ್ರಿಕೆಗಳಂತೂ ಕವಿಚರಿತೆ ಸಂಪುಟಗಳ ಸಿದ್ಧತೆಯಲ್ಲಿ ನರಸಿಂಹಾಚಾರ್ಯರು ತೋರಿದ ಶ್ರದ್ಧೆ ಮತ್ತು ಆಸಕ್ತಿಯನ್ನು ಮುಕ್ತಕಂಠದಿಂದ ಹೊಗಳಿವೆ: ಇಂಡಿಯನ್ ಆಂಟಿಕ್ವರಿ ಪತ್ರಿಕೆಯು(೩೭ನೇ ಸಂಪುಟ ೨೫೫ನೇ ಪುಟ) 'ಅನೇಕ ಹಸ್ತಪ್ರತಿಗಳ ಸಂಗ್ರಹಗಳ ಆಧಾರದ ಮೇಲೆ ರಚಿತವಾದ ಸಂಪೂರ್ಣ ಕೃತಿ ಇದು' ಎಂದು ಅಭಿಪ್ರಾಯಪಟ್ಟಿತು. ಮದರಾಸ್ ಮೈಲ್ ಪತ್ರಿಕೆಯು (೨೬/೧೧/೧೯೦೮) 'ಪ್ರಾಚ್ಯ ಸಂಶೋಧನೆಯಲ್ಲಿ ಇದೊಂದು ವಿಶೇಷ ಘಟನೆ' ಎಂದಿತು.

'ಇದೊಂದು ಸಂಶೋಧನೆಯ ಪ್ರತೀಕವಲ್ಲದೆ ವಿಷಯಗಳ ಗಣಿಯೇ ಆಗಿದೆ', "ಇದೊಂದು ಸ್ವತಂತ್ರ ಮೂಲ ಸಂಶೋಧನೆಯ ಸ್ಮಾರಕ', 'ಇದು ಸಾಮಾನ್ಯ ಕೆಲಸವಲ್ಲ, ಇಂತಹ ಕೃತಿ ಇದುವರೆಗೆ ಕನ್ನಡದಲ್ಲಿಲ್ಲ', 'ಈ ಚರಿತ್ರೆಯಲ್ಲಿ ಹೇಳಿರುವ ವಿಷಯಗಳನ್ನೆಲ್ಲ ಈ ಪತ್ರಿಕೆಯಲ್ಲಿ ಬರೆಯುವುದು ಸಾಧ್ಯವಿಲ್ಲ' - ಇತ್ಯಾದಿಯಾಗಿ ಇಂಡಿಯನ್ ಸ್ಪೆಕ್ಟೇಟರ್ (೨೦/೧೦/೧೯೧೭) ಮೈಸೂರು ಸ್ಟಾಟೆಂಡರ್, ನಡೆಗನ್ನಡಿ ಮುಂತಾದ ಪತ್ರಿಕೆಗಳು ಪ್ರಶಂಸೆ ವ್ಯಕ್ತಪಡಿಸಿವೆ. ಇಂಗ್ಲಿಷ್ ಪತ್ರಿಕೆಗಳಾದ 'ರಾಯಲ್ ಏಷ್ಯಾಟಿಕ್ ಸೊಸೈಟಿಯ ಪತ್ರಿಕೆ', 'ಮಿಥಿಕ್ ಸೊಸೈಟಿಯ ಪತ್ರಿಕೆ', 'ಹಿಂದೂ ಮತ್ತು ಈವಿನಿಂಗ್ ಮೇಲ್ ಪತ್ರಿಕೆಗಳು 'ಇಂತಹ ನಾಯಕ ಕೃತಿಯನ್ನು ನರಸಿಂಹಾಚಾರ್ಯರಲ್ಲದೆ ಮತ್ತಾರಿಂದಲೂ ರಚಿಸಲು ಸಾಧ್ಯವಾಗುತ್ತಿರಲಿಲ್ಲವೆಂದು ತಿಳಿಸಿ ಮೂರು ಸಂಪುಟಗಳ ಉಪೋದ್ಘಾತವನ್ನು ಬಹುವಾಗಿ ಶ್ಲಾಘಿಸಿವೆ. ಕನ್ನಡದ ಪ್ರತಿಷ್ಠಿತ ಸಾಹಿತ್ಯ ಪತ್ರಿಕೆಗಳಲ್ಲಿ ಒಂದಾದ ಪ್ರಬುದ್ಧ ಕರ್ನಾಟಕವು ಕವಿಚರಿತೆಯನ್ನ ಈ ರೀತಿ ವಿಮರ್ಶಿಸಿತು :

'ಅಮೆರಿಕವನ್ನು ನಿರ್ಮಿಸಿದಾತನೇನೋ ಕೊಲಂಬಸಲ್ಲ. ಆತನಿಂದ ಎಷ್ಟೋ ಸಹಸ್ರಕಾಲಕ್ಕೆ ಹಿಂದಿನಿಂದಲೇ ಅದಿದ್ದಿತ್ತು ಎಂಬುದೆಷ್ಟು ಯಥಾರ್ಥವೋ ಅದನ್ನು ಕಂಡು ಹಿಡಿದು ಪಡುವಣಿಗರ ನಾಗರಿಕತೆಗೆ ಅದನ್ನು ಅನುಗೊಳಿಸಿದವನು ಆತನೆಂಬುದು ಅಷ್ಟೇ ಯಥಾರ್ಥ. ಹಾಗೆಯೇ ಶ್ರೀಮಾನ್ ನರಸಿಂಹಾಚಾರ್ಯರಿಂದ ಎಷ್ಟು ಶತಕಗಳ ಹಿಂದಿನಿಂದಲು ಕನ್ನಡ ಸಾಹಿತ್ಯವೂ ಬೆಳೆಯುತ್ತಲೇ ಬರುತ್ತದೆಂಬುದೇನೂ ಹೊಸ ಮಾತಲ್ಲ. ಆದರೆ ಅದರ ಇತಿಹಾಸವನ್ನು ಎಷ್ಟು ಪ್ರಯತ್ನದಿಂದ ಎಷ್ಟು ಪರಿಶ್ರಮದಿಂದ, ಎಷ್ಟು ತಾಳ್ಮೆಯಿಂದ, ಎಷ್ಟು ವೈದುಷ್ಯದಿಂದ ಗ್ರಂಥೀಕರಿಸಿ ಇಷ್ಟು ವಿಫುಲವಾದ ಇಷ್ಟು ಪ್ರಶಸ್ತವಾದ ಇಷ್ಟು ಮನೋಜ್ಞವಾದ ಸಾಹಿತ್ಯವು ನಮಗಿದೆ ಎಂದು ಕನ್ನಡ ನಾಡಿನ ಅವಗಾಹನೆಗೆ ತಂದವರೆಂದರೆ ಈ ವಿದ್ಯಾವೃದ್ಧರೆ. ಆದುದರಿಂದ ಕನ್ನಡಿಗರ ತಿಳುವಳಿಕೆಯ ಬಗ್ಗೆ ಕರ್ನಾಟಕ ಕವಿಚರಿತ್ರೆ ಎಂಬೀ ಘಂಟಾ ಪಥವನ್ನು ರಚಿಸಿ, ನಮ್ಮಿಂದ ಅಗಲಿ ಹೋದಂತಿದ್ದ ನಮ್ಮ ಸಾಹಿತ್ಯದ ಪೂರ್ವಲೋಕವನ್ನು ನಮಗೆ ನೆರೆ ಸರ್ವಥಾ ಯಥಾರ್ಥವಲ್ಲದೆ ಅತ್ಯುಕ್ತಿಯಾಗದು ......ಕನ್ನಡ

ಸಾಹಿತ್ಯೇತಿ ಗಿಬ್ಬನ್ನನ ರೋಮ ರಾಜ್ಯದ ವಿಧ್ವಂಸದ ಇತಿಹಾಸದಂತೆ ಕವಿಚರಿತೆಯ ಈ ಮೂರು ಸಂಪುಟಗಳು ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಚಿರಕಾಲ ಅಗ್ರಗಣ್ಯವಾಗಿರುವುವು ಎಂಬಲ್ಲಿ ಸಂದೇಹವಿಲ್ಲ'.

ವಿಶ್ವಬಂಧು ಪತ್ರಿಕೆ ವರದಿ ಮಾಡಿದ್ದು ಹೀಗೆ : "ಕರ್ನಾಟಕ ಭಾಷೆಯ ಅನುಪಮ ಸೇವೆ ಮಾಡಿರುವವರಲ್ಲಿ ಪ್ರಾಕ್ತನ ವಿಮರ್ಶ ವಿಚಕ್ಷಣ ರಾವ್‌ಬಹದ್ದೂರ್ ಆರ್.ನರಸಿಂಹಾಚಾರ್ಯರು ಅಗ್ರಗಣ್ಯರೆಂದರೆ ಇದನ್ನು ಗುಣೈಕ ಪಕ್ಷಪಾತಿಗಳು ವಸ್ತುಸ್ಥಿತಿ ಕಥನವೆನ್ನುವರಲ್ಲದೆ ಪ್ರಶಂಸಾ ಕಥನವನ್ನು ಪುರಾತತ್ತ್ವಾನ್ವೇಷಣ ವಿಷಯದಲ್ಲಿಯೂ ಕರ್ನಾಟಕ ಕವಿಗಳ ಕಾಲ ನಿರ್ಣಯದ ಮತ್ತು ಗ್ರಂಥ ವಿಮರ್ಶೆಯ ವಿಷಯದಲ್ಲಿಯೂ ಶ್ರೀ ಆಚಾರ್ಯರವರು ಕರ್ಣಾಟಕದಲ್ಲಿ ಒಂದು ನೂತನ ವಾತಾವರಣವನ್ನುಂಟು ಮಾಡುವಲ್ಲಿ ಪ್ರಥಮಸ್ಥಾನಾಪನ್ನರಾಗಿ ಮಾರ್ಗದರ್ಶಕರಾಗಿರುತ್ತಾರೆಂದರೆ ತಪ್ಪಾಗದು. ಈ ಮಹನೀಯರ ಅಗಾಧ ಪರಿಶ್ರಮದ ಫಲರೂಪವಾಗಿ ಕರ್ನಾಟಕಕ್ಕಿಂದು ರತ್ನತ್ರಯಗಳಂತೆ ಕರ್ನಾಟಕ ಕವಿಚರಿತ್ರೆಯ ಮೂರು ಸಂಪುಟಗಳು ದೊರಕಿವೆ. ಇವು ಕರ್ನಾಟಕ ಸಾಹಿತ್ಯ ಸಮುದ್ರದಮಥನದಿಂದ ಶ್ರೀಆಚಾರ್ಯರವರು ಕರ್ನಾಟಕಕ್ಕೆ ಮಾಡಿರುವ ಉಪಕಾರಕ್ಕೋಸ್ಕರ ನಾವು ಅವರಿಗೆ ಅತ್ಯಂತ ಕೃತಜ್ಞರಾಗಿರುತ್ತೇವೆ".

ಕವಿಚರಿತೆಯು ಪ್ರಕಟವಾದ ಸಂದರ್ಭದಲ್ಲಿ ಅದರ ಅಗತ್ಯತೆ ಅನಿವಾರ್ಯತೆ ಎಷ್ಟಿತ್ತು ಎಂಬುದನ್ನ ಮೇಲಿನ ಮಾತುಗಳಿಂದ ಗ್ರಹಿಸಬಹುದಾಗಿದೆ. "ಈಗ ನಾಲ್ಕು ದಶಕಗಳಿಗೆ ಮೇಲ್ಪಟ್ಟ ದೀರ್ಘಾವಧಿಯ ಶೋಧನೆ, ಅಧ್ಯಯನ, ಚಿಂತನಗಳ ಫಲವಾಗಿ ಅನೇಕವಲ್ಲವಾದರೂ ಎಷ್ಟೋ ಮಟ್ಟಿಗೆ ಹೊಸಸಂಗತಿಗಳು ಬೆಳಕಿಗೆ ಬಂದಿವೆ. ಹಳೆಯ ಸಂಗತಿಗಳಿಗೆ ಮಾರ್ಪಾಡುಗಳೂ, ಮೇಲ್ಪಾಡುಗಳೂ ಸಾಧ್ಯವಾಗಿವೆ. ಈ ದೃಷ್ಟಿಯಿಂದ ಕವಿಚರಿತ್ರೆಯಲ್ಲಿ ನಿರೂಪಿತವಾಗಿರುವ ವಿಷಯವೆಲ್ಲ ನಿರ್ದಿಷ್ಟವೂ ನಿರ್ವಿವಾದವೂ ಆಗಿವೆ ಎನ್ನುವಂತಿಲ್ಲ. ಸಂಶೋಧನ ವಿಮರ್ಶೆಯಲ್ಲಿ ಇದು ಎಂದೂ ಸಹಜವಾದ್ದೇ. ಆಚಾರ್ಯರ ಜೀವಿತಕಾಲದಲ್ಲಿಯೇ ಹಲವು ಟೀಕೆಗಳೂ ವಿಮರ್ಶೆಗಳೂ ಬಂದುವು. ಅಂತಹ ವಿಮರ್ಶೆಗಳನ್ನು ಬರೆದವರಲ್ಲಿ ಎ.ವೆಂಕಟಸುಬ್ಬಯ್ಯನವರು ಅಗ್ರಗಣ್ಯರಾಗಿದ್ದರು. ಇವರಿಬ್ಬರ ನಡುವೆ ಜರುಗಿದ ಅಕ್ಷೇಪಣೆಗಳೂ ಪ್ರತ್ಯುಕ್ತಿಗಳೂ ಕನ್ನಡ ಸಾಹಿತ್ಯ ಚರಿತ್ರೆಯ ವಿಷಯದಲ್ಲಿ ಅವರಿಗಿದ್ದ ಆಸಕ್ತಿ ವೈದುಷ್ಯಗಳಿಗೆ ನಿದರ್ಶಕಗಳಾಗಿವೆ. ಅಯ್ಯನವರ ವಾದ ಪ್ರತಿವಾದಗಳಿಗೆ ಆಚಾರ್ಯರು ಸಮಾಧಾನಗಳನ್ನು ಬರೆದಿದ್ದಾರೆ. ಈ ಬರೆಹಗಳಲ್ಲಿ ಒಪ್ಪಿಗೆ ನಿರಾಕರಣೆ ಎರಡರ ಸಂದರ್ಭಗಳೂ ಇವೆ. ಕಾಲಗತಿಯಲ್ಲಿ ಹೊಸ ಸಾಕ್ಷಾಧಾರಗಳು ದೊರೆತ ಹಾಗೆ ಅಧ್ಯಯನ ವಿಮರ್ಶೆಗಳು ಮತ್ತೆ ಮತ್ತೆ ನಡೆದ ಹಾಗೆ, ಇಬ್ಬರ ವಿಮರ್ಶೆಗಳಲ್ಲಿಯೂ ಸ್ವೀಕಾರಯೋಗ್ಯವಾದ ಸಂಗತಿಗಳೂ ಇವೆ. ತ್ಯಾಜ್ಯವಾಗುವ ಸಂಗತಿಗಳೂ ಇವೆ. ಇಬ್ಬರೂ ಸಮಾನವಾಗಿ ನಮ್ಮ ಗೌರವಕ್ಕೆ ಪಾತ್ರರಾಗಿದ್ದಾರೆ".

ಕಾವ್ಯದೊಂದಿಗೆ ಕವಿಯ ಬದುಕು ಮತ್ತು ಅವನ ಸಮಕಾಲೀನತೆ ಕೃತಿಯ ವಿಮರ್ಶೆಗೆ ಪೂರಕವಾದ ಸಾಮಗ್ರಿಯನ್ನು ಒದಗಿಸುತ್ತದೆ. ಆದ್ದರಿಂದ ಕವಿಚರಿತೆ ಎಂಬುದು ಚಾರಿತ್ರಿಕ ವಿಮರ್ಶೆಗೆ ಬಹುಮುಖ್ಯವಾಗಿ ಪ್ರಮುಖ ಆಕರವಾಗುತ್ತದೆ. ಕನ್ನಡದಲ್ಲಿ ಪ್ರಕಟವಾದ 'ಕರ್ನಾಟಕ ಕವಿಚರಿತ್ರೆ' ಈ ದೃಷ್ಟಿಯಿಂದಲೂ ಗಮನಾರ್ಹವೆನಿಸುತ್ತದೆ.

ಕವಿ, ಕವಿಯ ಕಾಲ, ಕೃತಿ, ಜೀವನ ವೃತ್ತಾಂತ - ಮುಂತಾದ ವಿಷಯಗಳಿರುವುದರಿಂದ ಇದೊಂದು ಬಹುಮುಖ್ಯ ಆಕರಗ್ರಂಥ. ನಂತರ ಕವಿಯ ಒಂದೊಂದು ಗ್ರಂಥವನ್ನ ಎತ್ತಿಕೊಂಡು ಅದರ ವಸ್ತು, ಭಾಷೆ, ಶೈಲಿ, ಸ್ವರೂಪ, ಪ್ರತಿಪಾದನೆ, ವಿಷಯ, ಪ್ರೇರಣೆ-ಪ್ರಭಾವ - ಇತ್ಯಾದಿಗಳನ್ನೆಲ್ಲ ಚರ್ಚೆಗೆ ಒಳಪಡಿಸಲಾಗಿದೆ. ಕವಿಕಾವ್ಯ ಪರಂಪರೆಯನ್ನ ನಂತರದ ಪೀಳಿಗೆಯವರಿಗೆ ತಲುಪಿಸುವ, ಮನವರಿಕೆ ಮಾಡಿಕೊಡುವ ದೃಷ್ಟಿಯಿಂದಲೂ ಇದು ಮಹತ್ವಪೂರ್ಣ ಗ್ರಂಥವಾಗುತ್ತದೆ. ಕವಿಯೊಬ್ಬನ ಹಲವಾರು ಸಾಹಿತ್ಯಕ ಅಂಶಗಳು ಮನದಟ್ಟಾಗಬೇಕಾದರೆ ಆತನ ಬದುಕು ಮತ್ತು ಬರಹಗಳ ಪೂರ್ಣ ಅರಿವು ಇರಬೇಕಾಗುತ್ತದೆ. ಈ ದೃಷ್ಟಿಯಿಂದ ಸುಮಾರು ೪೦೦ ರಿಂದ ೧೯ನೇ ಶತಮಾನದವರೆಗಿನ ಅವಧಿಯಲ್ಲಿ ಬರುವ ಕವಿಗಳ ಮತ್ತು ಕಾವ್ಯಗಳನ್ನ ಪುನರ್ ವ್ಯಾಖ್ಯಾನ ಮಾಡಲು ರಾ. ನ. ಅವರು ರಚಿಸಿದ ಕವಿಚರಿತೆಯ ಮೂರೂ ಸಂಪುಟಗಳು ಅತ್ಯಗತ್ಯವಾದ ಆಕರಗಳೆನಿಸುತ್ತವೆ. ಈ ಕವಿಚರಿತೆಯ ಕೆಲಸವನ್ನ ಮೈಸೂರು, ಬೆಂಗಳೂರು ವಿಶ್ವವಿದ್ಯಾನಿಲಯಗಳು ಪ್ರಕಟಿಸುತ್ತಾ ಬಂದವು. ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆಯ' ಸಂಪುಟಗಳು, ಕನ್ನಡ ಅಧ್ಯಯನ ಕೇಂದ್ರದ (ಬೆಂಗಳೂರು ವಿಶ್ವವಿದ್ಯಾನಿಲಯ) ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟಗಳು, ರಾ. ನ. ಅವರು ಮಾಡಿದ ಕೆಲಸವನ್ನ ಅಚ್ಚುಕಟ್ಟಾಗಿ ಮುಂದುವರಿಸಿವೆ. ಸಮಕಾಲೀನತೆಯ ಬಗೆಗೆ, ಚರಿತ್ರೆಯ ಬಗೆಗೆ ಗಮನಹರಿಸಬೇಕು ಅದು ಬರಹಗಾರನಿಗೆ ಮುಖ್ಯವೂ ಹೌದು ಎಂಬುದನ್ನ ಕವಿಚರಿತೆ ಸಾಬೀತುಪಡಿಸಿದೆ. ಸಮಕಾಲೀನ ಸಾಹಿತ್ಯವನ್ನು ಕಟ್ಟಿಕೊಡುವ ಸಂದರ್ಭದಲ್ಲಿ ಅಂಥ ಚಾರಿತ್ರಿಕ ಪ್ರಜ್ಞೆಯನ್ನ ಕವಿಚರಿತೆ ಸಂಪುಟಗಳು ನೆನಪುಮಾಡಿಕೊಡುವಲ್ಲಿ ಯಶಸ್ಸನ್ನು ಹೊಂದಬಲ್ಲವು.

## ಎಪಿಗ್ರಾಫಿಯ ಕರ್ನಾಟಕ (ಸಂಪುಟ-೨)

೧೮೮೪ರಲ್ಲಿ ಮೈಸೂರಿನಲ್ಲಿ ಪುರಾತತ್ವ ಇಲಾಖೆ ಪ್ರಾರಂಭವಾಯಿತು. ಆಗ ಬಿ.ಎಲ್.ರೈಸ್ ಅವರು ಅಲ್ಲಿ ಒಪ್ಪೊತ್ತಿನ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದರು. "ಬಿ.ಎಲ್.ರೈಸ್ ಅವರು ೧೯೦೬ರವರೆಗಿನ ಮುಂದಿನ ೩೩ ವರ್ಷಗಳ ಅವಧಿಯಲ್ಲಿ ಅಂದಿನ ಮೈಸೂರಿನ ರಾಜ್ಯದ ೮ ಜಿಲ್ಲೆಗಳಲ್ಲಿ ಮತ್ತು ಆಗ ಪ್ರತ್ಯೇಕ ರಾಜ್ಯವಾಗಿದ್ದ ಕೊಡಗಿನಲ್ಲಿ ೮೮೬೯ ಶಾಸನಗಳನ್ನು ಸಂಗ್ರಹಿಸಿದರು. ಈ ಶಾಸನಗಳನ್ನೆಲ್ಲಾ ಲಿಪ್ಯಂತರ, ಭಾಷಾಂತರಗಳೊಡನೆ ಅವರು 'ಎಪಿಗ್ರಾಫಿಯ ಕರ್ನಾಟಕ' ಮಾಲೆಯಲ್ಲಿ ಪಕಟಿಸಿದರು. ೧೨ ಸಂಪುಟಗಳ ಈ ಮಾಲೆಯ ಯೋಜನೆಯಂತೆ ಸಾಮಾನ್ಯವಾಗಿ ಒಂದು ಜಿಲ್ಲೆಯ ಶಾಸನಗಳು ಒಂದು ಸಂಪುಟದಲ್ಲಿ ಸೇರಿದವು. ಶ್ರವಣಬೆಳಗೊಳದ ಶಾಸನಗಳಿಗಾಗಿಯೇ ಒಂದು ಸಂಪುಟ (೨) ಮೀಸಲಾಯಿತು. ಇಂದಿನ ಮಂಡ್ಯ ಜಿಲ್ಲೆಯನ್ನ ಒಳಗೊಂಡ ಅಂದಿನ ಮೈಸೂರು ಹಾಗೂ ಶಿವಮೊಗ್ಗ ಜಿಲ್ಲೆಯ ಶಾಸನಗಳು ಎರಡೆರಡು ಸಂಪುಟಗಳಲ್ಲಿ (೩-೪ ಮತ್ತು ೭-೮) ಪ್ರಕಟವಾದವು. (ಎಪಿಗ್ರಾಫಿಯ ಕರ್ನಾಟಕ, ಸಂಪುಟ-೨, ೧೯೭೩).

ರೈಸರ ನಂತರ ಆರ್. ನರಸಿಂಹಾಚಾರ್ಯರು ಅಧಿಕಾರಕ್ಕೆ ಬಂದರು. ೧೬ ವರ್ಷಗಳ ಅಧಿಕಾರಾವಧಿಯಲ್ಲಿ ಸುಮಾರು ಐದುಸಾವಿರ ಶಾಸನಗಳನ್ನ ಪತ್ತೆಮಾಡಿದರು. ಅವುಗಳಲ್ಲಿ ಪ್ರಮುಖವೆನಿಸಿದವುಗಳನ್ನು ತಮ್ಮ ವಾರ್ಷಿಕ

ವರದಿಯಲ್ಲಿ ಪ್ರಕಟಿಸುತ್ತ ಬಂದರು. 'ಎಪಿಗ್ರಾಫಿಯ ಕರ್ನಾಟಕದ ಮಾಲೆಯ ಎರಡನೆಯ ಸಂಪುಟವನ್ನು (ಶ್ರವಣಬೆಳಗೊಳ) ಆಮೂಲಾಗ್ರವಾಗಿ ಪರಿಷ್ಕರಿಸಿ ೧೯೨೩ರಲ್ಲಿ ಹೊಸ ಆವೃತ್ತಿಯನ್ನು ಪ್ರಕಟಿಸಿದರು. ೧೮೮೯ರಲ್ಲಿ ರೈಸ್ ಅವರು ಪರಿಷ್ಕರಿಸಿದ್ದ ಪರಿಷ್ಕೃತ ಹಾಗೂ ವಿಸ್ತ್ರತ ರೂಪ ಇದು. ೧೯೦೮ರಿಂದಲೂ ಆರ್. ನರಸಿಂಹಾಚಾರ್ಯರು ಈ ಶಾಸನಗಳ ಪರಿಶೋಧದಲ್ಲಿ ತೊಡಗಿದ್ದರು. ೧೯೦೯ ರಿಂದ ೧೯೧೭ರ ಅವಧಿಯಲ್ಲಿ ಸುಮಾರು ನಾಲ್ಕು ಸಲ ಶ್ರವಣಬೆಳಗೊಳಕ್ಕೆ ಭೇಟಿ ನೀಡಿ ಶಾಸನಗಳ ಪರಿವೀಕ್ಷಣೆ ನಡೆಸಿದರು. ಅದರ ಫಲವಾಗಿ ಕ್ರಿ.ಶ. ಆರನೂರರಿಂದ ೧೮೮೯ರವರೆಗಿನ ಅವಧಿಯ ಶಾಸನಗಳು ಈ ಸಂಪುಟದಲ್ಲಿ ಸೇರಿದವು. ಹೊಸದಾಗಿ ೩೫೦ ಶಾಸನಗಳನ್ನು ಸೇರಿಸಿದ್ದರಿಂದಾಗಿ ಶಾಸನಗಳ ಒಟ್ಟು ಸಂಖ್ಯೆ ೫೦೦ ಆದಂತಾಯಿತು. ಶ್ರವಣಬೆಳಗೊಳದ ಬಸದಿಗಳ ವಿವರವನ್ನೂ ಒಳಗೊಂಡ ವಿಸ್ತಾರವಾದ ಉಪೋದ್ಘಾತವೂ ಅದರಲ್ಲಿದೆ. ವಾಸ್ತು, ಶಿಲ್ಪ, ಶಾಸನಸಾಹಿತ್ಯ, ಗೊಮ್ಮಟಮೂರ್ತಿ, ಭದ್ರಬಾಹುವಿಗೆ ಸಂಬಂಧಿಸಿದ ಐತಿಹ್ಯ ಕರ್ನಾಟಕ ಇತಿಹಾಸ, ಕನ್ನಡನಾಡು ನುಡಿ, ಜೈನಧರ್ಮ ಇತ್ಯಾದಿಗಳನ್ನು ಕುರಿತ ಸಾಕಷ್ಟು ವಿಷಗಳು ಈ ಉಪೋದ್ಘಾತದಲ್ಲಿ ಕಾಣಿಸುತ್ತದೆ. ದ್ರಾವಿಡ ಹಾಗೂ ಹೊಯ್ಸಳ ಶೈಲಿಯ ವಾಸ್ತುಶಿಲ್ಪಗಳ (೮ ರಿಂದ ೧೭ನೇ ಶತಮಾನದ ಅವಧಿ) ಮಾಹಿತಿ ಲಭ್ಯವಾಗುತ್ತದೆ. ಇಂಗ್ಲಿಷಿನ ಅನುವಾದವಿದ್ದು ಅಡಿಟಿಪ್ಪಣಿಯಲ್ಲಿ ಪಾರಿಭಾಷಿಕ ಪದಗಳ ವಿವರಣೆ ಇದೆ. ಬಿ.ಎಲ್.ರೈಸ್ ಅವರಂತೆ ಆರ್. ನರಸಿಂಹಾಚಾರ್ಯರು ಶಾಸನಗಳ ಅನ್ವೇಷಣಾ ಕಾರ್ಯವನ್ನು ಮೊದಲು ಕೈಗೊಂಡರೆಂಬುದು ಗಮನಾರ್ಹ ಅಂಶ. ಒಂದೇ ಸ್ಥಳದಲ್ಲಿ ೫೭೩ ಶಾಸನಗಳನ್ನು ಒಳಗೊಂಡಿರುವ ಶ್ರವಣಬೆಳಗೊಳದ ಮಹತ್ವ ಅದರಲ್ಲೂ ೫೦೦ ಶಾಸನಗಳನ್ನು ನರಸಿಂಹಾಚಾರ್ಯರು ಅನ್ವೇಷಣೆ ಮಾಡಿದ್ದಾರೆಂಬುದು ಗಮನಾರ್ಹ ಸಂಗತಿ. “ಇವು ಸಾಮಾನ್ಯವಾಗಿ ಕಟ್ಟಡ ರಚನೆ, ದಾನ, ದತ್ತಿ, ಯಾಂತ್ರಿಕರ ಉಲ್ಲೇಖ, ಸಮಾಧಿ, ಮರಣ ಮೊದಲಾದವುಗಳನ್ನು ತಿಳಿಸುತ್ತವೆ. ಅವುಗಳ ಹೃದಯದ ಒಳಪದರಿನಲ್ಲಿ ಪ್ರವೇಶಿಸಿದರೆ ಅಂದಿನ ರಾಜಕೀಯ ಜೀವನ, ಸಾಹಿತ್ಯ ಪ್ರತಿಗಳು, ಸಾಂಸ್ಕೃತಿಕ ಮೌಲ್ಯಗಳ ದರ್ಶನವಾಗುತ್ತದೆ” (ಡಾ.ಬಿ.ವಿ.ಶಿರೂರ, ಶ್ರವಣಬೆಳಗೊಳ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ೧೯೭೬ ಪುಟ-೭)

“ಆರ್. ನರಸಿಂಹಾಚಾರ್ಯರು ಉಳಿದ ಶಾಸನಗಳನ್ನು ಎಪಿಗ್ರಾಫಿಯ ಕರ್ನಾಟಕ ಸಂಪುಟಗಳಲ್ಲಿ ಅನುಬಂಧಗಳಾಗಿ ಪ್ರಕಟಿಸುವ ಸಿದ್ಧತೆಯನ್ನು ಮಾಡಿದರು. ಮುಂದೆ ಅವು ಐದು ಸಂಪುಟಗಳಲ್ಲಿ ಪ್ರತ್ಯೇಕವಾಗಿ ಪ್ರಕಟವಾದವು. ಇವರು ನಡೆಸಿದ ಶಾಸನ ಸಂಪಾದನಾ ಕಾರ್ಯ ನಿಷ್ಕೃಷ್ಟವಾದುದಾಗಿತ್ತು. ಇವರು ಸಂಗ್ರಹಿಸುವ ಹೊಸ ಶಾಸನಗಳಲ್ಲಿ ಇತಿಹಾಸದ ಮೇಲೆ ವಿನೂತನ ಬೆಳಕು ಚೆಲ್ಲುವ ನೂರಾರು ಶಾಸನಗಳಿವೆ. ಗಂಗವಂಶದ ಚರಿತ್ರೆಗಂತೂ ಇವುಗಳಲ್ಲಿ ಕೆಲವು ಅತ್ಯುಪಯುಕ್ತವಾದ ಮಾಹಿತಿಯನ್ನು ನೀಡುತ್ತವೆ. ಶಾಸನಗಳ ಸೊಗಸು, ಕಾವ್ಯಸೌಂದರ್ಯದ ಸ್ವರೂಪವನ್ನು ಕೆಲಮಟ್ಟಿಗಾದರೂ ತಿಳಿಯಲವಕಾಶವಾಗುವಂತೆ ಶಾಸನ ಪದ್ಯಮಂಜರಿಯನ್ನು ಇವರು ೧೯೨೩ರಲ್ಲಿ ಪ್ರಕಟಿಸಿದರು' (ಎ.ಕ.ಸಂಪುಟ-೩).

ಶಾಸನಗಳ ಸಂಗ್ರಹಣೆ ಜೊತೆಗೆ ನಾಡಿನಾದ್ಯಂತ ಇರುವ ದೇವಾಲಯ, ಬಸದಿ - ಇತ್ಯಾದಿ ಪ್ರಾಚೀನ ಸ್ಮಾರಕಗಳ ಸಂಗ್ರಹವಾದ ವಿವರಣೆಯನ್ನ ವಾರ್ಷಿಕ ವರದಿಗಳಲ್ಲಿ ನೀಡುತ್ತಾ ಬಂದ ನರಸಿಂಹಾಚಾರ್ಯರು ಸುಮಾರು ಒಂದು ಸಾವಿರ ಕಟ್ಟಡಗಳ ವಿವರಗಳು ಅದರಲ್ಲಿ ದೊರಕುವಂತೆ ಮಾಡಿದ್ದು ಗಮನಾರ್ಹ ಅಂಶ.

"ಅನೇಕ ಶ್ರೇಷ್ಠ ಕಲಾಕೃತಿಗಳಾದ ಹೊಯ್ಸಳ, ದ್ರಾವಿಡ ದೇವಾಲಯಗಳನ್ನು ಇವರು ಬೆಳಕಿಗೆ ತಂದರು. ಚಾಲುಕ್ಯ ಶಿಲ್ಪದ ಭಾಗವೆಂದು ಪರಿಗಣಿಸಲ್ಪಟ್ಟಿದ್ದ ಹೊಯ್ಸಳ ಕಟ್ಟಡಗಳಲ್ಲಿ ಕಂಡುಬರುವ ಶೈಲಿಯ ವಿಶಿಷ್ಟತೆಯನ್ನು ಎತ್ತಿ ತೋರಿಸಿ ಅದಕ್ಕೆ ಹೊಯ್ಸಳ ಶೈಲಿಯೆಂಬ ಪ್ರತ್ಯೇಕವಾದ ಹೆಸರು ಕೊಟ್ಟ ಕೀರ್ತಿ ನರಸಿಂಹಾಚಾರ್ಯರದು. ಸೋಮನಾಥಪುರದ ಕೇಶವ, ಬೇಲೂರಿನ ಚೆನ್ನಕೇಶವ ಮತ್ತು ದೊಡ್ಡಗದ್ದವಳ್ಳಿಯ ಮಹಾಲಕ್ಷ್ಮಿ ದೇವಾಲಯಗಳ ಪರಿಚಯವನ್ನು ಮಾಡಿಕೊಡುವ ಪ್ರತ್ಯೇಕವಾದ ಮೂರು ಕಿರುಹೊತ್ತಗೆಗಳನ್ನು ಇವರು ಹೊರತಂದರು. ಅನೇಕ ಶಿಲ್ಪಿಗಳನ್ನು ಮತ್ತು ಅವರ ಕೃತಿಗಳನ್ನು ತಮ್ಮ ವಾರ್ಷಿಕ ವರದಿಗಳಲ್ಲಿ ಇವರು ಪರಿಚಯ ಮಾಡಿಕೊಟ್ಟಿದ್ದೂ ಸಹ ವಿಶೇಷ ಸಂಗತಿ. (ಎ. ಕ. ಸಂ.೧, ೧೯೭೨)

## ಶಾಸನ ಪದ್ಯಮಂಜರಿ

ಆರ್. ನರಸಿಂಹಾಚಾರ್ ಅವರ 'ಶಾಸನ ಪದ್ಯಮಂಜರಿ' ಪ್ರಕಟವಾದದ್ದು ಅಕ್ಟೋಬರ್ ೧೯೨೩ರಲ್ಲಿ, ಕನ್ನಡ ಶಾಸನಗಳಲ್ಲಿರುವ ಕ್ರಿ ಶ. ೭೦೦ ರಿಂದ ೧೪೬೫ರ ತನಕ) ಪದ್ಯಗಳಲ್ಲಿ ಉತ್ತಮವಾದುವನ್ನ ಆಯ್ಕೆ ಮಾಡಿ ಒಂದೆಡೆ ಸಂಕಲಿಸಿರುವ ಪದ್ಯಗಳ ಸಂಕಲನ. "ಪದ್ಯಗಳನ್ನು ಆಯುವಾಗ ಐತಿಹಾಸಿಕ ಸಾಮಾಜಿಕ ಪ್ರಾಮುಖ್ಯವೂ ಸಾಹಿತ್ಯ ಸೌಂದರ್ಯದ ಆಕರ್ಷಣೆಯೂ ಮಿಳಿತವಾಗಿರುವಂತಹವನ್ನೇ ಆಯ್ದುಕೊಂಡಿರುವುದು ಮೆಚ್ಚತಕ್ಕದ್ದಾಗಿದೆ. ಹೀಗೆ ಆಯ್ಕೆಯಾದ ಎಲ್ಲ ಪದ್ಯಗಳಲ್ಲಿಯೂ ಶಾಸನಪಾಠದೊಳಗಿನ ಸ್ಖಾಲಿತ್ಯಗಳನ್ನೆಲ್ಲ ತಿದ್ದಿ ಅವನ್ನು ಕವಿರಚಿತವಾದ ಪಾಠದ ಶುದ್ಧ ರೂಪಕ್ಕೆ ತಂದಿರುವುದು ಆಚಾರ್ಯರ ಸಂಪಾದನಾ ಕೌಶಲ, ಪಾಂಡಿತ್ಯ, ಔಚಿತ್ಯ, ವಿವೇಕಗಳನ್ನು ತೋರಿಸುವ ಸಂಗತಿಯಾಗಿದೆ. ಆರಂಭದಲ್ಲಿ ಶಾಸನಗಳು ಕಂಡುಬಂದ ಪ್ರದೇಶಗಳ ವರ್ಣಾನುಕ್ರಮಣಿ, ಶಾಸನಗಳಲ್ಲಿ ಹೇಳಿರುವ ರಾಜವಂಶಗಳ ಪಟ್ಟಿಗಳಿದ್ದು, ಆನಂತರದಲ್ಲಿ ಇಂಗ್ಲಿಷ್ ಮತ್ತು ಕನ್ನಡಗಳಲ್ಲಿ ಪರಿಚಯಾತ್ಮಕವಾದ ಅವತರಣಿಕೆಗಳಿವೆ. ಗ್ರಂಥದ ಕೊನೆಗೆ ಕಠಿಣಪದಗಳ ಅರ್ಥ, ವಿರಳವಾಗಿ ವ್ಯಾಕರಣಾಂಶ ಛಂದೋವೈಲಕ್ಷಣ್ಯ ಮುಂತಾದ ಉಪಯುಕ್ತಾಂಶಗಳನ್ನು ಒಳಗೊಂಡ ಬೆಲೆಯುಳ್ಳ ಟಿಪ್ಪಣಿಗಳ ಭಾಗವಿದೆ. ಒಂದು ಹೆಚ್ಚಿನ ಶಾಸನದ ಪರಿಶಿಷ್ಟವೂ ಇದೆ" (ಪ್ರಾಕ್ತನ, ಪುಟ : Xxviii)

ಶಾಸನಗಳ ಮಹತ್ವವನ್ನು ಕಾವ್ಯ ಸೌಂದರ್ಯವನ್ನು ಮೆಚ್ಚಿಕೊಂಡವರು ಆರ್. ನರಸಿಂಹಾಚಾರ್ ಅವರು, ಶಾಸನಪದ್ಯಮಂಜರಿಯ ಸ್ವರೂಪವನ್ನ ಕುರಿತು ಅಕ್ಟೋಬರ್ ೧೦, ೧೯೨೩ರಂದು ಬರೆದಿರುವ ಪ್ರಥಮ ಮುದ್ರಣದ ಅವತರಣಿಕೆಯಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯದ ಪೂರ್ಣ ವಿವರ ಇಂತಿದೆ: "ಕರ್ಣಾಟಕ ಕವಿಚರಿತೆಯಲ್ಲಿ ಇಂಥ ಕವಿಗಳಿಂದ ರಚಿತವಾದುವು ಎಂದು ತಿಳಿದು ಬಂದ ಕೆಲವು ಶಾಸನಗಳಿಂದ ಮಾತ್ರ ಸ್ವಲ್ಪ

ಭಾಗಗಳನ್ನು ಅನುವಾದ ಮಾಡಿದ್ದೇನೆ. ಅದರೆ ಮೈಸೂರು ಸಂಸ್ಥಾನದಲ್ಲಿಯೂ ಇತರ ಪ್ರದೇಶಗಳಲ್ಲಿಯೂ ಕವಿಗಳು ಗೊತ್ತಿಲ್ಲದಿದ್ದರೂ ಉತ್ತಮ ಕಾವ್ಯಸರಣಿಯಲ್ಲಿ ರಚಿತವಾದ ಅನೇಕ ಕನ್ನಡ ಶಾಸನಗಳು ದೊರೆಯುತ್ತವೆ. ಇವುಗಳೂ ಕನ್ನಡಿಗರ ಅವಲೋಕನಕ್ಕೆ ಯೋಗ್ಯವಾದುವು; ಇವುಗಳನ್ನು ಅವರ ದೃಷ್ಟಿಪಥಕ್ಕೆ ತಂದಕೂಡಲೆ ಅವರು ಓದಿ ಆನಂದಿಸುವರು ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಈ ಶಾಸನಗಳು ಹೆಚ್ಚು ಬೆಲೆಯುಳ್ಳ ದೊಡ್ಡ ದೊಡ್ಡ ಸಂಪುಟಗಳಲ್ಲಿಯೂ ಮಾಸಿಕ ಅಥವಾ ತ್ರೈಮಾಸಿಕ ಪತ್ರಿಕೆಗಳಲ್ಲಿಯೂ ಅಡಗಿರುವುದರಿಂದ ಅನೇಕರಿಗೆ ಸುಲಭವಾಗಿ ಸಿಕ್ಕಲಾರವು; ಒಂದು ವೇಳೆ ಈ ಸಂಪುಟಗಳನ್ನೂ ಪತ್ರಿಕೆಗಳನ್ನೂ ದೊರಕಿಸಿಕೊಂಡರೂ ಬೇಕಾದ ಶಾಸನಗಳನ್ನು ಹುಡುಕಿ ತೆಗೆವುದು ಶ್ರಮಸಾಧ್ಯವು. ಕನ್ನಡಿಗರಿಗೆ ಈ ಶ್ರಮವನ್ನು ತಕ್ಕಮಟ್ಟಿಗೆ ತಪ್ಪಿಸಿ ಈ ಕವಿತೆಯ ಶೈಲಿಯ ಮತ್ತು ಸೊಬಗಿನ ರಸವನ್ನು ಸ್ವಲ್ಪಮಟ್ಟಿಗಾದರೂ ಆಸ್ವಾದನಮಾಡಲು ಅವಕಾಶವುಂಟು ಮಾಡಬೇಕೆಂಬ ಉದ್ದೇಶದಿಂದ ಕೆಲವು ಶಾಸನಗಳನ್ನು ಆರಿಸಿ ಅವುಗಳಿಂದ ಯೋಗ್ಯವಾದ ಭಾಗಗಳನ್ನು ಈ ಪುಸ್ತಕದಲ್ಲಿ ಸೇರಿಸಿದ್ದೇನೆ. ಇವು ಕನ್ನಡ ನಾಡಿನವರ ಕೃತಿಗಳಾದುದರಿಂದ ಇವುಗಳ ಉತ್ತಮಸರಣಿ ಕನ್ನಡಿಗರ ಹೃದಯದಲ್ಲಿ ಸ್ವಭಾವವಾಗಿ ಹೆಮ್ಮೆಯನ್ನು ಉಂಟುಮಾಡದೆ ಇರಲಾರದು.

"ಈ ಪುಸ್ತಕಕ್ಕಾಗಿ ಆರಿಸಿದ ಶಾಸನಗಳ ಸಂಖ್ಯೆ ೨೮೩ (ಈ ಮುದ್ರಣದಲ್ಲಿನ ಶಾಸನಗಳ ಸಂಖ್ಯೆ ೩೪೫, ಬೊಂಬಾಯ್-ಕರ್ನಾಟಕದ ಶಾಸನಗಳ ಸಂಖ್ಯೆಯೂ ಹೆಚ್ಚಿದೆ. ಜೊತೆಗೆ ಮದ್ರಾಸ್-ಕರ್ನಾಟಕ, ಹೈದರಾಬಾದ್-ಕರ್ನಾಟಕ ಶಾಸನಗಳ ಜೊತೆ ಇತರ ಪ್ರದೇಶಗಳ ಶಾಸನಗಳೂ ಸೇರಿವೆ.) ಇವುಗಳಲ್ಲಿ, ಬಾಂಬೆ ಪ್ರಾಂತದಲ್ಲಿರುವ ೨೪ ಶಾಸನಗಳನ್ನು ಬಿಟ್ಟರೆ, ಉಳಿದುವೆಲ್ಲಾ ಮೈಸೂರು ಸಂಸ್ಥಾನದಲ್ಲಿಯೇ ಇವೆ. ಒಟ್ಟು ಶಾಸನಗಳಿರುವ ಪ್ರದೇಶಗಳು ೫೯: ಮೈಸೂರು ಸಂಸ್ಥಾನದಲ್ಲಿ ೩೯, ಬಾಂಬೆ ಪ್ರಾಂತದಲ್ಲಿ ೨೦. ಇವುಗಳ ವಿವರವು ಪುಸ್ತಕದ ಆದಿಭಾಗದಲ್ಲಿ ಕೊಟ್ಟಿರುವ ಪ್ರದೇಶಗಳ ಪಟ್ಟಿಯಿಂದ ವ್ಯಕ್ತವಾಗುತ್ತದೆ. ಶಾಸನಗಳಿಗೆ ೧ ರಿಂದ ೨೮೩ (೩೪೫)ರವರೆಗೆ ಅನುಕ್ರಮವಾದ ಸಂಖ್ಯೆಗಳು ಕೊಟ್ಟಿವೆ; ಅವು ಸುಮಾರು ೭೦೦ ರಿಂದ ೧೪೯೫ (೧೭೮೧)ರವರೆಗೆ ಕಾಲಕ್ರಮವಾದ ಅನುಪೂರ್ವಿಯಲ್ಲಿ ಮುದ್ರಿತವಾಗಿವೆ. ಒಂದೊಂದು ಶಾಸನದ ಆದಿಭಾಗದಲ್ಲಿಯೂ ಅದರಲ್ಲಿ ಉಕ್ತವಾದ ವಿಷಯವೂ ಇದ್ದ ಕಡೆ ಆಗ ಆಳುತ್ತಿದ್ದ ರಾಜನ ಹೆಸರೂ ಹೇಳಿದೆ. ಅನುವಾದಮಾಡಿರುವ ಭಾಗಗಳಲ್ಲಿ ೧ ರಿಂದ ೪೦ರವರೆಗೆ ಪದ್ಯಗಳಿವೆ; ಒಟ್ಟು ಅನುವಾದಮಾಡಿರುವ ಪದ್ಯಗಳ ಸಂಖ್ಯೆ ೧೪೫೯. (ಈಗ ೧೭೮೧), ಈ ಶಾಸನಗಳು - ಗಂಗ, ನೊಳಂಬ, ಚಾಳುಕ್ಯ, ರಾಷ್ಟ್ರಕೂಟ, ಚೋಳ, ಕಳಚುರ್, ಸೇವುಣ, ಕೊಂಗಾಳ್ವ, ಹೊಯ್ಸಳ, ಸಾಂತರ, ಪಾಂಡ್ಯ, ಸಿಂದ, ಕದಂಬ, ನಿಡುಗಲ್ಲು, ವಿಜಯನಗರ, ಗೇರಸೊಪ್ಪೆ, ಹಾಡುವಳ್ಳಿ - ಎಂಬ ೧೭ ರಾಜವಂಶಗಳಿಗೆ ಅನ್ವಯಿಸುತ್ತವೆ. ದೇವಗಿರಿಯ ಯಾದವ ವಂಶದ ರಾಜರಿಗೆ ಸೇವುಣರು ಎಂದು ಹೆಸರು. ಕೊಂಗಾಳ್ವರು ಕೊಡಗು ಅರಕಲ್ಲೂಡು ಈ ಪ್ರಾಂತಗಳಲ್ಲಿ ರಾಜ್ಯವಾಳಿದರು. ಸಾಂತರರಿಗೆ ನಗರದ ತಾಲ್ಲೂಕಿನಲ್ಲಿಯ ಹೊಂಬುಚ್ಚವು ರಾಜಧಾನಿಯಾಗಿದ್ದಿತು. ಪಾಂಡ್ಯರು ಚಿತ್ರದುರ್ಗ ಪ್ರಾಂತದಲ್ಲಿ ಆಳುತ್ತಿದ್ದರು. ಇವರ ರಾಜಧಾನಿ ಉಚ್ಚಂಗಿ, ಸಿಂದರ ರಾಜ್ಯಕ್ಕೆ ಸಿಂದವಾಡಿ ಎಂದು ಹೆಸರು; ಇವರು ಹೊನ್ನಾಳಿಯ ಪ್ರಾಂತದಲ್ಲಿ ದೊರೆಗಳಾಗಿದ್ದರು. ನಿಡುಗಲ್ಲ ರಾಜರು ಚೋಳವಂಶದವರು; ಇವರ ಪೂರ್ವದ

ರಾಜಧಾನಿ ಹೆಂಜೆರು. ಇದು ಈಗ ಮಡಕಸಿರಾ ತಾಲ್ಲೂಕಿನಲ್ಲಿರುವ ಹೇಮಾವತಿ ಎಂಬ ಸ್ಥಳವು. ಈಚೆಗೆ ಪಾವುಗಡ ತಾಲ್ಲೂಕಿನಲ್ಲಿಯ ನಿಡುಗಲು ಇವರ ರಾಜಧಾನಿಯಾಯಿತು. ಈ ವಂಶಗಳ ರಾಜರ ಮತ್ತು ಅವರಿಗೆ ಸಂಬಂಧಿಸಿದ ಶಾಸನಗಳ ವಿವರವನ್ನು ಆರಂಭದಲ್ಲಿ ಕೊಟ್ಟಿರುವ ರಾಜವಂಶಗಳ ಪಟ್ಟಿಯಿಂದ ತಿಳಿದುಕೊಳ್ಳಬಹುದು.

"ಈ ಶಾಸನಗಳಿಗೆ ಕವಿತಾಶೈಲಿಯೊಂದರಿಂದಲೇ ಮಹತ್ವವುಂಟಾಗಿದೆ ಎಂದು ತಿಳಿಯಬಾರದು. ಇವು ಆ ಕಾಲದ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಗಳನ್ನು ಸ್ಪಷ್ಟವಾಗಿ ತಿಳಿಸುತ್ತವೆ. ಇವುಗಳಲ್ಲಿ ರಾಜರುಗಳ ವಿಷಯವಾಗಿಯೂ ಅವರಿಗೆ ಅಧೀನರಾದ ಅಧಿಕಾರಿಗಳ ವಿಷಯವಾಗಿಯೂ ಹೇಳಿರುವ ಚರಿತ ಸಂಬಂಧವಾದ ಅಂಶಗಳು ಬಹಳ ಮುಖ್ಯವಾದುವು. ಅಲ್ಲದೆ ಆ ಆ ಕಾಲದಲ್ಲಿ ಬಳಕೆಯಲ್ಲಿದ್ದಂತೆ ಇವುಗಳಿಂದ ತಿಳಿದುಬರುವ ಕೆಲವು ಪದ್ಧತಿಗಳೂ ಆಚಾರಗಳೂ ನಮಗೆ ಕುತೂಹಲವನ್ನು ಉಂಟುಮಾಡತಕ್ಕವುಗಳಾಗಿವೆ. ಈ ವಿಷಯವನ್ನು ಕೆಲವು ಉದಾಹರಣೆಗಳಿಂದ ಸ್ಪಷ್ಟ ಪಡಿಸುತ್ತೇನೆ. ಸುಮಾರು ೯೦೦ರಲ್ಲಿ ಹುಟ್ಟಿದ ೬ನೆಯ ಶಾಸನದಲ್ಲಿ 'ಶಂಭು' ಎಂಬುವನು ಚಾಳುಕ್ಯವಂಶದ ಪರಹಿತರಾಜನಿಗೆ ಭಾಷೆಕೊಟ್ಟಂತೆ ಅಗ್ನಿಪ್ರವೇಶ ಮಾಡಿ ಸತ್ತಂತೆ ಹೇಳಿದೆ. ಸುಮಾರು ೧೨೨೦ರಲ್ಲಿ ಬರೆದ ೨೮೬ನೆಯ ಶಾಸನದಲ್ಲಿ ೨ನೆಯ ಬಲ್ಲಾಳನು ಸಾಯಲು ತನ್ನ ಸ್ವಾಮಿಯ ಮರಣಾನಂತರ ತಾನು ಬದುಕಿರುವುದು ನಾಚಿಕೆಗೇಡೆಂದು ಭಾವಿಸಿ ಆ ದೊರೆಯ ದಂಡನಾಥನಾದ ಕುವರಲಕ್ಷ್ಮನು ತನ್ನ ಸತಿಯೊಡನೆಯೂ ತನ್ನ ಕೈಯ ಕೆಳಗಿದ್ದ ಸಾವಿರ ಜನ ವೀರರೊಡನೆಯೂ ಸತ್ತನೆಂದು ಹೇಳಿದೆ. ೧೧೮೧ರಲ್ಲಿ ಹುಟ್ಟಿದ ೨೨೫ನೆಯ ಶಾಸನದಲ್ಲಿ ಮಂತ್ರಿ ಕೇಶವ ರಾಜನು ಗವರೇಶ್ವರ ದೇವರಿಗೆ ಅಪುತ್ರಿಕಮೃತಕಧನವನ್ನು ಬಿಟ್ಟಂತೆ ಹೇಳಿದೆ. [ಈ ಶಾಸನಗಳಲ್ಲಿ ೨೪] ನಿಷಿದಿಗಲ್ಲುಗಳೂ ೧೭ ವೀರಗಲ್ಲುಗಳೂ ಇವೆ. (ಈ ಸಂಖ್ಯೆ ಈಗ ಸ್ವಲ್ಪ ಹೆಚ್ಚಾಗುತ್ತದೆ). ಅನಶನವ್ರತದಿಂದ ಸತ್ತ ಜೈನ ಪುರುಷರ, ಮುಖ್ಯವಾಗಿ ಸನ್ಯಾಸಿ ಸನ್ಯಾಸಿನಿಯರ, ಜ್ಞಾಪಕಾರ್ಥವಾಗಿ ನಮ್ಮ ಕಲ್ಲುಗಳಿಗೆ ನಿಷಿದಿಗಲ್ಲುಗಳೆಂದೂ, ಯುದ್ಧದಲ್ಲಿ ಮಡಿದ ವೀರರ ಜ್ಞಾಪಕಾರ್ಥವಾಗಿ ನಟ್ಟ ಕಲ್ಲುಗಳಿಗೆ ವೀರಗಲ್ಲುಗಳೆಂದು ಹೆಸರು. ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಭೋಜನಶಾಲೆಗಳ ಏರ್ಪಾಡು ಬಹಳ ಕಾಲಕ್ಕೆ ಹಿಂದೆಯೇ, ಎಂದರೆ ೧೧, ೧೨ನೆಯ ಶತಮಾನಗಳಲ್ಲಿಯೇ ಇದ್ದಿತು ಎಂಬಂಶವು ೩೬, ೧೪೪, ೧೯೮ನೆಯ ಶಾಸನಗಳಿಂದ ತಿಳಿಯುತ್ತದೆ. ಸುಮಾರು ೭೦೦ರಲ್ಲಿ ಹುಟ್ಟಿದ ೪ನೆಯ ಶಾಸನದಿಂದ ಕನ್ನಡದಲ್ಲಿ ತ್ರಿಪದಿಯ ಪ್ರಾಚೀನತೆ ವ್ಯಕ್ತವಾಗುತ್ತದೆ. ಹೀಗೆ ಈ ಶಾಸನಗಳಿಂದ ವಿಮರ್ಶಾರ್ಹವಾದ ಹಲವು ವಿಷಯಗಳು ತಿಳಿದುಬರುತ್ತವೆ. ಇದಲ್ಲದೆ ಇವುಗಳಲ್ಲಿ ಹಲವು ರಾಜರ ಮತ್ತು ಪ್ರಜೆಗಳ ಶೌರ್ಯ, ದೈವಭಕ್ತಿ, ಔದಾರ್ಯ, ದೇಶವಾತ್ಸಲ್ಯ, ಧಾರ್ಮಿಕ ಸಮಬುದ್ಧಿ ಇವುಗಳನ್ನು ಘಂಟಾಘೋಷವಾಗಿ ಸಾರುತ್ತವೆ.

"ಈ ಪುಸ್ತಕದಲ್ಲಿ ಅನುವಾದ ಮಾಡಿರುವ ಶಾಸನ ಭಾಗಗಳು ಕಾಲಕ್ರಮವಾದ ಅನುಪೂರ್ವಿಯಲ್ಲಿರುವುದರಿಂದ ಕಾಲಕ್ರಮದಲ್ಲಿ ಉಂಟಾದ ಭಾಷೆಯ ಬೆಳವಣಿಗೆ, ಮಾರ್ಪಾಡು ಇವುಗಳನ್ನು ತೋರಿಸುವುದರ ಮೂಲಕ ಭಾಷಾಚರಿತ್ರಜ್ಞಾನಕ್ಕೆ ಸಹಕಾರಿಗಳಾಗಿವೆ. ಮೊದಲು ಈ ಶಾಸನಭಾಗಗಳನ್ನು

ಕರ್ಣಾಟಕ ಕವಿಚರಿತೆಯ ೩ನೆಯ ಸಂಪುಟದಲಿಯ ಕವಿಗಳು ಗೊತಿಲದ ಗ್ರಂಥಗಳ ಭಾಗಗಳೊಡನೆ ಕೊಡಬೇಕೆಂದು ಎಣಿಸಿದ್ದೆನು; ಆದರೆ ಕವಿತಾಶೈಲಿಯೊಂದರಲ್ಲಿ ಮಾತ್ರವಲ್ಲದೆ ಹಿಂದೆ ತಿಳಿಸಿದಂತೆ ಇತರ ವಿಧಗಳಲ್ಲಿಯೂ ಇವುಗಳಿಗೆ ಇರುವ ಪ್ರಾಮುಖ್ಯವನ್ನು ನೋಡಿ ಪ್ರತ್ಯೇಕವಾಗಿ ಕೊಡುವುದು ಯುಕ್ತವೆಂದು ತೋರಿ ಈ ಪುಸ್ತಕರೂಪವಾಗಿ ಮಾಡಿ ಕನ್ನಡಿಗರಿಗೆ ಕಾಣಿಕೆಯಾಗಿ ಒಪ್ಪಿಸಿದ್ದೇನೆ. ಪುಸ್ತಕದ ಅಂತ್ಯಭಾಗದಲ್ಲಿ ಕ್ಲಿಷ್ಟಪದಗಳಿಗೆ ಅರ್ಥವೂ, ಅವಶ್ಯವಾದ ಕಡೆ ವ್ಯಾಕರಣ, ಶಬ್ದತತ್ವ ಇವಕ್ಕೆ ಸಂಬಂಧಿಸಿದ ಟಿಪ್ಪಣವೂ ಕೊಟ್ಟಿವೆ. ಈ ಪುಸ್ತಕವನ್ನು ತಮಗೆ ಅರ್ಪಿಸಲು ಅಪ್ಪಣೆಯನ್ನು ದಯಪಾಲಿಸಿದುದಕ್ಕಾಗಿ ಶ್ರೀಮನ್ಮಹಾರಾಜರಿಗೆ ಅತ್ಯಂತ ಕೃತಜ್ಞನಾಗಿದ್ದೇನೆ".

ಕರ್ನಾಟಕದ ಹಲವಾರು ಭಾಗಗಳಲ್ಲಿ ಹಲವಾರು ಸ್ಥಳಗಳಲ್ಲಿ ಶಾಸನಗಳನ್ನು ಪತ್ತೆಮಾಡಿ ಚಾರಿತ್ರಿಕ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಮುಖ್ಯವೆಂದು ಭಾವಿಸಿ ಅವುಗಳ ಪ್ರಯೋಜನ ನಂತರದ ತಲೆಮಾರಿಗೂ ದೊರಕಬೇಕಾದುದು ಅವಶ್ಯಕವೆಂದು ನಂಬಿದವರು ಆರ್. ನರಸಿಂಹಾಚಾರರು. ಪದ್ಯಗಳನ್ನು ಆರಿಸಿ ಸೂಕ್ತರೀತಿಯಲ್ಲಿ ಸಂಯೋಜಿಸಿ ಅವುಗಳ ಮಹತ್ವವನ್ನು ವಿವರಿಸುವಲ್ಲಿ ಅವರಿಗಿರುವ ಸದಭಿರುಚಿ, ಕಾವ್ಯಾಸಕ್ತಿ, ಔಚಿತ್ಯಪ್ರಜ್ಞೆ, ಪರಂಪರೆಯ ವಿವೇಕ-ಇವೆಲ್ಲವೂ ಎದ್ದು ಕಾಣಿಸುವ ಗುಣಗಳಾಗಿವೆ. ಸಾಹಿತ್ಯಕಾಂಶಗಳನ್ನ ಒಳಗೊಂಡಿರುವ ಶಾಸನಗಳೇ ಅಧಿಕವಾಗಿರುವ ಈ ಸಂಕಲನದಲ್ಲಿ ಶಾಸನ ಕವಿಗಳಿಗಿರುವ ಸೃಜನಶೀಲ ಪ್ರತಿಭೆಯನ್ನ ಗುರುತಿಸಲು ಸಾಧ್ಯವಿದೆ. ಅಂಥ ಅನುಕೂಲವನ್ನ ನರಸಿಂಹಾಚಾರ್ ಇಲ್ಲಿ ಮಾಡಿಕೊಟ್ಟಿದ್ದಾರೆ.

ಪ್ರತಿಯೊಂದು ಶಾಸನದ ಬಗೆಗೂ ಅವರು ನೀಡಿರುವ ಟಿಪ್ಪಣಿಗಳ ರೂಪದ ಮಾಹಿತಿಯಂತೂ ಶಾಸನಗಳನ್ನ, ಸಾಹಿತ್ಯವನ್ನ ಅಧ್ಯಯನ ಮಾಡುವವರಿಗೆ ಉಪಯುಕ್ತ ಸಾಮಗ್ರಿಯೆನಿಸುತ್ತದೆ. 'ಶಾಸನ ಪದ್ಯಮಂಜರಿ' ಕೆಲಕಾಲ ಕನ್ನಡದ ಪ್ರೌಢವ್ಯಾಸಂಗದ ವಿದ್ಯಾರ್ಥಿಗಳಿಗೆ ಪಠ್ಯವಾಗಿದ್ದಂತೆ ತಿಳಿದುಬರುತ್ತದೆ. ಬಿ.ಎಲ್.ರೈಸ್, ಎಲ್.ಡಿ.ಬಾರ್ನೆಟ್, ಎಂ.ಶಾಮರಾವ್, ಸಿ. ಹಯವದನರಾವ್ ಮೊದಲಾದವರು ನಾಡಿನ ವಿವಿಧ ಪತ್ರಿಕೆಗಳೂ ಆರ್. ನರಸಿಂಹಾಚಾರ್ ಅವರ ಈ ಸಂಕಲನದ ಸಾಧನೆಯನ್ನು ಮೆಚ್ಚಿಕೊಂಡಿರುವುದುಂಟು.

'ಶಾಸನ ಪದ್ಯಮಂಜರಿ'ಯ ಎರಡನೆಯ ಮುದ್ರಣವನ್ನು ಪ್ರಕಟಿಸುವ ಜವಾಬ್ದಾರಿಯನ್ನ ಬೆಂಗಳೂರು ವಿಶ್ವವಿದ್ಯಾಲಯ ಹೊತ್ತಿತು. ಅದರ ಪ್ರಧಾನ ಸಂಪಾದಕರಾದ ಜಿ. ಎಸ್. ಶಿವರುದ್ರಪ್ಪ ಅವರು ಮುನ್ನುಡಿ' ಯಲ್ಲಿ ಬರೆದದ್ದು ಹೀಗೆ : "ಈ ಐವತ್ತೂ ವರ್ಷಗಳಲ್ಲಿ ಶಾಸನ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ನಡೆದಿದ್ದರೂ ಆರ್. ನರಸಿಂಹಾಚಾರ್ಯರ ಶಾಸನ ಪದ್ಯಮಂಜರಿ' ಇಂದಿಗೂ ಆರಂಭಕಾಲದ ಶ್ರದ್ಧೆ, ಶ್ರಮ, ಅಭಿರುಚಿಗಳ ದಾಖಲೆಯಾಗಿ ಕನ್ನಡ ಶಾಸನ ಪದ್ಯಗಳ ಸೊಗಸಾದ ಸಂಕಲನವಾಗಿದೆ. ಈಗ ಎರಡನೆಯ ಮುದ್ರಣವಾಗಿ ಹೊರಬರುತ್ತಿರುವ ಈ ಸಂಕಲನವನ್ನು ಮೊದಲನೆಯ ಮುದ್ರಣದೊಂದಿಗೆ ಹೋಲಿಸಿ ನೋಡಿದವರಿಗೆ ಇದೊಂದು ಹೊಸದೃಷ್ಟಿಯ ಪರಿಷ್ಕರಣವೆಂಬಂತೆ ತೋರದೆ ಇರದು. ಮೊದಲ ಮುದ್ರಣದ ನಂತರ ಮೂಲ ಸಂಕಲನಕಾರರು ಅನೇಕ ಶಾಸನಗಳಿಂದ ಆಯ್ದು ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ ಪ್ರಕಟಿಸಿದ ಅದೇ ಬಗೆಯ ಶಾಸನಗಳನ್ನು

ಎರಡನೆಯ ಮುದ್ರಣದ ಈ ಕೃತಿಯಲ್ಲಿ ಸಮಾವೇಶಗೊಳಿಸಲಾಗಿದೆ. ಹೊಸದಾಗಿ ಸೇರಿಸಿದ ಈ ಪದ್ಯಗಳ ಕಠಿಣ ಪದಗಳಿಗೆ ಅರ್ಥವನ್ನು ಬರೆದು ಮೊದಲಿನ ಅರ್ಥಕೋಶಕ್ಕೆ ಅನುಬಂಧ ರೂಪವಾಗಿ ಕೊಡಲಾಗಿದೆ... ಕನ್ನಡ ಶಾಸನಗಳ ಕ್ಷೇತ್ರದಲ್ಲಿ ಅಧಿಕೃತವಾಗಿ ಕೆಲಸ ಮಾಡಬಲ್ಲವರೆಂದು ಹೆಸರಾಗಿರುವ ಡಾ.ಚಿದಾನಂದಮೂರ್ತಿಯವರ ವಿಶೇಷವಾದ ಶ್ರಮದಿಂದಾಗಿ ರಾ. ನರಸಿಂಹಾಚಾರ್ಯರ 'ಶಾಸನ ಪದ್ಯಮಂಜರಿ' ಇದೀಗ ಹೊಸರೂಪದಿಂದ ಪ್ರಕಟವಾಗಲು ಸಾಧ್ಯವಾಗಿದೆ".

ಆರ್. ನರಸಿಂಹಾಚಾರ್ಯರ ಟಿಪ್ಪಣಿ, ಅರ್ಥಗಳ ಸಂಕಲನದ ಎರಡನೆ ಮುದ್ರಣಕ್ಕೆ ಚಿದಾನಂದ ಮೂರ್ತಿಯವರು ದೀರ್ಘವಾದ ಪ್ರಸ್ತಾವನೆಯನ್ನು ಬರೆದಿದ್ದಾರೆ. ಅದರಲ್ಲಿ "ಶಾಸನಗಳ ವರ್ಗೀಕರಣ, ಮಹತ್ವ ಮತ್ತು ಅವುಗಳ ಸಾಹಿತ್ಯಕ ಮೌಲ್ಯವನ್ನು ಕುರಿತು ವಿವೇಚಿಸಿರುವುದು ಗೋಚರವಾಗುತ್ತದೆ. ೧೯೨೩ರಿಂದಲೂ ಇಲ್ಲಿಯ ತನಕ ತನ್ನದೇ ಆದ ಕುತೂಹಲವನ್ನು ಉಳಿಸಿಕೊಂಡು ಬಂದಿರುವ 'ಶಾಸನ ಪದ್ಯಮಂಜರಿ' ಆಕರಗ್ರಂಥವಾಗಿ ಪರಿಣಮಿಸಿದೆ. ಇದರ ಪುನರ್ಮುದ್ರಣದ ಔಚಿತ್ಯವನ್ನು ಕುರಿತು ಡಾ. ಚಿದಾನಂದಮೂರ್ತಿಯವರು ಹೀಗೆ ವ್ಯಕ್ತಪಡಿಸಿದ್ದಾರೆ: "ಕನ್ನಡ ಸಾಹಿತ್ಯವನ್ನು ಅಭ್ಯಾಸ ಮಾಡುವವರು ಶಾಸನಗಳನ್ನು ಸಾಮಾನ್ಯವಾಗಿ ಉಪೇಕ್ಷೆ ಮಾಡುತ್ತಾರೆ. ಶಾಸನಗಳಲ್ಲಿಯ ಪರಿಶ್ರಮವಿರುವವರಿಗೆ ಅವುಗಳ ಸಾಹಿತ್ಯಕಮೌಲ್ಯ ಗೌಣವಾಗಿರುತ್ತದೆ. ಎರಡು ಮೂರು ಪ್ರಯತ್ನಗಳನ್ನ ಬಿಟ್ಟರೆ ಶಾಸನಗಳನ್ನು ಸಾಹಿತ್ಯದ ದೃಷ್ಟಿಯಿಂದ ನೋಡಿ ಪರಿಶೀಲಿಸುವ, ವಿಮರ್ಶಿಸುವ ಕಾರ್ಯ ಹೆಚ್ಚಾಗಿ ನಡೆದಿಲ್ಲವೆಂದೇ ಹೇಳಬೇಕು". ಶಾಸನಗಳ ಸಾಹಿತ್ಯಕಮೌಲ್ಯವನ್ನು ಗುರುತಿಸುವಾಗ ಹೇಳಿರುವ ಚಿದಾನಂದಮೂರ್ತಿ ಅವರ ಮಾತುಗಳು ನಿಜವೆನಿಸುತ್ತವೆ.

## ದಿ ಕೇಶವ ಟೆಂಪಲ್ ಅಟ್ ಸೋಮನಾಥಪುರ್

"The Kesava Temple at Somanathapur" ಎಂಬ ಕೃತಿಯು ೧೯೧೭ರಲ್ಲಿ 'Mysore Archaelogical Series' ಎಂಬ ಮಾಲೆಯ 'Architecture and Sculpture in Mysore" ಎಂಬ ವಿಭಾಗದ ಮೊದಲ ಪ್ರಕಟಣೆಯಾಗಿ ಹೊರಬಂತು. ಮೈಸೂರು ಜಿಲ್ಲೆಗೆ ಸೇರಿದ ಸೋಮನಾಥಪುರದ ಕೇಶವದೇವಾಲಯದ ವಾಸ್ತು ಮತ್ತು ಶಿಲ್ಪಗಳ ವಿವರಣೆಯನ್ನು ಕುರಿತಾದದ್ದು. ದೇವಾಲಯದ ಒಳ ಮತ್ತು ಹೊರಭಾಗದ ಅತ್ಯಮೂಲ್ಯ ಸಂಗತಿಗಳನ್ನು ಕುರಿತದ್ದು, ಅಂದರೆ ಶಿಲ್ಪಗಳು ಮತ್ತು ಸ್ವನಾಮಾಂಕಿತ ವಿಗ್ರಹಗಳು, ಸಂಬಂಧಿತ ಶಾಸನಗಳು, ಗುಡಿಯ ಬಗೆಗೆ ವಿದ್ವಾಂಸರ ಅಭಿಪ್ರಾಯ, ಕೆಲವು ಶಾಸನ ಪದ್ಯಗಳ ವಿವರ ಇತ್ಯಾದಿ ಸಂಗತಿಗಳಿವೆ.

"ಕೃತಿಯ ಆರಂಭದ ಪೀಠಿಕೆಯಲ್ಲಿ ಹೊಯ್ಸಳರ ಕಾಲದ ಈ ತೆರನ ದೇವಾಲಯಗಳ ವಾಸ್ತುಶೈಲಿಯನ್ನು 'ಚಾಲುಕ್ಯ' ಎನ್ನದೆ 'ಹೊಯ್ಸಳ' ಎನ್ನಬೇಕಾದ್ದರ ಔಚಿತ್ಯವನ್ನು ಎತ್ತಿಹೇಳಿದ್ದಾರೆ' ಅಲ್ಲದೆ ಫರ್ಗುಸನ್ ಶ್ರೀ ಮತ್ತು ಶ್ರೀಮತಿವರ್ಕ್ಮನ್, ರೈಸ್ ಅವರ ವಿಮರ್ಶೆಗಳಲ್ಲಿಯ ಕುಂದುಕೊರತೆಗಳ ಬಗೆಗೆ ಸೂಚಿಸಿ, ತಮ್ಮ ವಾರ್ಷಿಕ ವರದಿಗಳ ಸೂಕ್ಷ್ಮ, ಸುಸ್ತರ ವಿಮರ್ಶೆಗಳ ಕಡೆ ಗಮನ ಸೆಳೆದಿದ್ದಾರೆ. ಆರಂಭಕ್ಕೆ ಹೊಯ್ಸಳ ಮತ್ತು ದ್ರಾವಿಡ

ಶೈಲಿಯ ದೇವಾಲಯಗಳ ಒಂದು ವರ್ಗೀಕೃತ ಸೂಚಿಯಿದೆ. ಇಂತಹ ಸುಮಾರು ಆರು ಹೊಯ್ಸಳ ಶೈಲಿಯ ಪ್ರಮುಖ ದೇವಾಲಯಗಳ ಕೈಪಿಡಿಗಳು ಸಿದ್ಧವಾಗಬೇಕೆಂದು ಅವರು ಉದ್ದೇಶಿಸಿದ್ದರು. ಈ ಕೈಪಿಡಿಗೆ ವಿ.ಎ.ಸ್ಮಿತ್, ವೊಗೆಲ್, ಎಲ್.ಡಿ.ಬಾರ್ನೆಟ್, ಎಫ್. ಡಬ್ಲೊ, ಥಾಮಸ್, ಬಿ.ಎಲ್.ರೈಸ್ ಇವರೂ ಇಂಡಿಯನ್ ಆಂಟಿಕ್ವರಿ, ಮದ್ರಾಸ್ ಮೈಲ್, ನ್ಯೂ ಇಂಡಿಯ ಮಿಥಿಕ್ ಸೊಸೈಟಿ, ಮೊದಲಾದ ಪತ್ರಿಕೆಗಳೂ ಮುಕ್ತಕಂಠದ ಮೆಚ್ಚುಗೆ ಸಲ್ಲಿಸಿರುವುದು ಕಾಣುತ್ತದೆ" (ಪ್ರಾಕ್ತನ ಪುಟ XXX).

## ದಿ ಕೇಶವ ಟೆಂಪಲ್ ಅಟ್ ಬೇಲೂರ್

೧೯೧೯ರಲ್ಲಿ ಹೊರಬಂದ The Kesava Temple at Belur ಹೆಸರೇ ಹೇಳುವಂತೆ ಬೇಲೂರು ಚನ್ನಕೇಶವಸ್ವಾಮಿ ದೇವಾಲಯದ ವಸ್ತು ಮತ್ತು ಶಿಲ್ಪಗಳ ವಿವರವನು ಕುರಿತ ಕೈಪಿಡಿಯಾಗಿದೆ. ಸುಮಾರು ೪೫ ಚಿತ್ರಗಳನ್ನು ನಕ್ಷೆಗಳನ್ನು ಒಳಗೊಂಡಿರುವ ಈ ಕೃತಿಯಲ್ಲಿ ದೇವಾಲಯದ ಹೊರಭಾಗ - ಒಳಭಾಗದ ಶಿಲ್ಪಗಳು ಹಾಗೂ ನಾಮಾಂಕಿತ ವಿಗ್ರಹಗಳು, ಅದರ ಆವರಣದಲ್ಲಿರುವ ಇತರ ದೇವಾಲಯಗಳ ವಿವರ, ಶಾಸನಗಳು, ತಜ್ಞರ ಅಭಿಪ್ರಾಯಗಳು - ಮುಂತಾದ ಸಂಗತಿಗಳ ಬಗೆಗಿನ ವಿವರಗಳು ಬಿತ್ತರಗೊಂಡಿವೆ. ಇದರ ಆರಂಭದಲ್ಲಿ ಹೊಯ್ಸಳ ಮತ್ತು ದ್ರಾವಿಡ ಶೈಲಿಯ ದೇವಾಲಯಗಳ ವರ್ಗೀಕೃತ ಸೂಚಿಯನ್ನ ನೀಡಲಾಗಿದೆ. ಇದರಿಂದ ದೇವಾಲಯದ ಹೆಸರು, ಸ್ಥಳ, ಅದು ನಿರ್ಮಾಣವಾದ ಕಾಲ ಅಲ್ಲಿನ ಆಳರಸರ, ಮತ್ತಿತರ ಸಂಗತಿಗಳನ್ನು ತಿಳಿಯಲು ಅನುಕೂಲವಾಗುತ್ತದೆ.

## ದಿ ಲಕ್ಷ್ಮೀದೇವಿ ಟೆಂಪಲ್ ಅಟ್ ದೊಡ್ಡಗದ್ದವಳ್ಳಿ

೧೯೧೯ರಲ್ಲಿ ಪ್ರಕಟಗೊಂಡ The Lakshmidevi Temple at Doddagadelavalli ಎಂಬ ಕೃತಿಯು ಹಾಸನ ತಾಲ್ಲೂಕಿಗೆ ಸೇರಿದ ದೊಡ್ಡಗದ್ದವಳ್ಳಿಯ ಲಕ್ಷ್ಮೀದೇವಿ ದೇವಾಲಯದ ವಾಸ್ತು ಮತ್ತು ಶಿಲ್ಪಗಳನ್ನ ಪರಿಚಯಿಸುವಂಥದ್ದು. "ವಿಷ್ಣುವರ್ಧನನ ಆಳ್ವಿಕೆಯ ಅವಧಿಯಲ್ಲಿ ೧೧೧೩ರಲ್ಲಿ ವ್ಯಾಪಾರಿಯಾದ ಕುಲ್ಲಹನ ರಾಹುತ ಮತ್ತು ಇವನ ಪತ್ನಿ ಸಹಜಾದೇವಿ ಇವರಿಂದ ನಿರ್ಮಿತವಾದ್ದು ಇದು. ಈ ದೇವಾಲಯದ ಅಲಂಕಾರ ವೈಖರಿಗಲ್ಲದೆ, ವಿರಳವಾದ ಚತುಷ್ಕೂಟ ನಿರ್ಮಾಣ ಹಾಗೂ ಸಮಂಜಸ ಯೋಜನೆಗಳಿಗಾಗಿ ಆಯ್ಕೆ ಮಾಡಿದ್ದು ಎಂದು ಆಚಾರ್ಯರು ತಿಳಿಸಿದ್ದಾರೆ. ಸೋಮನಾಥಪುರದ ತ್ರಿಕೂಟ ನಿರ್ಮಾಣ, ಬೇಲೂರಿನದು ಏಕಕೂಟ ನಿರ್ಮಾಣ ಎಂದಾದರೆ ಇದು ಅತಿವಿರಳವಾದ ಚತುಷ್ಕೂಟ ನಿರ್ಮಾಣವಾಗಿದೆ. ಈ ಗುಡಿ ಬೇಲೂರು ಗುಡಿಗಿಂತ ನಾಲ್ಕು ವರ್ಷ ಮೊದಲೇ ಕಟ್ಟಿದ್ದು ಎನ್ನುವುದು ಗಮನಿಸತಕ್ಕದ್ದು. ಈ ಕೈಪಿಡಿಯಲ್ಲಿ ೧೪ ನಕ್ಷೆಗಳೂ ಚಿತ್ರಗಳೂ ಇವೆ. ಈ ಮೊದಲಿನ ದೇವಾಲಯಗಳ ವರ್ಗೀಕೃತಸೂಚಿ ಇಲ್ಲಿ ಬೆಳೆದಿದೆ. ದೇವಾಲಯದ ಹೊರಭಾಗ ಒಳಭಾಗ ಸಂಬಂಧಿಸಿದ ಶಾಸನಗಳು - ಇವುಗಳ ವಿಚಾರ ವಿಮರ್ಶೆಯೂ ಹಾಸನ ನಂ.೧೪೯ರ ಶಾಸನ ಪಾಠವೂ ಇಲ್ಲಿ ಅನುಕ್ರಮವಾಗಿ ಬಂದಿದೆ" (ಪ್ರಾಕ್ತನ ಪುಟ xxxi).

## ಹಿಸ್ಟರಿ ಆಫ್ ಕನ್ನಡ ಲಿಟರೇಚರ್

'History of Kannada Literature' ಎಂಬುದು ಮಾರ್ಚ್ ೧೯೨೮ರಲ್ಲಿ ಆರ್.ನರಸಿಂಹಾಚಾರ್ಯರು ಮಾಡಿದ ಐದು ರೀಡರ್‌ಷಿಪ್ ಉಪನ್ಯಾಸಗಳ ಸಂಕಲನ. ಈ ಉಪನ್ಯಾಸಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ಕೋರಿಕೆಯ ಮೇರೆಗೆ ಅವರು ನೆರವೇರಿಸಿಕೊಟ್ಟರು. ಆಗಸ್ಟ್ ೧೯೨೮ರಲ್ಲಿ ಇದೇ ವಿಷಯಗಳನ್ನ ಕುರಿತು ಬೆಂಗಳೂರಿನಲ್ಲಿ ಉಪನ್ಯಾಸಗಳನ್ನ ನೀಡಿದ್ದಾರೆ. ೧೯೪೦ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮೂಲಕ ಈ ಬರಹಗಳು History of Kannada Literature ಎಂಬ ಹೆಸರಿನಲ್ಲಿ ಪ್ರಕಟಗೊಂಡವು. ಇದರಲ್ಲಿ ಐದು ಅಧ್ಯಾಯಗಳಿವೆ:

(೧) ಕನ್ನಡ ಸಾಹಿತ್ಯದ ಪ್ರಾಚೀನತೆ (೨) ಕವಿಗಳು ಮತ್ತು ಕಾವ್ಯಗಳು (೩) ತೆಲುಗು-ತಮಿಳು ಮತ್ತು ಸಂಸ್ಕೃತ ಭಾಷೆಗಳ ಸಾರಾಂಶಗಳೊಂದಿಗೆ ಕನ್ನಡ ಸಾಹಿತ್ಯದ ಸಂಬಂಧ (೪) ವಿದ್ವಾಂಸರ ವಿಮರ್ಶೆಗಳಿಗೆ ಸಮಾಧಾನಗಳು (ಮುಂದುವರಿದುದು) (೫) ಕನ್ನಡ ಸಾಹಿತ್ಯದ ವ್ಯಾಪ್ತಿ ವಿಸ್ತಾರಗಳು - ಹೀಗೆ ಅನುಕ್ರಮವಾಗಿ ನಿರೂಪಣೆಗೊಂಡಿವೆ. ಈ ಎಲ್ಲ ಬರಹಗಳನ್ನು ಗಮನಿಸಿದರೆ ಅನ್ಯಭಾಷಾ ವಿಷಯಗಳು, ಕವಿಚರಿತ್ರೆಯ ಸಂಬಂಧವಾಗಿ ಕೇಳಿಬಂದ ಎ. ವೆಂಕಟಸುಬ್ಬಯ್ಯ ಮುಂತಾದವರ ಅನುಮಾನಗಳು ಭಿನ್ನಾಭಿಪ್ರಾಯಗಳು ಇಲ್ಲಿ ಸಮಾಧಾನವನ್ನು ಹೇಳಲು ಪ್ರಯತ್ನಿಸಿರುವುದು ಗೋಚರವಾಗುವ ಅಂಶ. ಎ. ವೆಂಕಟಸುಬ್ಬಯ್ಯನವರ 'ಕೆಲವು ಕನ್ನಡ ಕವಿಗಳ ಜೀವನಕಾಲ ವಿಚಾರ' ಎಂಬ ಲೇಖನಮಾಲೆ ಸಿದ್ಧಗೊಳ್ಳಲು ಮುಖ್ಯವಾದ ಪ್ರೇರಣೆ ಎಂದರೆ ಆರ್. ನರಸಿಂಹಾಚಾರ್ಯರ ಕರ್ಣಾಟಕ ಕವಿಚರಿತೆ. ಇದರ ಮೊದಲ ಎರಡು ಸಂಪುಟಗಳಲ್ಲಿ ದಾಖಲೆಗೊಂಡಿರುವ ಕೆಲವು ಕನ್ನಡ ಕವಿಗಳ ಕಾಲ ಮತ್ತು ಜೀವಿತದ ವಿವರಗಳು ಸರಿಯಾಗಿ ನಿರೂಪಣೆಗೊಂಡಿಲ್ಲವೆಂಬುದು ಇವರ ವಾದ. ಜೊತೆಗೆ ಪ್ರತಿಷ್ಠಿತ ವಿದ್ವಾಂಸರಾದ ಆರ್. ನರಸಿಂಹಾಚಾರ್ಯರು ಇವನ್ನ ಸರಿಪಡಿಸುವ ಅವಶ್ಯಕತೆ ಇತ್ತು ಎಂಬುದು ಅವರ ವಾದ. ವೆಂಕಟಸುಬ್ಬಯ್ಯನವರು ಎತ್ತಿದ್ದ ನಾಗಚಂದ್ರ ಮೊದಲಾದ ಕವಿಗಳ ಬಗೆಗಿನ ಆಕ್ಷೇಪಗಳಿಗೆ ಕವಿಚರಿತೆಯ ತೃತೀಯ ಸಂಪುಟ ಪ್ರಕಟಗೊಂಡ ತರುವಾಯ ಕನ್ನಡ ಅವತರಣಿಕೆಯಲ್ಲಿ ಆರ್. ನರಸಿಂಹಾಚಾರ್ಯರು ಉತ್ತರಗಳನ್ನು ನೀಡಿದ್ದಾರೆ. ಆದ್ದರಿಂದ ಕನ್ನಡ ಸಾಹಿತ್ಯ ಚರಿತ್ರೆಯನ್ನು ಅಭ್ಯಾಸ ಮಾಡುವವರಿಗೆ ಕವಿಚರಿತೆಯಷ್ಟೆ ವೆಂಕಟಸುಬ್ಬಯ್ಯವರ 'ಕೆಲವು ಕನ್ನಡ ಕವಿಗಳ ಜೀವನಕಾಲ ವಿಚಾರ' ಎಂಬ ಪುಸ್ತಕವೂ ಪ್ರಮುಖವಾಯಿತು (ಪ್ರಕಾಶಕರು:ಬೆಂಗಳೂರು ಸೆಂಟ್ರಲ್ ಕಾಲೇಜು, ಕರ್ಣಾಟಕ ಸಂಘ, ೧೯೨೭).

"ಕವಿಚರಿತೆಕಾರರು ತಮ್ಮ ಗ್ರಂಥದ ತೃತೀಯ ಸಂಪುಟದ ಕನ್ನಡ ಅವತರಣಿಕೆಯನ್ನು ಬರೆಯುವ ಮೊದಲೇ (೧೯೨೮) ಮೈಸೂರು ವಿಶ್ವವಿದ್ಯಾನಿಲಯದ ರೀಡರ್‌ಷಿಪ್ ಲೆಕ್ಚರ್ಸ್ ಹೆಸರಿನಲ್ಲಿ (ಪ್ರಕಟಣೆ : ೧೯೪೦) ಅಯ್ಯನವರ ಆಕ್ಷೇಪಗಳಿಗೆ ತಮ್ಮ ಸಮಾಧಾನಗಳನ್ನು ಸೂಚಿಸಿದ್ದರು. ಈ ಸಮಾಧಾನಗಳು ನಾಗಚಂದ್ರ, ರುದ್ರಭಟ್ಟ ಮೊದಲಾದ ಹಲವಾರು ಪ್ರಮುಖ ಕವಿಗಳಿಗೂ ಅಭಿನವ ಶ್ರುತಮುನಿ, ಮೌಕ್ತಿಕ ಕವಿ ಮೊದಲಾದ ಹಲವರು ಅಷ್ಟು ಪ್ರಸಿದ್ಧರಲ್ಲದ ಕವಿಗಳಿಗೂ ಸಂಬಂಧಿಸಿದಂತೆ 'ಯಥೋಚಿತ' ವಿಸ್ತಾರದಲ್ಲಿ ಪ್ರಕಟವಾಗಿವೆ. ಈ History of Kannada Literature ಎಂಬ ೭೭ಪುಟಗಳ ಪುಸ್ತಕದಲ್ಲಿ ಮೂರನೆಯ ಒಂದು ಭಾಗ ಅಯ್ಯನವರ

ಆಕ್ಷೇಪಗಳಿಗೆ ಸಮಾಧಾನವನ್ನು ಹೇಳುವುದಕ್ಕೆಂದೇ ವಿನಿಯೋಗವಾಗಿದೆ ಎಂದರೆ, ಅಯ್ಯನವರ ಪರಿಶ್ರಮ ಶೋಧನೆಗಳೂ ನಿಲುವು ನಿರ್ಣಯಗಳೂ ಆಚಾರ್ಯರನ್ನು ಪ್ರಬಲವಾಗಿಯೇ ಕಾಡಿರುವುದು ಶಕ್ಯ ಎಂದು ಊಹಿಸುವಂತಿದೆ. ಅವರು "ದುರ್ಗಸಿಂಹ, ಚಂದ್ರರಾಜ, ರಾಜಾದಿತ್ಯ, ವೃತ್ತವಿಲಾಸ ಈ ಕವಿಗಳಿಗೆ ನಾನು ಹೇಳಿರುವ ಕಾಲದ ವಿಷಯದಲ್ಲಿಯೂ ಕೆಲವರು ಜೈನಗುರುಗಳ ನಾಮಸಾಮ್ಯದಿಂದ ನಾನು ಮಾಡಿರುವ ಸಮೀಕರಣದ ವಿಷಯದಲ್ಲಿಯೂ ಅಯ್ಯನವರು ಹೇಳಿರುವ ಆಕ್ಷೇಪಣೆಗಳು ನ್ಯಾಯವಾಗಿವೆ ಎಂಬುದರಲ್ಲಿ ಸಂದೇಹವಿಲ್ಲ" ಎಂಬುದಾಗಿ ಮುಕ್ತಮನಸ್ಸಿನಿಂದಲೇ ಒಪ್ಪಿಕೊಂಡಿದ್ದಾರೆ.' (ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ ಸಂ, ಎ. ವೆಂಕಟಸುಬ್ಬಯ್ಯನವರ ಸಂಶೋಧನ ಲೇಖನಗಳು, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ೨೦೦೧). - ಒಟ್ಟಾರೆ ಕನ್ನಡ ಸಾಹಿತ್ಯವನ್ನು ಅಭ್ಯಾಸ ಮಾಡುವವರಿಗೆ ಇದೊಂದು ಉಪಯುಕ್ತ ಗ್ರಂಥ, ಕನ್ನಡ ಸಂಸ್ಕೃತಿಯನ್ನ ತಿಳಿಯಲು ಆಸಕ್ತಿ ವಹಿಸುವವರಿಗೆ ಕನ್ನಡ ಸಾಹಿತ್ಯದ ಪಕ್ಷಿನೋಟವೆ ಇಲ್ಲಿ ದೊರಕಿದಂತಾಗುತ್ತದೆ.

## ಹಳೇಬೀಡು ಪುರಾತನ ಚರಿತ್ರೆ

ಹಳೇಬೀಡು ಪಟೇಲ್ ಶಿವನಂಜೇಗೌಡರಿಂದ ರಚಿಸಲ್ಪಟ್ಟು, ಬೆಂಗಳೂರು ಗೌರ್ನಮೆಂಟ್ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ೧೯೦೯ರಲ್ಲಿ ಪ್ರಕಟವಾಗಿದ್ದ "ಹಳೇಬೀಡು ಪುರಾತನ ಚರಿತ್ರೆ'ಯ ಪರಿಷ್ಕೃತ ಮುದ್ರಣವನ್ನು ಅವರು ಸಿದ್ಧಮಾಡಿದ್ದರಾದರೂ (ಜೂನ್ ೧೯೨೨ರ ಮೈ.ಆರಿಯಲ್ಲಿ ಸ್ವನಿವೇದನೆ) ಇದು ಪ್ರಕಟವಾದಂತೆ ತೋರುವುದಿಲ್ಲ. ಹಾಗೆ ಸಿದ್ಧಮಾಡಿದ್ದು ನಿಶ್ಚಯವಾದರೆ, ಅದರ ಹಸ್ತಪ್ರತಿ ಪುರಾತತ್ವ ಇಲಾಖೆಯ ಕಛೇರಿಯಲ್ಲಿ ಮತ್ತೆಲ್ಲಿಯೋ ಇರುವುದು ಸಂಭವನೀಯ. ಸಿ.ಆರ್. ಚೆಲ್ಲಮ್ಮನವರ 'ಪಾರಿಜಾತಾಪಹರಣ ನಾಟಕ' ವನ್ನು ಅವರು ಪರಿಶೋಧಿಸಿದ್ದು, ಇದು ಮೈಸೂರು ವಿದ್ಯಾತರಂಗಿಣೀ ಮುದ್ರಾಕ್ಷರ ಶಾಲೆಯಲ್ಲಿ ಮುದ್ರಿತವಾಗಿ ೧೮೯೬ರಲ್ಲಿ ಪ್ರಕಟವಾಗಿದೆ". (ಪ್ರಾಕ್ತನ, ಪುಟ xxxiii).

## ಹಿಸ್ಟರಿ ಆಫ್ ಕನ್ನಡ ಲಾಂಗ್ವಿಜ್

ನರಸಿಂಹಾಚಾರ್ಯರು ನಿವೃತ್ತರಾದ ನಂತರ ಮೈಸೂರು ವಿಶ್ವವಿದ್ಯಾನಿಲಯದ ಕೋರಿಕೆಯ ಮೇರೆಗೆ ಹತ್ತು ವಿದ್ವತ್ಪೂರ್ಣ ಉಪನ್ಯಾಸಗಳನ್ನು ನೀಡಿದರು. ಅವುಗಳಲ್ಲಿ ಐದು ಕನ್ನಡ ಭಾಷೆಯ ಇತಿಹಾಸವನ್ನು ಕುರಿತಂತೆಯೂ ಉಳಿದೈದು ಕನ್ನಡ ಸಾಹಿತ್ಯದ ಇತಿಹಾಸವನ್ನು ಕುರಿತಂತೆಯೂ, ಆಗಿದ್ದವು. ಕನ್ನಡ ಭಾಷೆಯ ಇತಿಹಾಸ'ವನ್ನು ಕುರಿತ ಉಪನ್ಯಾಸ ೧೯೨೬ ನವೆಂಬರ್ ಕೊನೆಯಲ್ಲಿ ಮತ್ತು ಡಿಸೆಂಬರ್ ಮೊದಲಲ್ಲಿ ನೀಡಿದುದಾಗಿತ್ತು. ಅದೇ ಉಪನ್ಯಾಸವನ್ನು ೧೯೨೭ ಜನವರಿಯಲ್ಲಿ ಬೆಂಗಳೂರಿನಲ್ಲಿ ನೀಡಲಾಗಿತ್ತು. ಕನ್ನಡ ಸಾಹಿತ್ಯದ ಇತಿಹಾಸ' ವನ್ನು ಕುರಿತಂತೆ ೧೯೨೮ ಮಾರ್ಚಿಯಲ್ಲಿ ಮೈಸೂರಿನಲ್ಲಿಯೂ ಅದೇ ವರ್ಷದ ಆಗಸ್ಟ್ ತಿಂಗಳಲ್ಲಿ ಬೆಂಗಳೂರಿನಲ್ಲಿಯೂ ನೀಡಲಾಗಿತ್ತು. ೧೯೩೪ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ 'ಹಿಸ್ಟರಿ ಆಫ್ ಕನ್ನಡ

ಲಾಂಗ್ವಜ್' ಎಂಬ ಹೆಸರಿನಲ್ಲಿ ಪುಸ್ತಕವನ್ನು ಪ್ರಕಟಿಸಿತು. ೨೨೪ ಪುಟದ ಆಂಗ್ಲ ಭಾಷೆಯಲ್ಲಿರುವ ಈ ಕೃತಿಯ ದ್ವಿತೀಯ ಮುದ್ರಣ ೧೯೬೯ರಲ್ಲಿ ಹೊರಬಂದಿತು.

ಇದರಲ್ಲಿ ಐದು ಅಧ್ಯಾಯಗಳಿವೆ. ಮೊದಲನೆಯದು ದ್ರಾವಿಡ ಭಾಷೆಗಳು ಮತ್ತು ಕನ್ನಡದ ಸ್ಥಾನವನ್ನು ಕುರಿತದ್ದು. ದ್ರಾವಿಡ ಪದದ ನಿಷ್ಪತ್ತಿ, ದ್ರಾವಿಡ ಭಾಷಾ ಗುಂಪು, ದ್ರಾವಿಡರ ನಾಗರೀಕತೆ, ಸಂಸ್ಕೃತದಿಂದ ದ್ರಾವಿಡ ಗುಂಪಿನ ಪ್ರತ್ಯೇಕತೆ, ಆರ್ಯ ಭಾಷೆಗಳ ಮೇಲೆ ದ್ರಾವಿಡದ ಪ್ರಭಾವ, ತಮಿಳು, ಮಲಯಾಳ, ತೆಲುಗು ಭಾಷೆಗಳ ಪರಿಚಯ, ಕರ್ನಾಟಕ ಅಥವಾ ಕನ್ನಡ ಪದದ ವಿಶ್ಲೇಷಣೆ, ಕನ್ನಡ ಭಾಷೆಯ ಪ್ರಾಚೀನತೆ, ಕನ್ನಡ-ತಮಿಳಿನ ಸಂಬಂಧ, ಕನ್ನಡದ ಉಪಭಾಷೆಗಳು ಮತ್ತು ಅವನ್ನ ಮಾತನಾಡುವವರ ಸಂಖ್ಯೆ - ಇತ್ಯಾದಿ ವಿಷಯಗಳನ್ನು ಕುರಿತಾದ ವಿಶ್ಲೇಷಣೆ ಇದರಲ್ಲಿದೆ. ಎರಡನೆಯದು ಕನ್ನಡ ಭಾಷೆಯ ಇತಿಹಾಸ, ವರ್ಣಮಾಲೆಯ ಕೆಲವು ವಿಶೇಷ ಲಕ್ಷಣಗಳು ಮತ್ತು ಭಾಷಾವೈಲಕ್ಷಣ್ಯಗಳನ್ನು ಕುರಿತಾದದ್ದು. ಕವಿರಾಜಮಾರ್ಗ ಕಾಲದ ಕನ್ನಡ, ಕನ್ನಡಿಗರು ಮತ್ತು ಅವರ ಸಂಪ್ರದಾಯಗಳು, ಅಶೋಕನ ಕಾಲದ ಲಿಪಿ, ಧ್ವನಿವ್ಯವಸ್ಥೆ, ಸ್ವರವ್ಯತ್ಯಯ ವಿಚಾರ ಇತ್ಯಾದಿಗಳ ವಿವರ ಲಭ್ಯವಾಗುತ್ತದೆ. ಮೂರನೆಯದು ಲಿಂಗ, ವಚನ, ವಿಭಕ್ತಿ - ಮುಂತಾದ ವ್ಯಾಕರಣ ಪ್ರಕ್ರಿಯೆಗಳಿಗೆ ಸಂಬಂಧಿಸಿದ್ದಾಗಿದೆ. ನಾಲ್ಕನೆಯದು ಶಬ್ದಕೋಶ, ಅದರಲ್ಲಿ ದೇಶ, ಅನ್ಯದೇಶ, ತತ್ಸಮ, ತದ್ಭವ ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ, ಹೊಸಗನ್ನಡ - ಎಂಬ ಕನ್ನಡ ಭಾಷೆಯ ಅವಸ್ಥೆಗಳು - ಇತ್ಯಾದಿ ಸಂಗತಿಗಳನ್ನು ಒಳಗೊಂಡಿದೆ. ಐದನೆಯದು ಭಾಷೆಯ ಬೆಳವಣಿಗೆಯಲ್ಲಾದ ಬದಲಾವಣೆಗಳು ಮತ್ತು ಅದಕ್ಕೆ ಇರುವ ಕಾರಣಗಳನ್ನು ತಿಳಿಸುತ್ತದೆ. ಕನ್ನಡ ಭಾಷಾಭಿವೃದ್ಧಿಯ ಸಂಗತಿಗಳೂ ಜೊತೆಗಿವೆ. ಒಟ್ಟಾರೆ ಕನ್ನಡ ಭಾಷೆ ಮತ್ತು ಸಾಹಿತ್ಯದ ಬಗೆಗೆ ಆರ್.ನರಸಿಂಹಾಚಾರ್ಯರಿಗೆ ಇರುವ ಪಾಂಡಿತ್ಯ ಮತ್ತು ಪ್ರತಿಭೆಯನ್ನು ಗುರುತಿಸುವಂತಿದೆ.

## ಸಂಸ್ಕೃತ ಕೃತಿಗಳು

'ಶಬ್ದರೂಪಾವಳಿ', 'ಚಂಪೂರಾಮಾಯಣ ಭಾಗಗಳು', 'ಪುರುಷಾರ್ಥ ಕಲ್ಪದ್ರುಮ' (ವೇದ ಮತ್ತು ಸ್ತೋತ್ರಗಳ ಸಂಗ್ರಹ)-ಇವು ಸಂಸ್ಕೃತ ಕೃತಿಗಳು. ಆರ್.ನರಸಿಂಹಾಚಾರ್ಯರ ಈ ಕೃತಿಗಳು ಪರಿಶೀಲನೆಗೆ ದೊರತಿಲ್ಲವಾದುದರಿಂದ ಅವುಗಳ ಬಗೆಗೆ ವಿವರವಾಗಿ ಬರೆಯಲು ಸಾಧ್ಯವಾಗಿಲ್ಲ ಕನ್ನಡದ 'ವಸ್ತುಪಾಠಗಳು (೧,೨)' ಎಂಬುದರ ಬಗೆಗೂ ಅದೇ ಅಭಿಪ್ರಾಯವನ್ನು ವ್ಯಕ್ತಪಡಿಸಬಹುದಾಗಿದೆ. ಹೈದರಾಬಾದ್ ಶಿಲ್ಪಕಲೆಗೆ ಸಂಬಂಧಿಸಿದ ಏಳನೆಯ ಸಂಪುಟವನ್ನು ಆರ್.ನರಸಿಂಹಾಚಾರ್ ಸಂಪಾದಿಸಿಕೊಟ್ಟಿರುವ ಸಂಗತಿ ತಿಳಿದುಬರುತ್ತದೆ.

## ೪. ಪುರಾತತ್ವ ಇಲಾಖೆಯಲ್ಲಿ

೧೯೦೬-೧೯೨೨ ಈ ಅವಧಿಯಲ್ಲಿ ಆರ್. ನರಸಿಂಹಾಚಾರ್ಯರು ಪುರಾತತ್ವ ಇಲಾಖೆಯಲ್ಲಿ ನಿರ್ದೇಶಕರಾಗಿ ಸೇವೆಸಲ್ಲಿಸಿದ್ದರು. ಅವರು ನಿರ್ದೇಶಕರಾಗಿದ್ದ ಅವಧಿಯ ಸಾಧನೆ ಕರ್ನಾಟಕದ ಇತಿಹಾಸ, ಸಾಹಿತ್ಯ, ಭಾಷೆ ಮತ್ತು ಸಂಸ್ಕೃತಿಯ ದೃಷ್ಟಿಯಿಂದ ಗಮನಾರ್ಹವಾದುದು. ಅಲ್ಲಿಯವರ ಸಹಕಾರದೊಂದಿಗೆ ಹಲವು ಸಾಧನೆಗಳಲ್ಲಿ ನಿರತರಾಗಿದ್ದು ಆರಂಭದಲ್ಲಿ ಸುಮಾರು ೫,೦೦೦ ಶಾಸನಗಳನ್ನು ಗುರುತಿಸಲು ಸಾಧ್ಯವಾಯಿತು. ನರಸಿಂಹಾಚಾರ್ಯರು ಒಂದು ಸಾವಿರಕ್ಕೂ ಹೆಚ್ಚು ವಾಸ್ತುಗಳನ್ನು ಪತ್ತೆಹಚ್ಚಿದ್ದಲ್ಲದೆ, ಸಾವಿರದ ಎಂಟನೂರು ಓಲೆಪ್ರತಿಗಳನ್ನು ವಿವರಿಸಿದರು. ಕ್ರೋಡೀಕರಿಸಿದ ಹಸ್ತಪ್ರತಿಗಳು ತಾಳೆಯೋಲೆಗಳಂತೂ ಹಲವಾರು. ಅವುಗಳಲ್ಲಿ ೧೨೫ಕ್ಕೂ ಹೆಚ್ಚು ಅಪರೂಪದ ಪ್ರಾಚೀನ ಕನ್ನಡ, ಸಂಸ್ಕೃತ ಗ್ರಂಥಗಳಾಗಿದ್ದವು. ಸುಮಾರು ಒಂದುನೂರು ಸಂಪುಟಗಳನ್ನು ಪ್ರತಿಮಾಡಿಸಿ ಪ್ರಾಚ್ಯಕೋಶಾಗಾರದಲ್ಲಿ ಇರಿಸಿದರು. ಜೊತೆಗೆ ಅವರ ಮಾರ್ಗದರ್ಶನದಲ್ಲಿ ಸುಮಾರು ೧೨೫೦ ಚಿತ್ರಗಳು ಸುಮಾರು ೧೨೦ ನಕ್ಷೆಗಳು ಸಿದ್ಧಗೊಂಡವು.

ಎಪಿಗ್ರಾಫಿಯ ಕರ್ನಾಟಕ ಸಂಪುಟಗಳಿಗೆ ವಿವರವಾದ ಸಾಮಾನ್ಯ ಪದಸೂಚಿ, ಎಂ.ಎ.ಆರ್.ಪದಸೂಚಿ (ಮೈಸೂರು - ಆರ್ಕ್ಯಾಲಾಜಿಕಲ್ ರಿಪೋರ್ಟ್) ಶ್ರವಣಬೆಳಗೊಳದ ಶಾಸನಗಳ ಪರಿಷ್ಕೃತ ಸಂಪುಟ, ಶಾಸನ ಪದ್ಯಮಂಜರಿ ಸಂಪಾದನೆ ಮುಂತಾದ ಕಾರ್ಯಚಟುವಟಿಕೆಗಳು ಯಶಸ್ವಿಯಾಗಿ ನಡೆದವು. ನಾಗವರ್ಮನ ಕಾವ್ಯಾವಲೋಕನ, ಭಾಷಾಭೂಷಣ ಎಂಬ ಲಕ್ಷಣಗ್ರಂಥಗಳ ಸಂಶೋಧನೆಗೆ ವಿದ್ವತ್ಪೂರ್ಣ ಉಪೋದ್ಘಾತಗಳನ್ನ ಬರೆಯಲು ಸಾಧ್ಯವಾಯಿತು. ಮುಂದೆ ಭಟ್ಟಾಕಳಂಕನ “ಕರ್ನಾಟಕ ಶಬ್ದಾನುಶಾಸನ'ವನ್ನು ಪರಿಷ್ಕರಿಸಿ ಸಂಪಾದಿಸಿದರು. ಸೋಮನಾಥಪುರ, ಬೇಲೂರು, ದೊಡ್ಡಗದವಳ್ಳಿಯ ಹೊಯ್ಸಳ ದೇವಾಲಯಗಳ ಕೈಪಿಡಿಗಳನ್ನು ಹೊರತಂದರು. ಪಟೇಲ್ ಶಿವನಂಜೇಗೌಡರ ಹಳೇಬೀಡು ಮತ್ತು ಅಲ್ಲಿಯ ದೇವಾಲಯಗಳ ಬಗೆಗಿನ ವರದಿಯನ್ನು ಪ್ರಕಟಿಸಿದರು. ಕನ್ನಡ ಭಾಷೆ, ಸಾಹಿತ್ಯ ಹಾಗೂ ಶಾಸನ ಮತ್ತು ವಾಸ್ತು ಕಲೆಯನ್ನ ಕುರಿತ ಅಧ್ಯಾಯಗಳು ಮೈಸೂರು ಗೆಜೆಟಿಯರ್ ಪರಿಷ್ಕೃತ ಆವೃತ್ತಿಯಲ್ಲಿ ಸೇರ್ಪಡೆಯಾಗಲು ನರಸಿಂಹಾಚಾರ್ಯರು ಕಾರಣರಾದರು. ಮೈಸೂರು ಮತ್ತು ಕೊಡುಗು ಕುರಿತ ಲೇಖನಗಳು ಇಂಪೀರಿಯಲ್ ಗೆಜೆಟಿಯರ್‌ಗಾಗಿ (ಭಾರತ ಸರ್ಕಾರ) ಸಿದ್ಧವಾಗಲು ಕಾರಣರಾದವರೂ ಅವರೇ. ೧೯೦೬-೧೯೨೨ರ ಅವಧಿಯ ಪುರಾತತ್ವ ಇಲಾಖೆಯ ವಾರ್ಷಿಕ ವರದಿಗಳ ಶಬ್ದ ಸೂಚಿಯನ್ನು ಅವರೇ ಸಿದ್ದಪಡಿಸಿದರು. ಸರ್ಕಾರದ ವಿವಿಧ ಭಾಗಗಳಿಂದ ಬಂದ ಸುಮಾರು ೨೫೦ ಪುಸ್ತಕಗಳನ್ನು ಹಸ್ತಪ್ರತಿಗಳನ್ನು ಅವಲೋಕಿಸಿದರು.

“ಕ್ರಿಶ.೧೮೬೭ರ ಗ್ರಂಥ ವಿಷಯದ ಕಾಯದೆ ಪಾಸಾದಾಗ ಮೈಸೂರು ಬ್ರಿಟಿಷರ ನೇರ ಆಡಳಿತದಲ್ಲಿಯೇ ಇದ್ದಿತು. ಆದ್ದರಿಂದ ಈ ಕಾಯ್ದೆಯು ಅಲ್ಲಿಯೂ ಕಾರ್ಯಾಚರಣೆಯಲ್ಲಿ ಬಂದಿದ್ದಿತು. ಹೊಸ ಪುಸ್ತಕಗಳ ಕುರಿತ ವರದಿಗಳು ನಿಯತವಾಗಿ ಪ್ರಕಟವಾಗತೊಡಗಿದವು. ಕ್ರಿಶ. ೧೮೮೮ರ ವರೆಗಿನ ವರದಿಗಳನ್ನು ಬಿ.ಎಲ್.ರೈಸ್ ಸಿದ್ಧಪಡಿಸಿದರು. ಅನಂತರ ಎಚ್. ಜೆ. ಬಾಬಾ ಶಿಕ್ಷಣಾಧಿಕಾರಿಯಾಗಿದ್ದಾಗ ಇಂಥ ವಾರ್ಷಿಕ ವರದಿಗಳಲ್ಲಿ ಹೆಚ್ಚು

ವಿವರಗಳು ದೊರೆಯುತ್ತವೆ. ೧೮೯೦ರ ವರದಿಯಲ್ಲಿ ಅತಿರೇಕ ಶೃಂಗಾರದ ಎರಡು ಕವಿತಾ ಪುಸ್ತಕಗಳ ಪ್ರಸ್ತಾಪ ಬಂದಿದ್ದು ಸಂಬಂಧಪಟ್ಟ ಪ್ರಕಾಶಕರನ್ನು ಕರೆದು ಎಚ್ಚರಿಕೆ ಕೊಡಲಾಯಿತು. ಆಗ ಒಬ್ಬ ಪ್ರಕಾಶಕನು ತನ್ನ ಪುಸ್ತಕದ ಎಲ್ಲ ಪ್ರತಿಗಳನ್ನು ಕಚೇರಿಗೆ ಹಾಜರುಪಡಿಸಿದನು ಎಂದು ಇನ್ನೊಬ್ಬನು ಹಾಗೆ ಮಾಡಿದ್ದರಿಂದ ಅವನ ಮೇಲೆ ಸರ್ಕಾರಿ ವಕೀಲನ ಮುಖಾಂತರ ಕೇಸು ನಡೆಸಲಾಗಿದೆ ಎಂದು ವರದಿಯಲ್ಲಿ ಕಾಣಿಸಲಾಗಿದೆ. ಗಂಡ ವಿಷಯಕ ಕಾಯಿದೆಯ ಕಾರ್ಯಾಚರಣೆಗೆ ಇದೊಂದು ನಿದರ್ಶನ. ಎಚ್. ಜೆ. ಬಾಬಾ ಅವರ ನಿರ್ದೇಶನದಲ್ಲಿ ಮೈಸೂರು ಸರ್ಕಾರದ ಕನ್ನಡ ಭಾಷಾಂತರಕಾರರಾಗಿದ್ದ ಆರ್. ನರಸಿಂಹಾಚಾರ್ಯರು ಇಂಥ ಸಮೀಕ್ಷೆಯ ಕೆಲಸವನು. ಕೈಗೆತ್ತಿಕೊಂಡಂದಿನಿಂದ ನಮಗೆ ಆಗಿನ ಕೃತಿಗಳ ಮೌಲ್ಯಮಾಪನವೂ ದೊರೆಯುತ್ತದೆ. ಹೊಸಗನ್ನಡ ಸಾಹಿತ್ಯದಲ್ಲಿನ ನವೀನ ಪ್ರಯೋಗಗಳನ್ನು ಕಣ್ಣಿಟ್ಟು ಗುರುತಿಸಿದ ಅವರ ಆಧುನಿಕ ದೃಷ್ಟಿಕೋನವು ೧೮೯೩ರ ಅನಂತರದ ಕೆಲವು ವರ್ಷಗಳ ವರದಿಯಲ್ಲಿ ನಾವು ವಿಶೇಷವಾಗಿ ಕಾಣುತ್ತೇವೆ". (ಡಾ. ಶ್ರೀನಿವಾಸ ಹಾವನೂರ, ಹೊಸಗನ್ನಡ ಅರುಣೋದಯ. ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ ೧೯೭೪, ಪುಟ-೫೫)

ಕರ್ನಾಟಕದ ಹಲವಾರು ಭಾಗಗಳಲ್ಲಿ ಆರ್. ನರಸಿಂಹಾಚಾರ್ಯರು ಭೂಶೋಧನೆಯಲ್ಲಿ ಕಾರ್ಯಪ್ರವೃತ್ತರಾಗಿದ್ದರು. ಅದರ ಫಲವಾಗಿ ನಾಣ್ಯ, ಮಡಕೆ. ಕುಡಿಕೆ - ಇತ್ಯಾದಿ ಪುರಾತತ್ವ ವಸ್ತುಗಳ ಶೋಧನೆಗೆ ಕಾರಣರಾದರು. ಚಿತ್ರದುರ್ಗ, ತಲಕಾಡು ಮತ್ತು ಹಳೇಬೀಡಿನಲ್ಲಿ ನಡೆದ ಉತ್ಖನನ ಕಾರ್ಯವನ್ನು ಇಲ್ಲಿ ನೆನೆಯಬಹುದು. ಇವೆಲ್ಲ ಅವರ ಸತತ ಪರಿಶ್ರಮ ಮತ್ತು ಪಾಂಡಿತ್ಯದ ಫಲವಾಗಿ ಕಂಡುಬರುತ್ತವೆ. ಈ ಮುಂಚೆ ಪ್ರಸ್ತಾಪಿಸಿದಂತೆ ನರಸಿಂಹಾಚಾರ್ಯರು ಹಲವಾರು ಶಾಸನಗಳನ್ನು ಹುಡುಕಿದ್ದಾರೆ, ಅಧ್ಯಯನ ಮಾಡಿದ್ದಾರೆ. ಅವುಗಳ ಮೂಲಕ ಹೊಸ ಸಂಗತಿಗಳನ್ನು ಬೆಳಕಿಗೆ ತಂದಿದ್ದಾರೆ. ಕದಂಬರು, ರಾಷ್ಟ್ರಕೂಟರು, ಚಾಲುಕ್ಯರು, ಹೊಯ್ಸಳರು, ಚೋಳರು, ಸಾವಂತರು, ಚಂಗಾಳ್ವರು, ಮುನ್ನಾಟರು, ವಿಜಯನಗರ ಮತ್ತು ಮೈಸೂರು ಅರಸರು, ಆವತಿ, ಬೇಲೂರು ಹದಿನಾಡು, ಹೊಳೆನರಸೀಪುರ, ಹುಲಿಕಲ್ಲು, ಸುಗುಟೂರು, ಉಮ್ಮತ್ತೂರು, ಯಲಹಂಕಗಳ ಪಾಳೇಗಾರರು ಮುಂತಾದವುಗಳಿಗೆ ಸಂಬಂಧಿಸಿದ ಶಾಸನಗಳಲ್ಲಿ ಎಷ್ಟೋ ಹೊಸ ಸಂಗತಿಗಳು ಬೆಳಕಿಗೆ ಬಂದಿವೆ. ಸಂಶೋಧಕರು ಈಗಾಗಲೇ ಅವನ್ನ ಗುರುತಿಸಿದ್ದಾರೆ. ದ್ರಾವಿಡ ಹಾಗೂ ಹೊಯ್ಸಳ ಶೈಲಿಗೆ ಸೇರಿದ ಹಲವಾರು ದೇವಾಲಯಗಳಿಗೆ ಭೇಟಿ ನೀಡಿ ಅಲ್ಲಿಯ ಹೊಸಸಂಗತಿಗಳು ಬೆಳಕಿಗೆ ಬರಲು ಕಾರಣರಾದ ನರಸಿಂಹಾಚಾರ್ಯರು ಹಲವು ಪ್ರಥಮಗಳಿಗೂ ಹೆಸರಾಗಿದ್ದಾರೆ. ಕಲಾಕೃತಿಗಳು, ಮಾಸ್ತಿಕಲ್ಲು, ವೀರಗಲ್ಲು, ಶಿಲ್ಪಗಳು, ನಾಗರಕಲ್ಲು, ವಾಸ್ತುಚಿತ್ರ - ಇತ್ಯಾದಿ ವಿವರಗಳು ಮೊದಲಬಾರಿಗೆ ಶೋಧಿಸಲ್ಪಟ್ಟಿದ್ದು ಮಹತ್ವದ ಸಂಗತಿ. ಇದರಿಂದಾಗಿ ಭಾರತೀಯ ಕಲೆ ಹಾಗೂ ಶಿಲ್ಪಗಳ ತಜ್ಞರು ಮೈಸೂರು ಕಲಾಕೃತಿಗಳ ಬಗೆಗೆ ಹೆಚ್ಚಿನ ಆಸಕ್ತಿವಹಿಸಿ, ಅವುಗಳ ವಿಶೇಷತೆಯನ್ನು ಸಮರ್ಪಕವಾಗಿ ಗುರುತಿಸುವುದಕ್ಕೆ ಇವರಿಂದ ತಕ್ಕ ಪ್ರಚೋದನೆಯುಂಟಾಯಿತು. ವಿನ್ಸೆಂಟ್ ಸ್ಮಿತ್ ಅವರು ಇಂಡಿಯನ್ ಆಂಟಿಕ್ವೆರಿ ಪತ್ರಿಕೆಯಲ್ಲಿ (ಮೇ ೧೯೧೫) "ಮ॥ ನರಸಿಂಹಾಚಾರ್ಯರ ಉತ್ಕೃಷ್ಟ ಚಿತ್ರಗಳಿಂದ ಸಮೃದ್ಧವಾದ ವರದಿಗಳು ಹೊಯ್ಸಳ ದೇವಾಲಯಗಳ ವಾಸ್ತುವಿವರಣೆಗೆ ಸಂಬಂಧಿಸಿದ ಹಾಗೆ ತೀರ ಹೊಸದಾಗಿರುವ ಅಗಾಧ ಸಾಮಗ್ರಿಯನ್ನು ಒದಗಿಸಿವೆ ಎಂದು ಬರೆದುದಲ್ಲದೆ ತಮ್ಮ ಪುಸ್ತಕ History of Fine Art in

India ಎಂಬುದರಲ್ಲಿ, ತಾವು ವ್ಯಕಮಾಡಿರುವ ಅಭಿಪ್ರಾಯಗಳಲ್ಲಿ ಈ ಸಂಬಂಧವಾದ ಕೆಲವು ಮಾರ್ಪಾಡು ಹೊಂದಬೇಕಾದುದರ ಅಗತ್ಯವನ್ನು ಸ್ಪಷ್ಟಪಡಿಸಿರು. ತಮ್ಮ ಪುಸ್ತಕದ ಹೊಸ ಆವೃತ್ತಿ ಬಂದಾಗ, ಹೊಯ್ಸಳ ಶಿಲ್ಪದ ವಿಮರ್ಶೆಗೆ ಪ್ರತ್ಯೇಕವಾದ ಅಧ್ಯಯನವನ್ನೇ ಬರೆಯಬೇಕಾಗುವುದೆಂದೂ ಅದರ ಹಿರಿಮೆಯನ್ನು ಕುರಿತು ತೃಪ್ತಿಕರ ತೀರ್ಮಾನವನ್ನು ಉಲ್ಲೇಖಿಸಬೇಕಾಗುವುದೆಂದೂ ಅಲ್ಲಿ ಸೂಚಿಸಿದರು. (ಪ್ರಾಕ್ತನ-xxxvi).

ನಾಣ್ಯ ಶೋಧನೆಯಲ್ಲಿ ನರಸಿಂಹಾಚಾರ್ಯರ ಶ್ರಮ ಅಪಾರವಾದುದು. ಶಾತವಾಹನರಿಗೆ ಸಂಬಂಧಿಸಿದ ಆಂಧ್ರದ ನಾಣ್ಯಗಳನ್ನು, ಆಗಸ್ಟಸ್ ಚಕ್ರವರ್ತಿಯ ಕಾಲಕ್ಕೆ ಸೇರಿದ ರೋಮನ್ ನಾಣ್ಯಗಳನ್ನು, ಬೆಳ್ಳಿಯ ದೀನಾರಗಳನ್ನ ಹಾನ್‌ವು.ಟಿ. ಚಕ್ರವರ್ತಿಯ ಕಾಲದ ಚೀನಿ ನಾಣ್ಯಗಳನ್ನು ಕಂಡುಹಿಡಿದ ಕೀರ್ತಿಯೂ ನರಸಿಂಹಾಚಾರ್ಯರಿಗೆ ಸಲ್ಲುತ್ತದೆ. 'ಹೊಯ್ಸಳ ನಾಣ್ಯಗಳು ಚಿನ್ನದ ಪಣಗಳನ್ನು ಒಳಗೊಂಡಿದ್ದು ಇವು ಆವರೆಗೆ ಕಂಡುಬಂದಿರಲಿಲ್ಲ. ಚಿತ್ರದುರ್ಗದ ಶೋಧದ ಬಗ್ಗೆ ಪ್ರೊ. ಲ್ಯಾಪ್‌ಸನ್ ತಮ್ಮ ಮೆಚ್ಚುಗೆ ಸೂಚಿಸಿ, ಅವುಗಳ ಚಾರಿತ್ರಿಕ ಪ್ರಾಮುಖ್ಯತೆಯನ್ನು ಒಪ್ಪಿ ನರಸಿಂಹಾಚಾರ್ಯರಿಗೆ ಪತ್ರ ಬರೆದರು. ಬೆಂಗಳೂರಿನ ಮ್ಯೂಸಿಯಂನಲ್ಲಿದ್ದ ಬೆಳ್ಳಿಯ ನಾಣ್ಯಗಳನ್ನು ಗುರುತಿಸಿ ಅವು ಬ್ಯಾಕ್ಟ್ರಿಯನ್, ಪರ್ಶಿಯನ್, ಬರ್ಮೀ, ಸಯಾಮೀ ನಾಣ್ಯಗಳೆಂಬುದಾಗಿಯೂ ಮೈಸೂರು, ಹೈದರಾಬಾದು ಮತ್ತು ಬರೋಡ ಸಂಸ್ಥಾನದ ನಾಣ್ಯಗಳೆಂಬುದಾಗಿಯೂ ಬ್ರಿಟಿಷ್ ಮತ್ತು ಇತರ ಈಸ್ಟ್ ಇಂಡಿಯಾ ಕಂಪನಿ ನಾಣ್ಯಗಳೆಂಬುದಾಗಿಯೂ ಸ್ಪಷ್ಟಪಡಿಸಲಾಯಿತು. ಇಲಾಖೆಯ ಉಪಯೋಗಕ್ಕೆ ಎಂದು ನಾಣ್ಯಗಳ ಒಂದು ಅರೆಯನ್ನು ನಿರ್ಮಾಣ ಮಾಡಿಸಿ ಅವುಗಳಲ್ಲಿರಿಸಿದ ಎಲ್ಲಾ ಬಂಗಾರ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಸಚಿತ್ರವಾಗಿ ವಿವರಿಸಿದ್ದಾಯಿತು (ಅದೇ ಪುಟ-xxxvi)

ನರಸಿಂಹಾಚಾರ್ಯರು ಶೋಧಿಸಿದ ಹಸ್ತಪ್ರತಿಗಳು ಹಲವಾರು. ಅವುಗಳ ಬಗೆಗೆ ಇಲಾಖೆಯ ವಾರ್ಷಿಕ ವರದಿಗಳಲ್ಲಿ ಮಾಹಿತಿ ನೀಡಿದರು. ೧೯೦೯ರಲ್ಲಿ ಭಾಸನ ಸ್ವಪ್ನವಾಸವದತ್ತ ಮತ್ತು ಪ್ರತಿಜ್ಞಾ ಯೌಗಂಧರಾಯಣ ನಾಟಕಗಳನ್ನು ಗುರುತಿಸಲಾಯಿತು. ಪಲ್ಲವ ಇತಿಹಾಸದ ಮೇಲೆ ಬೆಳಕು ಚೆಲ್ಲಿದ 'ಲೋಕವಿಭಾಗ' ಎಂಬ ಜೈನಗ್ರಂಥವನ್ನು ಶೋಧಿಸಿದರು. ಜೈನಲೇಖಕ ಉಗ್ರಾದಿತ್ಯನ "ಕಲ್ಯಾಣಕಾರಕ' ಎಂಬ ವೈದ್ಯಕೀಯ ಗ್ರಂಥವನ್ನು ಶೋಧಿಸಿದರು. ಸಾಯಣಾಚಾರ್ಯರ ಅಲಂಕಾರ ಸುಧಾನಿಧಿ' ಯನ್ನ ಗುರುತಿಸಿದರು. ಈ ವಿವರಗಳು ನರಸಿಂಹಾಚಾರ್ಯರು ತಮ್ಮ ನಿವೃತ್ತಿಯ ನಂತರ ಹೇಳಿಕೊಂಡಿರುವ ದಾಖಲೆಗಳಿಂದ ತಿಳಿದುಬರುತ್ತವೆ (ಎಂ.ಎ.ಆರ್, ಜೂನ್ ೧೯೨೨ ಪುಟ ೧೯, ೨೪).

ಬಹುಭಾಷಾ ವಿದ್ವಾಂಸರಾದ ಆರ್. ನರಸಿಂಹಾಚಾರ್ಯರು ಕಲೆ, ಸಾಹಿತ್ಯ, ಶಾಸನ, ಪುರಾತತ್ವಶಾಸ್ತ್ರ ಮುಂತಾದ ಹಲವು ವಿಷಯಗಳಲ್ಲಿ ಪಾಂಡಿತ್ಯ ಗಳಿಸಿದ್ದವರು. ಪಾಂಡಿತ್ಯ ಪ್ರತಿಭೆ ಮತ್ತು ಸಂಯಮದಲ್ಲಿ ರೈಸ್ ಅವರಿಗೆ ತಕ್ಕನಾದ ಉತ್ತರಾಧಿಕಾರಿ ಎಂಬ ಮಾತು ಜನಜನಿತವಾಗಿತ್ತು. ರೈಸರ ನಂತರ ಹಲವಾರು ಶಾಸನಗಳನ್ನು ಪರಿಷ್ಕರಿಸಿದ್ದರು, ಅವನ್ನ ಕುರಿತು ಹಲವಾರು ಟಿಪ್ಪಣಿಗಳನ್ನು ಬರೆದಿದ್ದರು. ಆ ಬಗೆಗಿನ ಮಾಹಿತಿಯನ್ನು ಟಿ.ವಿ. ವೆಂಕಟಾಚಲಶಾಸ್ತ್ರಿ ಅವರು ತಮ್ಮ ಕೃತಿಯಲ್ಲಿ ನೀಡಿದ್ದಾರೆ: -

“೧. ಗಂಗ ಶ್ರೀಪುರುಷನ ತಾಮ್ರಪಟಗಳು ದೊರೆತು ಗಂಗರ ಇತಿಹಾಸಕ್ಕೆ ತಕ್ಕ ಸಾಮಗ್ರಿ ಒದಗಿತು. ೨. ಇಮ್ಮಡಿ ಹರಿಹರನ ತಾಮ್ರ ಪಟಗಳ ಮೂಲಕ, ಸಾಯಣರ ವೇದಭಾಷ್ಯ ರಚನೆಗೆ ಹಲವು ವಿದ್ವಾಂಸರು ನೆರವಾದುದನ್ನು ಆಚಾರ್ಯರು ತರ್ಕಿಸಿದರು (೧೯೦೭-೮). ೩. ಚಂದ್ರವಳ್ಳಿಯ ಮಡಕೆ ಕುಡಿಕೆಗಳ, ಸೀಸದ ನಾಣ್ಯಗಳ ಶೋಧ ಸರ್ ಜಾನ್ ಮಾರ್ಷಲ್ ಅವರ ಮೆಚ್ಚುಗೆ ಗಳಿಸಿತು. ಅವರ ಕೋರಿಕೆಯಂತೆ ಮತ್ತೆ ಆ ಸ್ಥಳಕ್ಕೆ ಆಚಾರ್ಯರು ಭೇಟಿಕೊಟ್ಟರು. ಶ್ರವಣಬೆಳಗೊಳ ಶಾಸನ ಸಂಪುಟದ ಪರಿಷ್ಕರಣವನ್ನು ಆರಂಭಿಸಿದರು (೧೯೦೮-೦೯), ೪. ಆರಿಷ್ಟನೇಮಿಯ ನಿಸದಿಗಲ್ಲಿನ ಮೂಲಕ, ಇತರತ್ರ ದೊರೆಯುವ ಅಂತಹ ಶಾಸನಗಳ ಕಾಲನಿಷ್ಕರ್ಷೆಗೆ ಅವರು ಸಮರ್ಥರಾದರು. ೫. ಹುಲ್ಟ್ ಓದಿರುವ ಮರಾಠಿ ನಾಣ್ಯಗಳು ಮತ್ತೆ ವಿಮರ್ಶೆಗೊಳ್ಳಬೇಕೆಂದು ರ್‍ಯಾಪ್ಸನ್ ಆಚಾರ್ಯರ ಹೊಸ ನಾಣ್ಯಶೋಧಗಳ ಮೇಲೆ ಅಭಿಪ್ರಾಯಪಟ್ಟರು. ೬. ಸಿಂಹಸೂರಿಯ 'ಲೋಕವಿಭಾಗ'ದ ಮೂಲಕ ಪಲ್ಲವ ಸಿಂಹವರ್ಮನ ಕಾಲವನ್ನು ಗುರುತಿಸಿ, ಮನೆತನದ ಇತಿಹಾಸ ರಚನೆಗೆ ಸಹಾಯ ದೊರಕಿಸಿದರು. ೭. ತಿರುವಾಂಕೂರಿನ ಗಣಪತಿಶಾಸ್ತ್ರಿಗಳಿಗಿಂತ ಮೊದಲೇ ಭಾಸನ ೨ ನಾಟಕಗಳನ್ನು ೧೯೦೯ರಲ್ಲಿ ಗುರುತಿಸಿ ಲೋಕದ ಗಮನಕ್ಕೆ ತಂದರು. ೮. ೧೯೧೦ರಲ್ಲಿ ದೊರೆತ ತಾಳಗುಂದದ ಒಂದು ಪ್ರಾಚೀನ ಶಾಸನವನ್ನು ಶಿವಮೊಗ್ಗದಲ್ಲಿ ದೊರೆತ ತಾಮ್ರಶಾಸನಗಳನ್ನು ಜೊತೆಗಿಟ್ಟು ನೋಡಿ ಕದಂಬರ ಇತಿಹಾಸಕ್ಕೆ ಹೊಸ ಸಾಮಗ್ರಿ ದೊರಕಿಸಿದರು. ೯. ಹೊಯ್ಸಳ ವಾಸ್ತುಶಿಲ್ಪದ ಅನೇಕ ಕಟ್ಟಡಗಳನ್ನು ಗುರುತಿಸಿ, ಕಲೆಯ ವಿವರಗಳನ್ನು ಸಷ್ಟಪಡಿಸಿ, ಹೊಯ್ಸಳ ಶೈಲಿಯ ಪ್ರತ್ಯೇಕತೆಯನ್ನು ಎತ್ತಿಹಿಡಿದರು. ೧೦. ಗಂಗದೊರೆ ದುರ್ವಿನೀತನ ಗುಮ್ಮರೆಡ್ಡಿಪುರದ ತಾಮ್ರಶಾಸನಗಳನ್ನು ಕಂಡುಹಿಡಿದು ಆ ದೊರೆಯ ಐತಿಹಾಸಿಕತೆಗೆ ಮಹತ್ವದ ಕೊಡುಗೆ ನೀಡಿದರು (೧೯೧೨).

೧೧. ಒಂದನೆಯ ಮಾಧವನ ನಂದಿ ತಾಮ್ರಶಾಸನಗಳ ಮೂಲಕ ಗಂಗ ವಂಶವೃಕ್ಷದ ರಚನೆಗೆ ಒಳ್ಳೆಯ ಬೆಳಕು ಬೀರಿದರು. ೧೨. ಮೂರ್ತಿಶಿಲ್ಪದ ಮಾದರಿಗಳ ಸುಚಿತ್ರ ವಿವರಣೆ ವಿದ್ವಾಂಸರ ಆಸಕ್ತಿ ಕೆರಳಿಸಿತು; ಅಶುದ್ಧ ಶಾಸನ ಪಾಠಗಳು ಪರಿಷ್ಕೃತಗೊಂಡವು. ೧೩. ೧೯೧೪ರಲ್ಲಿ ದೊರೆತ ೧೦ನೆಯ ಶತಮಾನದ ಶಾಸನವೊಂದರಿಂದ ಬೆಂಗಳೂರಿನ ಪ್ರಾಚೀನತೆ ಸ್ಥಾಪಿಸಲ್ಪಟ್ಟಿತು. ಬೆಂದಕಾಳೂರಿನ ಐತಿಹ್ಯ ಭಗ್ನವಾಯಿತು. ೧೪. ಹೊಸಕೋಟೆಯ ತಾಮ್ರಶಾಸನದ ಮೂಲಕ ಗಂಗ ವಂಶವೃಕ್ಷದಲ್ಲಿ ಮಾಧವವರ್ಮನ ಮಗ ವಿಜಯಕೃಷ್ಣವರ್ಮನೆಂಬ ಹೊಸದೊರೆಯ ಉಲ್ಲೇಖ ಸೇರಿತು. ಇಮ್ಮಡಿ ಹರಿಹರನ ತಾಮ್ರ ಶಾಸನವೊಂದು ಕೃಷ್ಣರಾಜಪೇಟೆಯಲ್ಲಿ ದೊರೆತು ಬುಕ್ಕರಾಯನ ಮೃತಿಯ ತೇದಿ ನಿಗದಿಗೊಂಡಿತು. ೧೫. ಶೃಂಗೇರಿಯ ಬಗೆಗೆ ವಿಸ್ತಾರವಾದ ಅಧ್ಯಯನ ನಡೆದು, ಶೃಂಗೇರಿ ಗುರುಪರಂಪರೆ ಹಾಗು ವಿಜಯನಗರ ಸ್ಥಾಪನೆಯಲ್ಲಿ ಅವರ ಸ್ಥಾನ ಇವುಗಳ ಮೇಲೆ ಇನ್ನಷ್ಟು ಬೆಳಕು ಬೀಳುವಂತಾಯಿತು (೧೯೧೬). ಹೀಗೆಯೇ ಶೃಂಗೇರಿ ಮಠದಲ್ಲಿ ದೊರೆತ ಗಂಗ ತಾಮ್ರಪಟಗಳೂ ಮುಳುಬಾಗಿಲಿನಲ್ಲಿ ದೊರೆತವೂ ಚಾರಿತ್ರಿಕವಾಗಿ ಪ್ರಮುಖವೆನಿಸಿದವಾಗಿವೆ. ೧೬. ೧೯೧೬-೧೭ರಲ್ಲಿ ದುರ್ವಿನೀತ ಮತ್ತು ಶ್ರೀವಿಕ್ರಮರಸ್ಥಾನ ನಿರ್ದೇಶನಕ್ಕೆ ಇನ್ನಷ್ಟು ಶಾಸನಸಾಮಗ್ರಿ ಲಭ್ಯವಾಯಿತು. ೬ನೆಯ ಶತಮಾನದ ಮಧ್ಯಭಾಗದ ಪುನ್ನಾಟ ದೊರೆಯೊಬ್ಬನ ತಾಮ್ರಶಾಸನವೂ ಬೆಳಕಿಗೆ ಬಂದಿತು. ದೇವನಹಳ್ಳಿ

ತಾಲ್ಲೂಕಿನ ಮಾರಗೊಂಡನಹಳ್ಳಿಯ ಭೂಶೋಧದಲ್ಲಿ ಮಡಕೆ ಕುಡಿಕೆಯ ಚೋರೆಗಳು ಪತ್ತೆಯಾಗಿ ದಾಖಲೆಗೊಂಡವು. ಶೃಂಗೇರಿ ಮಠಕ್ಕೆ ಟಿಪ್ಪು ಬರೆದ ಪತ್ರಗಳ ಮೂಲಕ ಆತನ ಶೀಲ ಸ್ವಭಾವಗಳ ಬಗೆಗೆ ಹೊಸ ದೃಷ್ಟಿ ಮೂಡುವಂತಾಯಿತು. ಆವರೆಗೆ ದೊರೆತವುಗಳಲ್ಲಿ ಒಂದೇ ಒಂದಾದ ಶ್ರೀವಿಕ್ರಮನ ಶಿಲಾಶಾಸನ ಈ ವರ್ಷ ದೊರೆಯಿತು. ೧೭. ೧೯೧೭ - ೧೮ರಲ್ಲಿ ಇಮ್ಮಡಿ ಹರಿಹರನ ದೊಂಬಳ ತಾಮ್ರಶಾಸನಗಳು ದೊರೆತವು. ಕದಂಬರ ಭೋಗಿವರ್ಮನ ತಗರೆ ತಾಮ್ರಶಾಸನಗಳು ದೊರೆತವು. ಇವನ ಹೆಸರು ಮೊದಲು ತಿಳಿದು ಬಂದದ್ದು ಈ ಶಾಸನದಲ್ಲಿಯೇ. ಗಂಗ ಶಾಸನಗಳ ನೈಜತೆಯನ್ನು ಸ್ಥಾಪಿಸುವಲ್ಲಿ ಆಚಾರ್ಯರು ಯಶಸ್ವಿಗಳಾದುದಲ್ಲದೆ, ಈ ವಂಶದ ಇತಿಹಾಸ ರಚನೆಯಲ್ಲಿ ಇಲಾಖೆಯ ಕಾರ್ಯವನ್ನು ಆಂಗ್ಲ ವಿದ್ವಾಂಸರು ಮೆಚ್ಚುವಂತಾಯಿತು. ಬೇಲೂರು ಸೋಮನಾಥಪುರಗಳ ಕೈಪಿಡಿಗಳು ವಿಶ್ವವ್ಯಾಪಿ ಮನ್ನಣೆಗೆ ಪಾತ್ರವಾದವು. ೧೮. ೧೯೧೯ರಲ್ಲಿ ನೇತ್ರ ಶಿವನೆಂಬ ಶೈವಾಚಾರ್ಯನಿಗೆ ದಾನವಿತ್ತ ಸಂಗತಿಯಿರುವ ಗಂಗದೊರೆ ಇಮ್ಮಡಿ ರಾಜಮಲ್ಲನ ತಾಮ್ರಶಾಸನಗಳು ದೊರೆತವು. ತೀರ್ಥಹಳ್ಳಿ ತಾಲ್ಲೂಕಿನ ಮುಳುಬಾಗಿಲು ಮಠದ ತಾಮ್ರಶಾಸನಗಳ ಮೂಲಕ ಭಾಗವತ ಸಂಪ್ರದಾಯದ ಬಗೆಗೆ ಕುತೂಹಲಕರ ಮಾಹಿತಿ ಕಣ್ಣಿಗೆ ಬಿದ್ದಿತು. ೧೯. ೧೯೨೦ರಲ್ಲಿ ಆರ್ಚಾರು ತಾವು ಕಾರ್ಲೆ, ವೆಲ್ಲಿಂಗ್ಟನ್, ಬಾದಾಮಿ, ಎಲ್ಲೋರ ಮತ್ತು ಅಜಂತಗಳಿಗೆ ಹೋಗಿಬಂದುದರ ವರದಿಯನ್ನು ಸಚಿತ್ರವಾಗಿ ಒದಗಿಸಿದರು. ಈ ವರ್ಷದ ಶೋಧಗಳಲ್ಲಿ ಗಂಗರ ಹಾಗೂ ರಾಷ್ಟ್ರಕೂಟ ದೊರೆಗಳ ದಾನಶಾಸನಗಳು ಉಲೇಖನಾರ್ಹವಾದವು. ಇನ್ನೊಂದು ಗಂಗಶಾಸನದಲ್ಲಿ ವಂಶದ ವಿವರಗಳು ಸಮಗ್ರವಾಗಿರುವುದು ಉಪಯುಕ್ತವಾಗಿದೆ" (ಪ್ರಾಕ್ತನ -xxxvi - xxxix).

ಈ ಮೇಲ್ಕಂಡ ವಿವರಗಳನ್ನು ಅವಲೋಕಿಸಿದರೆ ಪುರಾತತ್ವ ಇಲಾಖೆ ವಾರ್ಷಿಕ ವರದಿಗಳು ಕೇವಲ ವರದಿಗಳಾಗಿ ಕಾಣಿಸುವುದಿಲ್ಲ, ಹೊಸ ಹೊಸ ಅಂಶಗಳನ್ನು ಕುರಿತು ಸಂಶೋಧನ ಟಿಪ್ಪಣಿಗಳೆಂದೇ ಕರೆಯಬಹುದು. ನಾಡಿನ ಇತಿಹಾಸ, ಶಾಸನ, ವಾಸ್ತುಶಿಲ್ಪ - ಇವುಗಳ ಬಗೆಗೆ ಜನರಲ್ಲಿದ್ದ ಭಾವನೆಗಳನ್ನೆಲ್ಲ ನರಸಿಂಹಾಚಾರ್ಯರು ತಮ್ಮ ಟಿಪ್ಪಣಿಗಳಲ್ಲಿ ದೊರಕಿಸಿಕೊಟ್ಟಿದ್ದಾರೆ. ಈ ಬಗೆಗೆ ವಿದ್ವಾಂಸರ ಮೆಚ್ಚುಗೆಯೂ ದೊರಕಿದೆ. ಈ ವರದಿಗಳಲ್ಲಿ ಮೌಲಿಕ ಅಂಶಗಳು ಇರುವುದರಿಂದಲೇ ಪಾಶ್ಚಾತ್ಯ ಹಾಗೂ ಭಾರತೀಯ ವಿದ್ವಾಂಸರ ಕುತೂಹಲಕ್ಕೂ ಪ್ರಶಂಸೆಗೂ ಕಾರಣವಾದವು.

## ೫. ಗಣ್ಯರ ಪ್ರಶಂಸೆ

ಆರ್. ನರಸಿಂಹಾಚಾರ್ಯರು ಸಂಸ್ಕೃತ, ತಮಿಳು, ಕನ್ನಡ, ಇತಿಹಾಸ, ಕಲೆ ಮತ್ತಿತರ ಪ್ರಾಚೀನ ವಿದ್ಯೆಗಳಲ್ಲಿ ಪರಿಣಿತರಾದವರು. ಪಾಂಡಿತ್ಯ ಪ್ರತಿಭೆಯನ್ನು ಉಳ್ಳವರು, ಹಾಗಾಗಿ ನಿರಂತರವಾಗಿ ಸಂಶೋಧನೆಯಲ್ಲಿ ತೊಡಗಲು ಸಾಧ್ಯವಾಯಿತು. ಹಾಗೆಯೇ ಅವರ ಮಿತ್ರವರ್ಗ, ನಿಕಟವರ್ತಿಗಳು ಅಸಂಖ್ಯವಾಗಿದ್ದಾರೆ. ಅವರ ಸಮಕಾಲೀನ ಸಂಶೋಧಕರು ಹಿರಿಯ ವಿದ್ವಾಂಸರು ದೇಶವಿದೇಶಗಳಲ್ಲಿ ಪ್ರಖ್ಯಾತರಾಗಿರುವ ಸಂಗತಿ ತಿಳಿದುಬರುತ್ತದೆ. ಎನ್. ಅನಂತರಂಗಾಚಾರ್ ಅವರು ಆರ್. ನರಸಿಂಹಾಚಾರ್ಯರ ಮಿತ್ರವರ್ಗವನ್ನು, ಆ ಮಿತ್ರವರ್ಗ ಆಚಾರ್ಯರನ್ನು ಗುಣಗಾನ ಮಾಡಿರುವ ಸಂಗತಿಯನ್ನು ದೀರ್ಘವಾಗಿ ತಮ್ಮ ಕೃತಿಯಲ್ಲಿ ತಿಳಿಸಿಕೊಟ್ಟಿದ್ದಾರೆ:

“ಭಾರತದಲ್ಲಿಯೇ ಅಲ್ಲದೆ ಯೂರೋಪ್, ಅಮೇರಿಕಾ ದೇಶಗಳ ಅನೇಕ ವಿದ್ವಾಂಸರು ಆರ್ಚಾಯರ ಸಂಬಂಧವನ್ನು ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಪಡೆದಿದ್ದರು. ಪ್ರತ್ಯಕ್ಷ ಸಂಬಂಧವನ್ನು ಪಡೆದವರೆಲ್ಲರನ್ನೂ ಸಹ ಉಲ್ಲೇಖಿಸಲು ಸಾಧ್ಯವಿಲ್ಲ. ಸರ್‌ಜಾನ್ ಮಾರ್ಷಲ್, ಡಾ. ಜೆ.ಎಫ್.ಫೀಟ್ (ಲಂಡನ್), ಡಾ. ವಿನ್ಸೆಂಟ್ ಎ ಸ್ಮಿತ್ (ಆಕ್ಸ್‌ಫರ್ಡ್), ಡಾ. ಜಿ. ಬರ್ಗೆಸ್ (ಎಡಿನ್‌ಬರೊ), ಸರ್ ರಿಚರ್ಡ್ ಟೆಂಪಲ್ ಬಾರ್ಟ್ (ವರ್ಸೆಸ್ಟರ್), ಆರ್. ಸಿವೆಲ್ (ಲಂಡನ್), ಡಾ. ಇ. ಹುಲ್ (ಹಲ್ಲೆ), ಡಾ. ಎ. ಎಫ್.ರೂಡೆಲ್ಬ ಹಾರ್ನಲ್ (ಆಕ್ಸ್‌ಫರ್ಡ್), ಪ್ರೊ.ಇ. ಜಿ. ರಾಪ್ಸನ್ (ಕೇಂಬ್ರಿಜ್), ಪ್ರೊ. ಸೀಲ್ವನಲಿವಿ (ಪ್ಯಾರೀಸ್), ಡಾ. ಎಫ್. ಡಬ್ಲ್ಯು ಥಾಮಸ್ (ಲಂಡನ್), ಎಲ್. ರೈಸ್ (ಲಂಡನ್), ಪ್ರೊ. ಸ್ಟೆನ್‌ಕೊನೊ (ಕ್ರಿಶ್ಚಿಯಾನಿಯ), ಪ್ರೊ. ಹೆಚ್ ಕೆರ್ನೆ (ಉಟೆಕ್), ಡಾ. ಎ. ವೆನಿಸ್ (ಬೆನಾರಸ್), ಪ್ರೊ. ಎ. ಲಕೋಟ್ (ಲಿಯಾನ್), ಡಾ. ಎ. ವಿ. ಮೆಲ್ವಿನಾಲ್ (ಆಕ್ಸ್‌ಫರ್ಡ್), ಡಾ. ಎಲ್. ಡಿ. ಬಾರ್ನೆಟ್ (ಲಂಡನ್), ಇ. ಬಿ. ಹ್ಯಾವೆಲ್ (ಡೆನ್ಮಾರ್ಕ್), ಸರ್. ಜಾರ್ಜ್ ಗ್ರಿಯರ್ಸನ್ (ಸರೆ), ಪ್ರೊ. ಜಿ. ಎಫ್. ಓಗೆಲ್ (ಲೀಡನ್), ಸರ್. ಸಿ. ಹುರ್ಕ್ಯುಲಿಸ್ ರೀಡ್ (ಬ್ರಿಟಿಷ್ ಮ್ಯೂಸಿಯಮ್, ಲಂಡನ್) ಪ್ರೊ. ವಾಲ್ಟರ್ ಇ ಕ್ಲಾರ್ಕ್ (ಷಿಕಾಗೊ-ಅಮೇರಿಕ), ಪ್ರೊ ಇ.ಡಬ್ಲೂ. ಹಾಪ್ಕಿನ್ಸ್ (ಯು.ಎಸ್.ಎ.), ಇ. ಎಚ್. ಆಂಡರಸನ್ (ನ್ಯೂಯಾರ್ಕ್), ಡಾ. ಆನಂದಕುಮಾರಸ್ವಾಮಿ, ಪ್ರೊ. ಎ. ವ್ಯಾನ್ ಬರ್ಚೆಮ್ (ಜಿನೋವ), ಎ.ಬೆರಿಡೇಲ್ ಕೀತ್ (ಎಡಿನ್‌ಬರೊ), ಡಾ. ಜೆ.ಎನ್. ಫರ್ ಕುಹರ್ (ಆಕ್ಸ್‌ರ್ಡ್), ಮ್ಯಾನ್ಸಿಯರ್, ಎ.ಮಾರ್ಟಿನೊ (ಪ್ಯಾರಿಸ್), ಪ್ರೊ. ಎ. ಫೋಚರ್ (ಕಾಶ್ಮೀರ್), ಲಾರ್ಡ್ ಕರ್ಜನ್ (ಲಂಡನ್) ರೆ.ಇ.ಪಿ.ರೈಸ್, ಸರ್ ಹ್ಯೂ ಡ್ಯಾಲಿ, ಮ.ಮ. ಹರಪ್ರಸಾದಶಾಸ್ತ್ರಿ (ಕಲ್ಕತ್ತ), ರೆ.ಎ.ಎಂ. ಟ್ಯಾಬರ್ಡ್ (ಬೆಂಗಳೂರು), ಸರ್.ಪಿ. ಅರುಣಾಚಲಂ (ಕೊಲಂಬೊ), ಟಾ.ಸೆನ್ಕೊ (ಮಾಂಡಲೆ), ಡಾ. ಸಿ. ಜೆವೊಡೊಬ್ರೈಲ್ (ಪಾಂಡಿಚೇರಿ), ಕೆ.ಆರ್ಥರ್ ಪ್ಲೇಟರ್, ಮ. ಮ. ಸತೀಶ ಚಂದ್ರವಿದ್ಯಾಭೂಷಣ, ಎಫ್. ಜೆ. ರಿಚರ್ಡ್ (ಮದರಾಸ್), ಸಿ. ಯಾಸ್ತಾನಿ (ಹೈದರಾಬಾದ್), ಹೇಮಚಂದ್ರ ಸರ್ಕಾರ್ (ಕೃಷ್ಣಘರ್-ಬೆಂಗಾಲ್), ಜೆ.ಎಸ್.ಚಕ್ರವರ್ತಿ, ಹೆಚ್. ನಾರಾಯಣರಾವ್ (ಬೊಂಬಾಯಿ), ಬೆನಗಲ್ ರಾಮರಾವ್ (ಮದರಾಸ್), ರಾವ್ ಬಹದ್ದೂರ್ ಎಸ್. ಮಂಗೇಶರಾವ್ (ಮಂಗಳೂರು), ವಿ.ಎನ್.ನರಸಿಂಹಯ್ಯಂಗಾರ್ (ಮೈಸೂರು), ಸರ್, ಪಿ.ಎನ್.

ಕಷಮೂರ್ತಿ (ಬೆಂಗಳೂರು), ರಾವ್‌ಬಹದ್ದೂರ್ ಹೆಚ್ ಕೃಷ್ಣಶಾಸ್ತ್ರಿ (ಮದರಾಸ್) - ಈ ಕೆಲವರನ್ನು ಹೆಸರಿಸಬಹುದು.

ಒಬ್ಬೊಬ್ಬರೂ ತಮ್ಮ ಕ್ಷೇತ್ರದಲ್ಲಿ ಉದ್ದಾಮ ಪಂಡಿತರು, ಅಧಿಕಾರವಾಣಿಯಿಂದ ಆಡಬಲ್ಲವರು. ಗಣ್ಯಸ್ಥಾನವನ್ನು ಆಕ್ರಮಿಸಿದ್ದವರು. ಅಂಥವರಲ್ಲಿ ಆಚಾರ್ಯರ ಪಾಂಡಿತ್ಯವನ್ನು ಕುರಿತು ಹಾಡಿದವರು ಕೆಲವರು. ಅವರ ಕಾರ್ಯದ ಪ್ರಮಾಣವನು. ನೋಡಿ ಬೆರಗಾದವರು ಇನ್ನೂ ಕೆಲವರು. ತಮ್ಮ ಸಂದೇಹಗಳ ಪರಿಹಾರಕ್ಕೆ ಪ್ರಶ್ನೆ ಮಾಡಿದವರು ಮತ್ತೆ ಕೆಲವರು. ತಮ್ಮ ತಪ್ಪುಗಳನ್ನು ತಿದ್ದಿಕೊಂಡವರು ಹಲವರು. ಆಚಾರ್ಯರ ವರದಿಗಳನ್ನು ಹೊಗಳಿದವರು ಬಹುಮಂದಿ. ಅವರ ವಿಚಾರಶೀಲತೆಯನ್ನು ಬುದ್ಧಿಶಕ್ತಿಯನ್ನು ಕೊಂಡಾಡಿದವರು ಹಲವಾರು ಮಂದಿ. ಶಿಲ್ಪಗಳನ್ನು ಪರಿಚಯ ಮಾಡಿಸುವುದರಲ್ಲಿ ಅವರಿಗಿದ್ದ ನೈಪುಣ್ಯದಿಂದ ಮುಗ್ಧರಾದವರು ಅಸಂಖ್ಯಾತರು. ಅವರು ತಮ್ಮ ಸಂಸ್ಥೆಯ ಸದಸ್ಯರಾಗಿರುವುದು ತಮ್ಮ ಸಂಸ್ಥೆಗೆ ಭೂಷಣವೆಂದು ಭಾವಿಸಿದವರು ಹತ್ತಾರು ಜನ ಸಹಾಯವನ್ನು ಅಪೇಕ್ಷಿಸಿದವರೂ ಕೃತಜ್ಞತೆಯನ್ನು ಸೂಚಿಸಿದವರೂ ಅವರ ಅಭಿವೃದ್ಧಿಯಲ್ಲಿ ಸಂತೋಷಗೊಂಡವರೂ ಅನೇಕ ಮಂದಿ. ಅವರು ಸ್ಥಾನದಿಂದ ನಿವೃತ್ತರಾಗಿ ಹೋದರೆ ಅಥವಾ ವರ್ಗವಾದರೆ ಇಲಾಖೆಯ ಕಾರ್ಯಕ್ಕೆ ವಿಶೇಷವಾಗಿ ನಷ್ಟವಾಗುವುದೆಂದು ಚಿಂತಿಸಿದವರೂ ಇಲ್ಲದಿಲ್ಲ. ಅವರ ಅಭಿಪ್ರಾಯಗಳನ್ನೆಲ್ಲ ಸಂಗ್ರಹಿಸಿ ಪ್ರಕಟಿಸಿದರೆ ಆಚಾರ್ಯರ ವಿಷಯಕವಾದ ಪ್ರತ್ಯೇಕ ಸಂಭಾವನಾ ಗ್ರಂಥವಾಗುವುದರಲ್ಲಿ ಸಂದೇಹವಿಲ್ಲ. ಅವುಗಳಲ್ಲಿ ಕೆಲವನ್ನು ಮುಂದೆ ಕಾಣಬಹುದು:

"ನೀವು ಕೆಲಸವನ್ನು ನಿರ್ವಹಿಸಲು ಬಹು ಸಮರ್ಥರಾಗಿದ್ದೀರಿ (ಸ್ಟೆನ್‌ಕೊನೊ) ನಿಮ್ಮ ಕೆಲಸದಲ್ಲಿ ನೀವು ತೋರಿಸುತ್ತಿರುವ ಶಕ್ತುಯುತ್ಸಾಹಗಳನ್ನು ನಿಮ್ಮ ವರದಿಗಳು ಸ್ಪಷ್ಟವಾಗಿ ಪ್ರಕಾಶಪಡಿಸುತ್ತಿವೆ' (ಎಲ್.ಡಿ.ಬಾರ್ನೆಟ್), "ನಿಮ್ಮಂತಹ ಪಂಡಿತರಿಂದ ನನ್ನ ದೋಷಗಳನ್ನು, ತಿದ್ದಿಕೊಳ್ಳುವುದು ಬಹುಸಂತೋಷದ ಸಂಗತಿ' (ಎಲ್.ಡಿ.ಬಾರ್ನಟ್)', 'ತಮ್ಮ ಸಹಾಯವಿಲ್ಲದಿದ್ದರೆ ನನ್ನ ತಮಿಳು ಶಾಸನಗಳಲ್ಲಿ ಇನ್ನೂ ಹೆಚ್ಚಿನ ತಪ್ಪುಗಳಿರುತ್ತಿದ್ದವು' (ಎಲ್. ರೈಸ್), ನೀವು ಆಲ್ಲೂರ್ ಶಾಸನದಲ್ಲಿ ಬರುವ 'ಬಿಸುಗೆಯ ಕಳನ್' ಎಂಬ ಶಬ್ದಗಳಿಗೆ ಕೊಟ್ಟಿರುವ ಅರ್ಥವನ್ನು ನೋಡಿ ಬಹಳ ಸಂತೋಷವಾಯಿತು. ನಿಮ್ಮಿಂದ ಕಂಡು ಹಿಡಿಯಲ್ಪಟ್ಟ ಶಾಸನಗಳ ಸಂಖ್ಯೆಯನ್ನು ನೋಡಿದಾಗ ಆಶ್ಚರ್ಯವಾಗುತ್ತದೆ. ನೀವು ಚಿತ್ರದುರ್ಗದಲ್ಲಿ ರೋಮನ್ ನಾಣ್ಯಗಳನ್ನು ಪತ್ತೆಹಿಡಿದು ಭಾಗ್ಯಶಾಲಿಗಳಾಗಿದ್ದೀರಿ. ಹಾಗೆಯೇ ಇಷ್ಟು ಶಾಸನಗಳನ್ನು ಕಂಡು ಹಿಡಿಯಲು ಅದೃಷ್ಟಶಾಲಿಗಳೂ ಆಗಿದ್ದೀರಿ? (ಎಲ್.ರೈಸ್), 'ನೀವು ಕನ್ನಡ ಸಾಹಿತ್ಯದ ವಿಷಯವಾಗಿ ಕಳುಹಿಸಿರುವ ಟಿಪ್ಪಣಿಗಳಿಗಾಗಿ ನಾನು ನಿಮ್ಮನ್ನು ವಂದಿಸುತ್ತೇನೆ' (ಎಲ್.ರೈಸ್), ನೀವು ಜೋಳದ ದೇಶ' ಎಂಬ ವಿಷಯದಲ್ಲಿ ಕೊಟ್ಟಿರುವ ತಿದ್ದುಪಡಿಯನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಈ ವಿಷಯದಲ್ಲಿ ನಾನು ನನ್ನನ್ನು ಆದಷ್ಟು ಜಾಗ್ರತೆ ತಿದ್ದಿಕೊಳ್ಳುತ್ತೇನೆ. ನೀವು 'ಸಪಾದಲಕ್ಷದೇಶ'ದ ವಿಷಯವಾಗಿ ಕೊಟ್ಟಿರುವ ಸೂಚನೆ ಬಹು ಆಕರ್ಷಕವಾಗಿದೆ. ನೀವು ಅರಿಕೇಸರಿಯ 'ಸಪಾದಲಕ್ಷ'ವನ್ನು ಯಾವ ದೇಶದೊಡನೆ, ಸಮನ್ವಯ ಮಾಡುತ್ತೀರ ಎಂಬುದನ್ನು ದಯವಿಟ್ಟು ತಿಳಿಸುತ್ತೀರಾ?."

(ಡಿ.ಆರ್.ಭಂಡಾರಕರ್). 'ನಿಮ್ಮ ವರದಿಗಳೆಲ್ಲ ಅತ್ಯಂತ ಆಕರ್ಷಕವಾಗಿರುವವಲ್ಲದೆ, ಬಹು ಸುಂದರವಾಗಿ ರಚಿತವಾಗಿವೆ' (ಪ್ರೊ. ಸಿಲ್ವನ್ ರೆವಿ), 'ನಿಮ್ಮ ವರದಿಗಳು ಪ್ರಾಚ್ಯವಿದ್ಯೆ, ಶಾಸನವಿದ್ಯೆ ಮತ್ತು ನಾಣ್ಯವಿದ್ಯೆಗಳಿಗೆ ಸಂಬಂಧಪಟ್ಟ ಅತ್ಯಮೂಲ್ಯವಾದ ವಿಷಯ ರಾಶಿಯಿಂದ ತುಂಬಿವೆ. ನೀವು ಕೊಟ್ಟಿರುವ, ಅಸಂಖ್ಯಾತವಾದ ಪಟಗಳು ಬಹು ಉಪಯುಕ್ತವಾಗಿವೆ' (ಡಾ. ಇ ಹುಲ್ಟ್), ನಿಮ್ಮ ವರದಿಗಳು ಎಲ್ಲ ಶಾಖೆಗಳಿಗೂ ಸಂಬಂಧಪಟ್ಟಂತೆ ವಿದ್ವತ್ಪೂರ್ಣವೂ ಆಕರ್ಷಕವೂ ಆದ ವಿಷಯಗಳಿಂದ ತುಂಬಿವೆ. ಛಾಯಾ ಚಿತ್ರಗಳು ಅತ್ಯುತ್ಕೃಷ್ಟವಾಗಿವೆ' (ಎಫ್.ಡಬ್ಲೂ.ಥಾಮಸ್). 'ನಿಮ್ಮ ವರದಿಗಳು ಭವ್ಯವಾಗಿ ಸಂಪಾದಿತವಾಗಿವೆ ಮತ್ತು ಸುಂದರವಾಗಿ ಮುದ್ರಿತವಾಗಿವೆ' (ಪ್ರೊ. ಇ. ವಾಲ್ಟರ್ ಕ್ಲಾರ್ಕ್). 'ನಿಮ್ಮ ವರದಿಗಳು ದಕ್ಷಿಣ ದೇಶದ ಚರಿತ್ರೆಗೆ ಊಹಿಸುವುದಕ್ಕೂ ಆಗದಷ್ಟು ಅಗಾಧ ರಾಶಿಯ ಸಾಮಗ್ರಿಯನ್ನು ಒದಗಿಸಿಬಿಡುತ್ತವೆ. ಅವು ಇಲಾಖೆಗೆ ಕೀರ್ತಿ ತರುವ ವಿದ್ವತ್ಪೂರ್ಣವಾದ ರೀತಿಯನ್ನೂ ಅಪಾರವಾದ ದುಡಿಮೆಯನ್ನೂ ಹೊರಗೆಡಹುತ್ತಿವೆ. ಭಾರತದಿಂದ ಪ್ರಕಾಶವಾಗುತ್ತಿರುವ ಸಂಪೂರ್ಣವೂ ಸಾರಭೂತವೂ ಆದ ಅದ್ಭುತವಾದ ದುಡಿಮೆಯ ಫಲವೆಂಬುದನ್ನು ಪ್ರದರ್ಶನ ಮಾಡುತ್ತಿವೆ. ಅಲ್ಲದೆ ಇತರೆಡೆಗಳಲ್ಲಿ ವಿಶೇಷ ಜಾಗವನ್ನೂ, ಧನವನ್ನೂ ದಂಡಮಾಡುವ ಗ್ರಂಥಪೂರ್ಣ ಕಾರ್ಯದಿಂದ ದೂರವಾವೆ' (ವಿ.ಎ.ಸ್ಮಿತ್), 'ಭಾರತೀಯ ವಿದ್ವಾಂಸರು ಅವಶ್ಯವಾಗಿ ಅತ್ಯಂತ ಆಸಕ್ತಿವಹಿಸಲೇಬೇಕಾಗಿರುವ ಎಲ್ಲ ವಿಷಯಗಳ ಮೇಲೆ ನಿಮ್ಮ ವರದಿಗಳು ಶ್ರೀಮಂತವೂ ವೈವಿಧ್ಯಪೂರ್ಣವೂ, ಅಮೋಘವೂ ಆದ ವಿಷಯಗಳನ್ನು ಹೊಂದಿವೆ' (ಮ.ಮ.ಹರಿಪ್ರಸಾದ್‌ಶಾಸ್ತ್ರಿ, ನಾನು ನಿಮ್ಮ ವರದಿಯನ್ನು ಆದಿಯಿಂದ ಅಂತ್ಯದವರೆಗೆ ಓದಿದ್ದೇನೆ. ಅದರ ಆಕರ್ಷತೆ ಕೊನೆಯವರೆಗೆ ಒಂದೇ ಸಮನಾಗಿದೆ. ೧೯೧೯ನೆಯ ವರ್ಷದ ಕೊನೆಯ ಪುಟವನ್ನು ಓದಿದಾಗ ನೀವು ಕಳೆದ ೧೨ ವರ್ಷಗಳಿಂದ ವರ್ಷ ವರ್ಷವೂ ಅಖಿಲ ಪ್ರಪಂಚದ ಪುರಾತತ್ತ್ವ ಶಾಖೆಯ ವಿದ್ವಾಂಸರ ಪ್ರಯೋಜನಕ್ಕಾಗಿ ನಿಮ್ಮ ಆ ದೊಡ್ಡ ಶಾಸ್ತ್ರದ ಎಲ್ಲ ಶಾಖೆಗಳಿಗೂ ಸಂಬಂಧಪಟ್ಟಂತೆ ಎಂತಹ ಸಾಧನ ರಾಶಿಯನ್ನು ಶೇಖರಿಸುತ್ತಿದ್ದೀರೆಂಬುದು ಮನವರಿಕೆಯಾಯಿತು. ನಿಮ್ಮನ್ನು ಸ್ತೋತ್ರ ಮಾಡಲು ಇಚ್ಛಿಸುವುದಿಲ್ಲ. ಆದರೂ ನಿಮ್ಮಲ್ಲಿಯೇ ನೀವು ಒಂದು ಸಂಸ್ಥೆಯಾಗಿಬಿಟ್ಟಿರುವುದಕ್ಕಾಗಿ ನಿಮ್ಮನ್ನು ಅಭಿನಂದಿಸಲೇಬೇಕು' (ರೆ. ಎಫ್. ಡಬ್ಲ್ಯೂ. ಥಾಮಸ್), 'ನೀವು ನಮ್ಮ ಸಂಸ್ಥೆಯ ಗೌರವ ಸದಸ್ಯರಾಗಿರಲು ಒಪ್ಪಿದರೆ ನಾವು ವಿಶೇಷ ಬಹುಮಾನಿತರಾಗುತ್ತೇವೆ' (ಎ.ಎ.ಬಾಸನ್, ಉಪಕಾರ್ಯದರ್ಶಿ, ದೆ, ಎಲ್. ಓರಿಯಂಟ್, ಪ್ಯಾರಿಸ್), ನನ್ನ ಕನ್ನಡ ಸಾಹಿತ್ಯ ಚರಿತ್ರೆಯ ಎರಡನೆಯ ಆವೃತ್ತಿಯನ್ನು ನಿಮಗೆ ಅಂಕಿತ ಮಾಡಲು, ಅಪ್ಪಣೆಯನ್ನು ಕೊಟ್ಟರೆ ನಾನು ನಿಮಗೆ ವಿಶೇಷ ಋಣಿಯಾಗಿರುತ್ತೇನೆ' (ಇ. ಪಿ. ರೈಸ್). 'ನಿಮ್ಮ ವ್ಯಕ್ತಿ ಪರಿಚಯ ಮಾಡಿಕೊಳ್ಳುವುದು ವಿಶೇಷ ಆನಂದಕರ' (ಎಫ್. ಡಬ್ಲ್ಯೂ. ಥಾಮಸ್), 'ಖ್ಯಾತಿ ಲಾಭಗಳು ವಿಶೇಷ ಅರ್ಹರಾದವರಿಗೆ ಸಲ್ಲುವುದು ಬಹು ಅಪೂರ್ವ. ನಿಮ್ಮ ಕಾರ್ಯವು ಶ್ರಮಸಾಧ್ಯವೂ ಶಾಂತವೂ ಆದ ದುಡಿಮೆಯ ಫಲ. ಆದುದರಿಂದ ನಮ್ಮ ಶ್ರೀಮನ್ಮಹಾರಾಜರವರು ತಮಗೆ ದಯಪಾಲಿಸಿರುವ ಪ್ರಶಸ್ತಿಯನ್ನು ಸಾರ್ಥಕಗೊಳಿಸಿದೆ. ಮದರಾಸ್ ಸರ್ಕಾರದಲಿ. ಕೆಲಸ ಸಿಕ್ಕಿರುವುದು ನಿಜವೆ? ಮೈಸೂರು ತಮ್ಮಂತಹವರನ್ನು ಕಳೆದುಕೊಳ್ಳುವುದೆ? (ವಿ.ಎನ್.ನರಸಿಂಹಯ್ಯಂಗಾರ್), ಕೇಶವ ದೇವಸ್ಥಾನದ ವಿಷಯಕವಾದ ತಮ್ಮ ಪ್ರಬಂಧ

ಸುಂದರವಾಗಿದೆ. ಮುದ್ರಣ, ಕಾಗದ, ಪಟಗಳು ಉತ್ತಮ ಗುಣಗಳಿಂದ ಕೂಡಿವೆ. ಕಟ್ಟಡಗಳ ವಿಷಯವಾಗಿಯೂ ಶಿಲ್ಪಗಳ ವಿಷಯವಾಗಿಯೂ ಕೊಟ್ಟಿರುವ ವಿವರಣೆಗಳು ಯಥೋಚಿತವಾಗಿವೆ. ನಾನು ಅದರಲ್ಲಿ ಒಂದು ದೋಷವನ್ನೂ ಕಂಡಿಲ್ಲ' (ವಿ.ಎ.ಸ್ಮಿತ್). "ಸೋಮನಾಥಪುರದ ಕೇಶವ ದೇವಾಲಯದ ಪ್ರಬಂಧವೂ ಅತ್ಯದ್ಭುತವಾಗಿದೆ. ಶಿಲ್ಪಗಳೆಲ್ಲ ಅತ್ಯಂತ ಸುಂದರವಾಗಿವೆ. ಛಾಯಾಚಿತ್ರಗಳೆಲ್ಲ ಗಂಧರ್ವ ಲೋಕದಂತಿವೆ' (ಎಫ್.ಜಿ. ರಿಚರ್ಡ್ಸ್) ದೊಡ್ಡ ಗದ್ದವಳ್ಳಿಯ ಮಹಾಲಕ್ಷ್ಮಿದೇವಿಯ ದೇವಾಲಯದ ವಿಷಯಕವಾದ ಕೈಪಿಡಿಯು ಎಲ್ಲ ದೃಷ್ಟಿಯಿಂದಲೂ ಬಹು ಸಮರ್ಪಕವಾಗಿದೆ. ವಿವರಣೆಗಳೆಲ್ಲ ಸರ್ವೋತ್ಕೃಷ್ಟವಾಗಿದೆ (ಎಲ್.ರೈಸ್).

'ಬರ್ಮಾ ಕ್ಷೇತ್ರದಲ್ಲಿಯೂ ಇಂತಹ ಪ್ರಬಂಧಗಳನ್ನು ಪ್ರಕಟಿಸಬೇಕೆಂಬ ಯೋಚನೆಯಿದೆ. ಹಾಗೆ ಮಾಡುವಾಗ ನಿಮ್ಮ ವಿದ್ವತ್ಪೂರ್ಣವಾದ ಈ ಪ್ರಬಂಧಗಳು ನಮ್ಮ ಸಂಶೋಧನೆಗಳ ವಿಷಯದಲ್ಲಿ ಅಮೋಘವಾದ ಬೆಳಕನ್ನು ಚೆಲ್ಲುವುದರಲ್ಲಿ ಸಂದೇಹವಿಲ್ಲ' (ಟಾ. ಸೇನ್ ಕೊ). ಮೈಸೂರಿನ ಅಂಧಕಾರ ಯುಗದ ಇತಿಹಾಸವನ್ನು ಎಂದಾದರೂ ಬರೆಯಬೇಕಾದರೆ ಗಂಗರ ಚರಿತ್ರೆಯು ಪ್ರಧಾನವಾದ ಸ್ಥಾನವನ್ನಾಕ್ರಮಿಸಬೇಕಾಗುತ್ತದೆ. ಆಗ ಮೈಸೂರು ದೇಶದ ಅನೇಕ ಸ್ಥಳಗಳಿಗೆ ಸಂಬಂಧಪಟ್ಟ ಕೃತಕವಲ್ಲದ ಸತ್ಯಪೂರ್ಣವಾದ ಗಂಗ ಶಾಸನಗಳನ್ನು ಕಂಡುಹಿಡಿದ ಕೀರ್ತಿ ತಮಗೇ ಸಲ್ಲತಕ್ಕದ್ದಾಗುತ್ತದೆ. ಡಾ. ಫ್ಲೀಟ್ ಈಗ ಜೀವಂತವಾಗಿದ್ದರೆ ಗಂಗ ಶಾಸನಗಳ ಕೃತಕತೆಯ ವಿಷಯದಲ್ಲಿ ಆತನಿಗಿದ್ದ ಅಭಿಪ್ರಾಯವನ್ನು ಆತನು ಬದಲಾಯಿಸಿಕೊಳ್ಳುತ್ತಿದ್ದನೆಂಬ ತಮ್ಮ ಅಭಿಪ್ರಾಯವನ್ನು ನಾನು ಪೂರ್ಣವಾಗಿ ಒಪ್ಪುತ್ತೇನೆ. ಆತನ ವಾದವು ಬಹುಕಾಲ ಪ್ರಚಲಿತವಾಗಿದ್ದು ಮೈಸೂರಿನ ಇತಿಹಾಸ ವಿಷಯಕವಾದ ಸಂಶೋಧಕರನ್ನು ತಪ್ಪುದಾರಿಯಲ್ಲಿರಿಸಿತ್ತು" (ರಾ.ನರಸಿಂಹಾಚಾರ್ಯ ಪುಟ : ೧೬-೨೧)

ಡಿ.ವಿ.ಜಿ., ತೀ.ತಾ. ಶರ್ಮ, ಆರ್. ರಾಮರಾವ್., ಎ. ಆರ್. ಕೃಷ್ಣಶಾಸ್ತ್ರೀ, ಡಿ.ವೆಂಕಟರಾಮಯ್ಯ ಮುಂತಾದ ಹಲವಾರು ಗಣ್ಯರು, ವಿದ್ವಾಂಸರು ನರಸಿಂಹಾಚಾರ್ಯರ ವ್ಯಕ್ತಿತ್ವವನ್ನು, ಪಾಂಡಿತ್ಯವನ್ನು, ನಿರಂತರವಾದ ಸಾಹಿತ್ಯಸೇವೆಯನ್ನು ಕೊಂಡಾಡಿದ್ದಾರೆ. ೧೯೩೬ ಡಿಸೆಂಬರ್ ೬ರಂದು ನರಸಿಂಹಾಚಾರ್ಯರು ನಿಧನರಾದರು. ಆ ಸಂದರ್ಭದಲ್ಲಿ ಕನ್ನಡ ನಾಡಿನ ಸಂಘಸಂಸ್ಥೆಗಳು ಮತ್ತು ಹಿರಿಯ ವಿದ್ವಾಂಸರು ಅರ್ಪಿಸಿದ ಶ್ರದ್ಧಾಂಜಲಿಯಲ್ಲಿ ಅವರ ವಿದ್ವತ್ತನ್ನು ಸಾಹಿತ್ಯ ಸಾಧನೆಯನ್ನು ಕೊಂಡಾಡಿದರು:

"ನರಸಿಂಹಾಚಾರ್ಯರಂಥ ವಿದ್ವಾಂಸರು ದೊರೆಯುವುದು ದುರ್ಲಭ. ವಿದ್ವತ್ತು, ಅನೇಕ ಭಾಷೆಗಳಲ್ಲಿ ಇದ್ದ ಸಲಿಗೆ, ವಿಷಯವಿಮರ್ಶೆ, ನಿಷ್ಕೃಷ್ಟವಾದ ಪರಿಜ್ಞಾನ, ತಿಳಿಯದಿದ್ದಾಗ ತಿಳಿದಿಲ್ಲವೆಂದು ಒಪ್ಪಿಕೊಳ್ಳುವ ಪ್ರಾಮಾಣಿಕತೆ, ತಿಳಿದ ಮೇಲೆ ಅವರಿಗಾಗುತ್ತಿದ್ದ ಸಂತೋಷ, ತಿಳಿಸಿದವರನ್ನ ಮೆಚ್ಚಿಹೊಗಳುತ್ತಿದ್ದ ಬಗೆ-ಇವೆಲ್ಲ ಶ್ರೀಮಾನ್ ಆಚಾರ್ಯರ ಗುಣಗಳಲ್ಲಿ ಮುಖ್ಯವಾದವು. ಅವರನ್ನು ಒಂದು ಸಲ ನೋಡಿ ಮಾತಾಡಿದವರು ಅವರ ಸೌಜನ್ಯವನ್ನು ಎಂದೂ ಮರೆಯಲಾರರು. ಸುಮಾರು ಅಯ್ವತ್ತು ವರ್ಷಗಳ ಕಾಲ ಅವರು ಕನ್ನಡ ಭಾಷಾ ಸಾಹಿತ್ಯಗಳಿಗೆ ದುಡಿದಿದ್ದಾರೆ. ಕನ್ನಡಕ್ಕೆ ಬಂದಿರುವ ಪ್ರಾಶಸ್ತ್ಯ ಗೌರವಗಳಿಗೆ ಬಹುಮಟ್ಟಿಗೆ ಕಾರಣರಾದವರಲ್ಲಿ

ಶ್ರೀಮಾನ್ ಆಚಾರ್ಯರು ಅಗ್ರಗಣ್ಯರು. ಕನ್ನಡದಲ್ಲಿಯೂ ವಿದ್ವತ್ತಿಗೆ ಅವಕಾಶವಿದೆ ಎಂಬುದನ್ನು ತೋರಿಸಿಕೊಟ್ಟವರು ಅವರು. ಕನ್ನಡವನ್ನು ಕಣ್ಣೆತ್ತಿಕೂಡ ನೋಡಲು ಹಿಂಜರಿಯುತ್ತಿದ್ದ ಕಾಲದಲ್ಲಿ ಬೇರೆ ಮುಖದಲ್ಲಿ ಹರಿದು ಸುಲಭವಾಗಿ ಖ್ಯಾತಿಯನ್ನು ಪಡೆಯುವ ಸತ್ವವಿದ್ದ ಅವರ ಪಾಂಡಿತ್ಯವು ಕನ್ನಡಕ್ಕೆ ಮೀಸಲಾಗಿ ತಿರುಗಿ ಆ ಭಾಷಾ ಸಾಹಿತ್ಯಗಳ ಹಿಂದಿನ ಚರಿತ್ರೆಯನ್ನು ಕೂಲಂಕಷವಾಗಿ ವಿಮರ್ಶೆಮಾಡಿ ಮುಂದಿನವರ ಕಟ್ಟಡಕ್ಕೆ ತಳಹದಿ ಆದದ್ದು ಕನ್ನಡಿಗರ ಪುಣ್ಯ. ಅದಕ್ಕಾಗಿ ಕನ್ನಡನಾಡೇ ಚಿರಕಾಲ ಅವರಿಗೆ ಋಣಿಯಾಗಿರಬೇಕಾಗಿದೆ".

"ಆಚಾರ್ಯರು ಸ್ವರ್ಗಸ್ಥರಾದ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರೂ ಸಂಪಾದಕ ಮಂಡಲಿಯ ಅಧ್ಯಕ್ಷರೂ ಆದ ಶ್ರೀಮಾನ್ ಡಿ. ವಿ ಗುಂಡಪ್ಪನವರು ಒಂದು ಸ್ಥಳೀಯ ಪತ್ರಿಕೆಗೆ ಈ ರೀತಿಯ 'ಬಾಷ್ಪಾಂಜಲಿ'ಯನ್ನು ಕಳುಹಿಸಿದರು: "ನರಸಿಂಹಾಚಾರ್ಯರ ವಿದ್ವತ್ತಿನ ವಿಷಯದಲ್ಲಿ ನಾನು ಪ್ರಶಂಸೆ ಮಾಡಹೊರಡುವುದು ಅಧಿಕಪ್ರಸಂಗವಾದೀತು. ಅವರು ಕನ್ನಡ, ತಮಿಳು, ಸಂಸ್ಕೃತ - ಈ ಮೂರು ಭಾಷೆಗಳಲ್ಲಿಯೂ ಸಂಪೂರ್ಣ ಪಂಡಿತರಾಗಿದ್ದರು. ಇದರ ಜೊತೆಗೆ ಪಾಶ್ಚಾತ್ಯ ಸಾಹಿತ್ಯದಿಂದ ಸಂಪಾದಿಸಲಾಗುವ ವಿಮರ್ಶನ ಕ್ರಮವನ್ನೂ ಉದಾರ ಚಿತ್ತತೆಯನ್ನೂ ಅವರು ಸಂಪೂರ್ಣವಾಗಿ ಪಡೆದಿದ್ದರು. ಅವರ ಪ್ರಜ್ಞೆ ಸರ್ವತೋಮುಖವಾದುದು. ಅಗಾಧವಾದ ಸಾಹಿತ್ಯ ಜ್ಞಾನದ ಜೊತೆಗೆ ಅವರಿಗೆ ನೈಜವಾದ ಧರ್ಮಶ್ರದ್ಧೆಯೂ ಸೇರಿತ್ತು. ಅವರು ವಂಶಾನುಗತವಾಗಿ ಬಂದ ಶ್ರೀವೈಷ್ಣವ ಮತದಲ್ಲಿ ಪರಮ ಶ್ರದ್ಧಾಳುಗಳಾಗಿದ್ದಾಗ್ಯೂ ಅನ್ಯಮತಗಳ ವಿಷಯದಲ್ಲಿ ಪರಿಪೂರ್ಣವಾದ ಸಹಾನುಭೂತಿಯನ್ನು ತಾಳಿದ್ದರು. ನಮ್ಮ ವೀರಶೈವ ವಚನಸಾಹಿತ್ಯದ ದಿವ್ಯರತ್ನಗಳನ್ನು ಬಹು ವರ್ಷಗಳ ಹಿಂದೆ ಮೊದಲು ಪ್ರಕಾಶಕ್ಕೆ ತಂದವರು ನರಸಿಂಹಾಚಾರ್ಯರು. ಅದರಿಂದಲೇ ಅವರ ಮನೋವೈಶಾಲ್ಯವೆಂಥದ್ದೆಂಬುದು ಹೊರಪಡುತ್ತದೆ.

"ಪ್ರಾಚೀನ ಚರಿತ್ರಶೋಧನೆಯಲ್ಲಿ ನರಸಿಂಹಾಚಾರ್ಯರು ತೋರಿರುವ ದಾರಿ ಎಲ್ಲ ಕಾಲಕ್ಕೂ ಮೇಲ್ಪಂಕ್ತಿಯಾಗಿರುತ್ತದೆ. ಎಲ್ಲ ವಿಚಾರಗಳನ್ನೂ ಆಮೂಲಾಗ್ರವಾಗಿ ಶೋಧನ ಬುದ್ಧಿಯಿಂದ ನೋಡುವುದೂ ಪಕ್ಷ ಪ್ರತಿಪಕ್ಷಗಳನ್ನು ಜಾಗರೂಕತೆಯಿಂದ ತೂಕಮಾಡುವುದೂ ತಮ್ಮ ಪ್ರತಿಕಕ್ಷಿಗಳನ್ನು ಮರ್ಯಾದೆಯಿಂದ ಕಾಣುವುದೂ, ಸ್ವಸಿದ್ಧಾಂತವನ್ನು ಹೇಳುವುದರಲ್ಲಿ ಹಠವನ್ನು ತೋರದೆ ಪುನರಾಲೋಚನೆಯನ್ನು ಬೇಡವೆನ್ನದೆ ಇರುವ ಊಹನ ನ್ಯಾಯವನ್ನು ಅನುಸರಿಸುವುದೂ-ಇವು ಆಚಾರ್ಯರ ಸತ್ಯಾನ್ವೇಷಣ ಕ್ರಮದ ಲಕ್ಷಣಗಳು. ಅವರು ಹೇಳಿರುವುದನ್ನೆಲ್ಲಾ ಒಂದು ಪರೀಕ್ಷಾನ್ವಯದಿಂದ ಒಂದು ಸಮರಸ ದೃಷ್ಟಿಯಿಂದ ಯಾವ ಉದ್ವೇಗ ಆವೇಶಗಳೂ ಇಲ್ಲದೆ ಹೇಳಿರುತ್ತಾರೆ.

"ಅವರ ಪಾಂಡಿತ್ಯವು ಹೇಗೆ ಅಗಾಧವೂ ವಿಸ್ತಾರವೂ ಆಗಿತ್ತೋ ಹಾಗೆಯೇ ಅವರ ಸೌಜನ್ಯವೂ ನಾನಾ ವಿಧಗಳಲ್ಲಿ ಲೋಕರಂಜಕವಾಗಿತ್ತು. ಎಲ್ಲರಲ್ಲಿಯೂ ಮರ್ಯಾದೆ, ಎಲ್ಲ ಸಂದರ್ಭಗಳಲ್ಲಿಯೂ ತಾಳ್ಮೆ, ಎಲ್ಲ ಮಾನವ ವಿಚಾರಗಳಲ್ಲಿಯೂ ಕುತೂಹಲ ಮತ್ತು ಸಹಾನುಭೂತಿ, ರಸಿಕತೆ, ಲಘು ಹಾಸ್ಯಪರತೆ, ಸಂಗೀತ, ಪ್ರೀತಿ-ಇವೇ ಮೊದಲಾದ ಅವರ ಸದ್ಗುಣಗಳು ಆದರ್ಶಪ್ರಾಯವಾಗಿದ್ದುವು.

"ಸಾಹಿತ್ಯ ಪರಿಷತ್ತಿಗೂ ಕನ್ನಡ ಸಮಾರಂಭಕ್ಕೂ ಅವರು ಒಂದು ಆಧಾರ ಸ್ತಂಭದಂತಿದ್ದರು. ನಮ್ಮ ವ್ಯಾಕರಣದ ವಿಷಯದಲ್ಲಿಯೇ ಆಗಲಿ, ಭಾಷಾ ಪ್ರಯೋಗಗಳ ವಿಷಯದಲ್ಲಿಯೇ ಆಗಲಿ, ಸಾಹಿತ್ಯ ಚರಿತ್ರೆಯ ವಿಷಯದಲ್ಲಿಯೇ ಆಗಲಿ ಸಂಸ್ಕೃತಿ ವಿವರಗಳ ವಿಷಯದಲ್ಲಿಯೇ ಆಗಲಿ ನಮಗೆ ಯಾವ ಸಂಶಯ ತರ್ಕಗಳು ಒದಗಿದರೂ ಅವರು ಅದನ್ನು ಪರಿಹರಿಸಬಲ್ಲವರಾಗಿದ್ದರು. ಸಾಹಿತ್ಯ ರಚನೆಯಲ್ಲಿ ಅವರು ಬಹುಮಟ್ಟಿಗೆ ಪುರಾತನ ಸಂಪ್ರದಾಯವನ್ನು ಅನುಸರಿಸಿದವರಾಗಿದ್ದರೂ ನವೀನ ಮಾರ್ಗದವರ ವಿಷಯದಲ್ಲಿ ಅವರು ಮೈತ್ರಿಯನ್ನೂ ಸಹಾನುಭೂತಿಯನ್ನೂ ತೋರಿಸುತ್ತಿದ್ದರು. ಅವರು ನಮ್ಮ ಕಡೆ ಇರುವರೆಂಬ ಒಂದು ಸಂಗತಿಯೇ ನಮಗೆ ಎಷ್ಟೋ ದೊಡ್ಡ ಬೆಂಬಲವಾಗಿ ಧೈರ್ಯಕಾರಕವಾಗಿತ್ತು. .....ವಿಧಿ ಕನ್ನಡನಾಡಿಗೆ ಒದಗಿಸಿರುವ ಅಪಾರವಾದ ಕಷ್ಟಗಳ ಜೊತೆಗೆ ಈ ಅಪರಿಮೇಯವಾದ ನಷ್ಟವನ್ನೂ ಈಗ ಹೊಸದಾಗಿ ಸೇರಿಸಿದೆ. ಕನ್ನಡವು ಅಪ್ರಸಿದ್ಧವಾಗಿ ಪ್ರೋತ್ಸಾಹವಿಲ್ಲದ್ದಾಗಿ ಅವಿತುಕೊಂಡಿದ್ದ ಕಾಲದಲ್ಲಿ ಮುಂದೆಬಂದು ಅದನ್ನು ಕೈ ಹಿಡಿದು ಮೇಲಕ್ಕೆ ಎತ್ತಿದ ನಾಲ್ವರೈವರಲ್ಲಿ ನರಸಿಂಹಾಚಾರ್ಯರೂ ಒಬ್ಬರು. ಅವರು ಕನ್ನಡಕ್ಕಾಗಿ ಪಟ್ಟ ಶ್ರಮವೂ ಕನ್ನಡದಲ್ಲಿ ಅವರು ಇಟ್ಟಿದ್ದ ಶ್ರದ್ಧೆ ನಂಬಿಕೆಗಳೂ ನಮ್ಮಗಳ ಮನಸ್ಸಿನಲ್ಲಿ ಉಳಿದು ನಮ್ಮ ಜೀವನದಲ್ಲಿ ಹೊರಪಡುವುದಾದರೆ ನಾವು ಆ ಮಹನೀಯರನ್ನು ನಮ್ಮವರೆಂದು ಹೆಮ್ಮೆ ಪಟ್ಟುಕೊಳ್ಳುವುದು ಸಾರ್ಥಕವಾಗುತ್ತದೆ. ಆದರೂ ಸಲಸಲವೂ ಕನ್ನಡದ ಅವಸ್ಥೆಯನ್ನು ಕುರಿತು ನನ್ನೊಡನೆ ಟೀಕಿಸುತ್ತಿದ್ದರು. ನಮ್ಮ ವಿಶ್ವವಿದ್ಯಾನಿಲಯದಲ್ಲಿ ಸಹ ಅದರ ಹೊಣೆ ಇನ್ನೂ ಹೀನವಾಗಿರುವುದಲ್ಲಾ ಎಂದು ಅವರು ಪದೇ ಪದೇ ಮರುಗಿ ನಮ್ಮ ಈ ದುಃಖವನ್ನು ನಮ್ಮ ಮಹಾಪ್ರಭುಗಳಲ್ಲಿ ಬಿನ್ನಯಿಸುವ ಏರ್ಪಾಟು ಮಾಡಬೇಕೆಂದು ಸೂಚನೆಯನ್ನು ತಿಳಿಸಿದ್ದರು. ಇಂತಹ ದೇಶ ಭಾಷಾಭಿಮಾನಿಗಳಾದ ಮಹಾನುಭಾವರ ಸತತ ಸ್ಮರಣೆ ಈ ಕಾಲದಲ್ಲಿ ನಮಗೆ ಅತ್ಯಂತ ಅವಶ್ಯವಾದ ತಾರಕಮಂತ್ರದಂತೆ ಇರುತ್ತದೆ. ಅವರು ಅನ್ವರ್ಥಬಿರುದರಾದ ಮಹಾಮಹೋಪಾಧ್ಯಾಯರು. ಅವರ ದಿವ್ಯ ತೇಜಸ್ಸು ಸರ್ವದಾ ಕನ್ನಡಿಗರ ಮನೋನಯನಗಳಿಗೆ ಗೋಚರವಾಗಿ ಅವರು ನಡೆಯುವ ಹಾದಿಯನ್ನು ಬೆಳಗುತ್ತಿರಲಿ".

## ೬. ರಾ. ನ. ಕುರಿತಂತೆ

ಎನ್. ಅನಂತರಂಗಾಚಾರ್ ಅವರು ಐ.ಬಿ.ಎಚ್. ಪ್ರಕಾಶನ ಗಾಂಧಿನಗರ ಬೆಂಗಳೂರು-೯ ಇದರ ಮೂಲಕ ೧೯೭೫ರಲ್ಲಿ 'ಆರ್.ನರಸಿಂಹಾಚಾರ್ಯರು' ಎಂಬ ಹೆಸರಿನ ಕೃತಿಯನ್ನು ೧೯೭೧ರಲ್ಲಿ 'ರಾ. ನರಸಿಂಹಾಚಾರ್ಯ' ಎಂಬ ಹೆಸರಿನ ಕೃತಿಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ಹೊರತಂದರು. ಪರಿಷತ್ತಿನ ಮೂಲಕ ಹೊರ ಬಂದ ೭೫ ಪುಟಗಳ ಈ ಕೃತಿಯಲ್ಲಿ ನರಸಿಂಹಾಚಾರ್ಯರ ಬಾಲ್ಯ, ವಿದ್ಯಾಭ್ಯಾಸ, ವೃತ್ತಿ, ವಿವಿಧ ಇಲಾಖೆಗಳಲ್ಲಿ ಸಲ್ಲಿಸಿದ ಸೇವೆ, ಕೃತಿರಚನೆ ಮಾಡಿದ ರೀತಿ, ಕೃತಿಗಳ ಮಹತ್ವ - ಇತ್ಯಾದಿಗಳನ್ನು ಕುರಿತು ಪರಿಚಯಿಸಲಾಗಿದೆ. ಇಂಡಿಯನ್ ಆಂಟಿಕ್ವರಿ, ಮಿಥಿಕ್ ಸೊಸೈಟಿ ಪತ್ರಿಕೆ - ಮುಂತಾದವುಗಳಲ್ಲಿ ಆರ್. ನರಸಿಂಹಾಚಾರ್ಯರು ಆಗಾಗ್ಗೆ ಬರೆಯುತ್ತ ಬಂದ ಟಿಪ್ಪಣಿ ಲೇಖನಗಳು ಹಲವಾರು. ಅವುಗಳಲ್ಲಿ ಕೆಲವನ್ನ

ಇಲ್ಲಿ ಪರಿಚಯಿಸಿರುವುದು ಮಹತ್ವದ ಅಂಶ. ಈ ಕೃತಿಯ ಆರಂಭದಲ್ಲಿ ಅನಂತರಂಗಾಚಾರ್ ಈ ರೀತಿ ವಿಜ್ಞಾಪನೆ ಮಾಡಿದ್ದಾರೆ: "ಶ್ರೀಮಾನ್ ರಾ. ನರಸಿಂಹಾಚಾರ್ಯರು ಭಾರತ ಮಾತೆಯ ಸುಪುತ್ರರಲ್ಲಿ ಪ್ರಖ್ಯಾತರು. ಕರ್ಣಾಟಕ ಮಾತೆಯ ಆರಾಧಕರಲ್ಲಿ ಅಗ್ರೇಸರರು. ಕನ್ನಡಕ್ಕೆ ಜನತೆಯಿಂದ ಯಾವ ಮಾನ್ಯತೆಯೂ ಇಲ್ಲದ ಕಾಲದಲ್ಲಿ ನಾಡುನುಡಿಯ ಕೈಂಕರ್ಯದಲ್ಲಿ ಬದ್ಧಕಂಕಣರಾಗಿ ಜೀವಮಾನವನ್ನೆಲ್ಲಾ ಆ ಕಾರ್ಯಕ್ಕಾಗಿ ಮುಡಿಪಾಗಿಟ್ಟು ಕನ್ನಡ ಸಾಹಿತ್ಯದ ವಿಸ್ತಾರವನ್ನು ವೈಪಲ್ಯವನ್ನು ಮೊತ್ತ ಮೊದಲನೆಯ ಸಲ ಪ್ರಕಟ ಮಾಡಿದ ಮಹಾನುಭಾವರವರು. ಅವರ ಅಖಂಡ ಜೀವನ ಸಾಹಿತ್ಯ ಸಾಧನೆಯ ಪ್ರತೀಕ. ಕನ್ನಡದಲ್ಲಿ ವಿದ್ವತ್ತೆಂದರೇನು, ವಿಮರ್ಶೆಯೆಂದರೇನು ಎಂಬುದನ್ನು ಪ್ರಪ್ರಥಮವಾಗಿ ತೋರಿಸಿಕೊಟ್ಟವರವರು. ಒಬ್ಬ ಗಣ್ಯ ಪಾಶ್ಚಾತ್ಯ ವಿದ್ವಾಂಸರು ಹೇಳುವಂತೆ 'ಸಂಶೋಧನೆಯೆಂಬುದು ಪಾಶ್ಚಾತ್ಯ ವಿದ್ವಾಂಸರ ಪ್ರತ್ಯೇಕ ಸ್ವತ್ತು' ಎಂದಿದ್ದ ತಪ್ಪು ಭಾವನೆಯನ್ನು ಅವರು ಸುಳ್ಳಾಗಿಸಿದರು. ಕನ್ನಡ ಕ್ಷೇತ್ರದ ಯಾವ ಭಾಗದಲ್ಲಿಯಾದರೂ ಕೆಲಸ ಮಾಡುವವರು ಆಚಾರ್ಯರಿಗೆ ಋಣಿಯಾಗಿಲ್ಲದಿರಲು ಸಾಧ್ಯವೇ ಇಲ್ಲ".

೧೯೭೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಅಧ್ಯಯನ ಸಂಸ್ಥೆಯ ಮೂಲಕ ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ ಅವರು ಸಂಪಾದಿಸಿ ಪ್ರಕಟಿಸಿದ ಕೃತಿ 'ಪ್ರಾಕ್ತನ', ೧೩೬ ಪುಟದ ಈ ಕೃತಿ ವಿಮರ್ಶ ವಿಚಕ್ಷಣ ರಾವ್‌ಬಹದ್ದೂರ್ ಕರ್ನಾಟಕ ಪ್ರಾಚ್ಯವಿದ್ಯಾವೈಭವ ಮಹಾಮಹೋಪಾಧ್ಯಾಯ ರಾ.ನರಸಿಂಹಾಚಾರ್ಯ ಎಂ.ಎ. ಎಂ.ಆರ್.ಎ.ಎಸ್. ಅವರ ಲೇಖನಗಳನ್ನು ಭಾಷಣಗಳನ್ನು ಒಳಗೊಂಡಿದ್ದಾಗಿದೆ. ನರಸಿಂಹಾಚಾರ್ಯರ ಜೀವನ ಮತ್ತು ಕಾರ್ಯದ ದೀರ್ಘ ವಿವರಗಳ ಜೊತೆಗೆ ಅವರು ಆಗಾಗ್ಗೆ ರಚಿಸಿದ ಹದಿನಾಲ್ಕು ಮಹತ್ವದ ಲೇಖನಗಳು ಇದರಲ್ಲಿ ಸೇರ್ಪಡೆಯಾಗಿವೆ. ಹೀಗಾಗಿ ಪರಂಪರೆ, ಚಾರಿತ್ರಿಕ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದಲೂ ಮಹತ್ವಪೂರ್ಣವಾದ ಈ ಕೃತಿ ಪ್ರಕಟಗೊಂಡದ್ದು ನರಸಿಂಹಾಚಾರ್ಯರ ೧೨೫ನೇ ಜನ್ಮದಿನೋತ್ಸವ ಆಚರಣೆಯ ಸಂದರ್ಭದಲ್ಲಿ. ಹಿರಿಯ ಸಾಹಿತಿಗಳು ಸಂಶೋಧಕರು ಆಗಿ ಹೆಸರಾಗಿರುವ ಡಾ.ಟಿ.ವಿ. ವೆಂಕಟಾಚಲಶಾಸ್ತ್ರಿ ಅವರು ತುಂಬ ಶ್ರದ್ದೆಯಿಂದ ಪ್ರಾಮಾಣಿಕತೆಯಿಂದ ನರಸಿಂಹಾಚಾರ್ಯರ ಬದುಕು ಮತ್ತು ಬರಹವನ್ನು ಒಂದೆಡೆ ಸಂಪಾದಿಸಿಕೊಟ್ಟಿದ್ದಾರೆ. ನರಸಿಂಹಾಚಾರ್ಯರ ಸಮಗ್ರ ಸಾಧನೆಯನ್ನು ಅರಿಯುವವರಿಗೆ ಈ ಕೃತಿ ತುಂಬ ನೆರವಾಗುತ್ತದೆ. ಇದರಲ್ಲಿರುವ ಒಂದೊಂದು ಬರೆಹವು ಮುಂದಿನ ಸಂಶೋಧನೆಗೆ ತಕ್ಕ ಭೂಮಿಕೆಯನ್ನ ಸಿದ್ಧಪಡಿಸುತ್ತವೆ. 'ಸಂಗೀತಶಾಸ್ತ್ರ ವಿಚಾರ' ಎಂಬ ಬರಹದಲ್ಲಿ ಸಂಗೀತದ ಶಬ್ದಾರ್ಥ, ಅದರ ಮಹತ್ವ, ಪ್ರಾಚೀನತೆ, ಅದರ ಪ್ರವರ್ತಕರು, ರಾಗೋತ್ಪತ್ತಿ, ರಾಗಾಲಾಪ - ಮುಂತಾದ ಸಂಗೀತ ಶಾಸ್ತ್ರಕ್ಕೆ ಸಂಬಂಧಿಸಿದ ಸಕಲ ಸಂಗತಿಗಳನ್ನ ನರಸಿಂಹಾಚಾರ್ಯರು ಪ್ರಸ್ತಾಪಿಸಿರುವುದನ್ನು ಗಮನಿಸಬಹುದು.

೧೯೧೮ರಲ್ಲಿ ಧಾರವಾಡದಲ್ಲಿ ಜರುಗಿದ ನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ ಮತ್ತು ಉಪಸಂಹಾರ ಭಾಷಣವು ೧೯೧೮ರ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಪ್ರಕಟವಾಯಿತು. ಆ ಅಧ್ಯಕ್ಷ ಭಾಷಣವನ್ನು ಈ ಸಂಕಲನದಲ್ಲಿ ಒದಗಿಸಲಾಗಿದೆ. ಕನ್ನಡ ನಾಡು ನುಡಿಯ ಪ್ರಾಚೀನತೆ, ಮಹಿಮೆ, ಪ್ರೋತ್ಸಾಹ

ಆಳರಸರ ಕೊಡುಗೆ - ಇತ್ಯಾದಿ ವಿಷಯಗಳನ್ನು ನರಸಿಂಹಾಚಾರ್ಯರು ಅದರಲ್ಲಿ ಪ್ರಸ್ತಾಪಿಸಿರುವುದಲ್ಲದೆ ಕನ್ನಡ ನಾಡಿನ ಈಗಿನ ಸ್ಥಿತಿಯನ್ನು ಕುರಿತು ಮಾತನಾಡಿದ್ದಾರೆ: - "ಇದುವರೆಗೂ ಪೂರ್ವ ಚರಿತ್ರವನ್ನು ತಿಳಿಸಿದುದಾಯಿತು. ಈಗಲಾದರೂ ಕನ್ನಡ ನುಡಿ, ನಾವು ಪೂರ್ವದಲ್ಲಿ ಭಾಷೋನ್ನತಿಗಾಗಿ ಉತ್ಕಟೇಚ್ಛೆಯಿಂದ ಕೃಷಿ ಮಾಡಿದ ಕನ್ನಡಿಗರ ಸಂತತಿಯವರೋ ಅಲ್ಲವೋ ಎಂದು ಸಂದೇಹ ಪಡಬಹುದಾದಷ್ಟು ಹೀನಸ್ಥಿತಿಗೆ ಬಂದಿದೆ. ಈ ಹೀನಸ್ಥಿತಿಯನ್ನು ನೋಡಿ ಯಾವ ನಿಜವಾದ ಕನ್ನಡಿಗನ ಮುಖವು ತಾನೇ ಶೋಕರಸಪೂರಿತವಾಗದು ಯಾವ ದೇಶಬಾಂಧವನಾದ ಕನ್ನಡಿಗನ ಮುಖವು ತಾನೇ ಕಂದದ್ದು? ಯಾವ ಭಾಷಾಭಿಮಾನಿಯಾದ ಕನ್ನಡಿಗನ ಕಣ್ಣು ತಾನೇ ನೀರಿನಿಂದ ತುಂಬದು? ಈ ಹೀನಸ್ಥಿತಿಯನ್ನು ನಿವಾರಣೆ ಮಾಡಲಿಕ್ಕೆ ಕಂಕಣಬದ್ಧರಾಗಿ ಸರ್ವ ಪ್ರಯತ್ನವನ್ನು ಮಾಡಬೇಕಾದುದು ನಮ್ಮ ಕರ್ತವ್ಯವಾಗಿದೆ. ಈ ಹೀನಸ್ಥಿತಿಗೆ ಹಲವು ಕಾರಣಗಳುಂಟು. ಅವುಗಳಲ್ಲಿ ಕೆಲವನ್ನು ತಿಳಿಸುತ್ತೇನೆ. ಕನ್ನಡಿಗರಿಗೆ ತಮ್ಮ ಭಾಷೆಯಲ್ಲಿರಬೇಕಾದ ಆದರಾತಿಶಯಕ್ಕೆ ಪ್ರತಿಯಾಗಿ ಅಸಡ್ಡೆ ನೆಲೆಗೊಂಡಿರುವುದು ಪ್ರಬಲಕಾರಣವೆಂದು ಹೇಳಬಹುದು. ಅನೇಕರು ಕನ್ನಡ ಭಾಷೆಯಲ್ಲಿ ಮಾತನಾಡುವುದೂ ಪತ್ರಗಳನ್ನು ಬರೆಯುವುದೂ ಅಪಮಾನಕರವೆಂದು ಭಾವಿಸಿದ್ದಾರೆ. ಇದಕ್ಕಿಂತಲೂ ಶೋಚನೀಯವಾದ ವಿಷಯವುಂಟೆ? ಈಗಿನ ಶಿಕ್ಷಣ ಪದ್ಧತಿಯೂ ಈ ಅಸಡ್ಡೆಗೆ ಸಹಕಾರಿಯಾಗಿದೆ. ಪಾಠಶಾಲೆಗಳಲ್ಲಿ ಎಲ್ಲಾ ವಿಷಯಗಳನ್ನೂ ಇಂಗ್ಲಿಷ್ ಭಾಷೆಯಲ್ಲಿಯೇ ಕಲಿಸುತ್ತಾರೆ. ಬ್ರಿಟಿಷ್ ಕರ್ನಾಟಕದ ಪ್ರಾಂತ್ಯದಲ್ಲಿ ಪ್ರಾಥಮಿಕ ಶಿಕ್ಷಣವು ಕನ್ನಡದಲ್ಲಿ ದೊರೆಯುವುದಿಲ್ಲ. ಭಾಷೆಗೂ ಸಾಹಿತ್ಯಕ್ಕೂ ಪೂರ್ವದಂತೆ ರಾಜರ ಪ್ರೋತ್ಸಾಹವಿಲ್ಲ. ನಮ್ಮಲ್ಲಿಯೂ ಇಂಗ್ಲಿಷ್ ಬಲ್ಲವರೇ ಬುದ್ಧಿವಂತರು, ದೇಶ ಭಾಷಾ ಪಂಡಿತರು ಅಪ್ರಯೋಜಕರು ಎಂಬ ನಿಷ್ಕಾರಣವಾದ ಭಾವನೆ ಹುಟ್ಟಿದೆ. ಸರಕಾರದ ಕಾಗದ ಪತ್ರಗಳೆಲ್ಲಾ ಇಂಗ್ಲಿಷ್ ಭಾಷೆಯಲ್ಲಿಯೇ ಇವೆ. ಮುಂಬಯಿ, ಮದರಾಸು, ಕೊಡಗು ಎಂಬ ಬ್ರಿಟಿಷ್ ಕರ್ನಾಟಕದ ದೇಶ ವಿಭಾಗವು ಭಾಷೆಯ ಅನವಸ್ಥೆಗೂ ಭಿನ್ನರೂಪತೆಗೂ ಕಾರಣವಾಗಿದೆ. ಮೇಲೆ ಹೇಳಿದ ಕಾರಣಗಳಲ್ಲಿ ಕೆಲವು ಪ್ರಕೃತ ಸ್ಥಿತಿಯಲ್ಲಿ ಅಪರಿಹಾರವೆಂದು ತೋರಿದರೂ ನಮ್ಮಲ್ಲಿ ನೆಲೆಗೊಂಡಿರುವ ಅಸಡ್ಡೆಯೆಂಬ ಪಿಶಾಚವನ್ನು ದೇಶಾಭಿಮಾನ ಭಾಷಾಭಿಮಾನಗಳೆಂಬ ಮಂತ್ರಗಳ ಬಲದಿಂದ ಉಚ್ಚಾಟನೆ ಮಾಡಿದರೆ ಭಾಷೋನ್ನತಿಯ ಕೆಲಸವು ಕೂಡಿದ ಮಟ್ಟಿಗೆ ಫಲಕಾರಿಯಾಗಬಹುದು".

ಕನ್ನಡ ನುಡಿಯ ಏಳಿಗೆಗೆ ಇದೇ ಸಂದರ್ಭದಲ್ಲಿ ನರಸಿಂಹಾಚಾರ್ಯರು ಕೆಲವು ಉಪಾಯಗಳನ್ನು ಸೂಚಿಸಿದ್ದಾರೆ : "ಪೂರ್ವದಂತೆ ಉದ್ದಾಮ ಕವಿಗಳು ಹುಟ್ಟಬೇಕೆಂದಾಗಲಿ, ಪೂರ್ವದಂತೆ ರಾಜರೂ ಮಂಡಲಿಕರೂ ಅಧಿಕಾರಿಗಳೂ ಪ್ರೋತ್ಸಾಹಕರಾಗಬೇಕೆಂದಾಗಲಿ ಹಾರೈಸುವುದರಿಂದ ಫಲವಿಲ್ಲ. ಪ್ರಕೃತ ಕಾಲಕ್ಕೆ ಅನುಗುಣವಾಗಿ ಕನ್ನಡಿಗರೆಲ್ಲರೂ ಅಸಡ್ಡೆಯನ್ನು ತೊಲಗಿಸಿ ಭಾಷಾಸೇವೆಯಲ್ಲಿ ನಿರತರಾಗಬೇಕು. ಪಂಡಿತರನ್ನು ಗೌರವಿಸಬೇಕು. ಕನ್ನಡ ನುಡಿಗಾಗಿ ಶ್ರಮಪಡುವವರಿಗೆ ಮರ್ಯಾದೆಯನ್ನು ಮಾಡಬೇಕು. ಸಾಹಿತ್ಯವನ್ನು ವೃದ್ಧಿಗೊಳಿಸುವುದಕ್ಕಾಗಿ ಶಾಸ್ತ್ರೀಯ ಗ್ರಂಥಗಳೇ ಮೊದಲಾದವುಗಳನ್ನು ಅನ್ಯಭಾಷೆಗಳಿಂದ ಪರಿವರ್ತಿಸಬೇಕು. ಕೋಶಗಳನ್ನು ಸಾಂಕೇತಿಕ ಶಬ್ದಗಳ ಪಟ್ಟಿಯನ್ನು ಏರ್ಪಡಿಸಬೇಕು. ಗ್ರಂಥಸ್ಥ ಭಾಷೆಗೆ ಏಕರೂಪತೆಯನ್ನು ಉಂಟು ಮಾಡಬೇಕು. ವಿದ್ಯಾವಂತನಾದ ಪ್ರತಿಯೊಬ್ಬ ಕನ್ನಡಿಗನೂ ತನಗಿಂತ ವಿದ್ಯೆಯಲ್ಲಿ ಕಡಿಮೆಯಾದ ಕನ್ನಡಿಗರ

ಉಪಯೋಗಾರ್ಥವಾಗಿ ಗ್ರಂಥನಿರ್ಮಾಣವನ್ನು ಮಾಡುವುದು ತನ್ನ ಕರ್ತವ್ಯವೆಂದು ತಿಳಿಯಬೇಕು. ಜ್ಞಾನ ವೃದ್ಧಿಕರವಾದ ಪತ್ರಿಕೆಗಳನ್ನು ಹೊರಡಿಸಬೇಕು. ಭಾಷೆಯ ಏಕಭಾವ ಪರಸ್ಪರ ಮೈತ್ರಿ ಮುದ್ರಣ ಸೌಕರ್ಯ, ಗ್ರಂಥಪ್ರಚಾರಕ್ಕೆ ಅನುಕೂಲ - ಇವುಗಳನ್ನು ಉಂಟುಮಾಡುವುದಕ್ಕಾಗಿ ಗ್ರಂಥಕರ್ತರ ಮತ್ತು ಪತ್ರಿಕಾ ಸಂಪಾದಕರ ಒಂದು ಸಂಘವನ್ನು ಏರ್ಪಡಿಸಬಹುದು. ಎಲ್ಲಾ ಕರ್ನಾಟಕ ಭಾಗಗಳ ವಿದ್ವಾಂಸರನ್ನು ಸೇರಿಸಿ ಒಂದು ಗ್ರಂಥ ಪರಿಶೀಲಕ ಮಂಡಲಿಯನ್ನು ಏರ್ಪಡಿಸಬಹುದು".

'ಕರ್ನಾಟಕ ದೇಶವೂ ಅದರ ಭಾಷೆಯೂ', 'ಕನ್ನಡಕ್ಕೆ ಪ್ರೋತ್ಸಾಪ' ಮುಂತಾದ ಲೇಖನಗಳಲ್ಲಿ ನರಸಿಂಹಾಚಾರ್ಯರು ಕನ್ನಡ ನಾಡಿನ ಪ್ರಾಚೀನತೆ, ಅದರ ಮಹತ್ವ, ಅದನ್ನು ರಕ್ಷಿಸಬೇಕಾದ್ದರ ಬಗ್ಗೆ ಚಿಂತನೆ ನಡೆಸಿರುವುದು ಕಂಡುಬರುತ್ತದೆ. ತಲಕಾಡಿನ ಪಶ್ಚಿಮ ಗಂಗರು, ಶ್ರೀಮಾನ್ ನಂದಳಿಕೆ ಲಕ್ಷ್ಮೀನಾರಾಣಯ್ಯ, ಕವಿವರ್ಯ ಶ್ರೀ ನಂದಳಿಕೆಯವರೂ ಕನ್ನಡ ಕಾಮಶಾಸ್ತ್ರವೂ, ನಿಡುಗಲ್ಲು ಅರಸುಗಳ ವಂಶಾವಳಿ, ಸಂಸ್ಕೃತ ಮಹಾಪಾಠಶಾಲೆಯ ಅಧ್ಯಕ್ಷ ಭಾಷಣ, ಗಮಕ ಕಲೆ, ಪರಿವರ್ಧಿನಿ ಷಟ್ಪದಿಯ ಲಕ್ಷಣವೇನು - ಈ ಲೇಖನಗಳೂ ಸಹ ಅವರ ವಿದ್ವತ್ತಿಗೆ ಸಾಕ್ಷಿಯಾಗಿವೆ. ಮಹಾಮಹೋಪಾಧ್ಯಾಯ ಪ್ರಶಸ್ತಿದೊರೆತ ಸಲುವಾಗಿ ದಿನಾಂಕ : ೩೧/೦೩/ ೧೯೩೪ರಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಅಭಿನಂದನಾ ಸಮಾರಂಭದಲ್ಲಿ ನೀಡಿದ ಉತ್ತರ ೧೯೩೪ ಏಪ್ರಿಲ್ ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ ಪ್ರಕಟವಾಯಿತು. ಆ ಲೇಖನ 'ಅಭಿನಂದನೆಗೆ ಉತ್ತರ' ಎಂಬ ಹೆಸರಿನಲ್ಲಿ ಇಲ್ಲಿ ಸೇರಿದೆ. ಅದರಲ್ಲಿ ನರಸಿಂಹಾಚಾರ್ಯರು ತಾವು ಮಾಡಿದ ಸಂಶೋಧನಾ ಸ್ವರೂಪದ ಕಾರ್ಯಚಟುವಟಿಕೆಗಳನ್ನು ನೆನಪಿಗೆ ತಂದುಕೊಂಡಿದ್ದಾರೆ. ಒಟ್ಟಾರೆ ಆರ್. ನರಸಿಂಹಾಚಾರ್ಯರ ಬದುಕು ಮತ್ತು ಮುಖ್ಯ ಬರಹಗಳನ್ನು ಒಳಗೊಂಡ ಬಹಳ ಉಪಯುಕ್ತ ಗ್ರಂಥ 'ಪ್ರಾಕ್ತನ', ಎಚ್.ತಿಪ್ಪೇರುದ್ರಸ್ವಾಮಿಯವರು ಈ ಕೃತಿಯ ಮಹತ್ವವನ್ನು ಅದರ ಸಾಂದರ್ಭಿಕತೆಯನ್ನು ಮುನ್ನುಡಿಯಲ್ಲಿ ವಿವರಿಸಿದ್ದಾರೆ. ಆರ್. ನರಸಿಂಹಾಚಾರ್ಯರನ್ನು ಕುರಿತ ಲೇಖನಗಳು ಪುಸ್ತಕಗಳು ಇನ್ನೂ ಕೆಲವಾರು ಬಂದಿರಬಹುದು. ನನ್ನ ಗಮನಕ್ಕೆ ಬಂದವುಗಳನ್ನು ಮಾತ್ರ ಇಲ್ಲಿ ಪರಿಶೀಲಿಸಲು ಸಾಧ್ಯವಾಗಿದೆ.

## ೭. ಕೃತಿಗಳು - ಲೇಖನಗಳು

**ಕೃತಿಗಳು ಕನ್ನಡದಲ್ಲಿ :**

೧) ನೀತಿವಾಕ್ಯ ಮಂಜರಿ (೧೮೮೭)

೨) ನೀತಿಮಂಜರಿ ೧-೨ (೧೮೯೬)

೩) ನಗೆಗಡಲು (೧೮೯೮)

೪) ಆಕೃತಿ ಮತ್ತು ಬಣ್ಣ. ಇವನ್ನ ಕುರಿತು ಸರಳ ಪಾಠಗಳು (೧೯೦೦)

೫) ಕಾವ್ಯಾವಲೋಕನ (೧೯೦೩)

೬) ಕರ್ಣಾಟಕ ಭಾಷಾಭೂಷಣ (೧೯೦೩)

೭) ಕರ್ಣಾಟಕ ಕವಿಚರಿತೆ ೧, ೨, ೩ (೧೯೦೭, ೧೯೧೯, ೧೯೨೯)

೮) ಕರ್ಣಾಟಕ ಶಬ್ದಾನುಶಾಸನ (೧೯೨೩)

೯) ಶಾಸನ ಪದ್ಯಮಂಜರಿ (೧೯೨೩)

**ಸಂಸ್ಕೃತ ಮತ್ತು ತಮಿಳಿನಲ್ಲಿ :**

೧) ಶಬ್ದರೂಪಾವಳಿ (ಸಂ)

೨) ಚಂಪೂರಾಮಾಯಣ ಭಾಗಗಳು (ಸಂ)

೩) ಪುರುಷಾರ್ಥ ಕಲ್ಪದ್ರುವಂ (ಸಂ)

೪) ನೂ ರೆಟ್ಟುತ್ತಿರುಪತಿಯಕವಲ್ (ತಮಿಳು ಸಂಪಾದಿತ)

೫) ಮನವಾಳ ಮಾಮುನಿ ನೂರಂದಾದಿ (ಸಂ)

**ಇಂಗ್ಲಿಷ್‌ನಲ್ಲಿ :**

1) The Kesava Temple at Somanathapur (1917).

2) The Kesava Temple at Belur (1919)

3) The Lakshmidevi Temple at Dodda Gaddavalli (1919)

4) Epigraphia Carnatica II (1923)

5) History of Kannada Language (1934)

6) History of Kannada Literature (1940)

ಇಂಡಿಯನ್ ಆಂಟಿಕ್ವರಿ, ಮಿಥಿಕ್ ಸೊಸೈಟಿಯ ಜರ್ನಲ್, ರಾಯಲ್ ಏಷಿಯಾಟಿಕ್ ಸೊಸೈಟಿಯ ಜರ್ನಲ್, ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಮೈಸೂರು ವಿಶ್ವವಿದ್ಯಾನಿಲಯದ ಪ್ರಬುದ್ಧ

ಕರ್ನಾಟಕ - ಮುಂತಾದ ಪತ್ರಿಕೆಗಳಲ್ಲಿ ಸಂಚಿಕೆಗಳಲ್ಲಿ ಕನ್ನಡನಾಡು, ನುಡಿ, ಸಂಸ್ಕೃತಿಗೆ ಸಂಬಂಧಿಸಿದಂತೆ ಹಲವಾರು ಪಾಂಡಿತ್ಯಪೂರ್ಣವಾದ ಸಂಶೋಧನಾತ್ಮಕ ಲೇಖನಗಳನ್ನು ನರಸಿಂಹಾಚಾರ್ಯರು ಬರೆದು ಪ್ರಕಟಿಸಿದ್ದಾರೆ. ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ ಅವರು ತಮ್ಮ 'ಪ್ರಾಕ್ತನ' ಕೃತಿಯಲ್ಲಿ ಅದರ ವಿವರಗಳನ್ನು ನೀಡಿದ್ದಾರೆ:

## ಲೇಖನಗಳು :

### 1. **Indian Antiquary** ಯ ಲೇಖನಗಳು

(1) Chaitra-Pavitra 38, 1909, 52-53 (2) The Chalukya Genealogy according to the Kannada poet Ranna Vol 40, 1911, 41-45 (3) Correspondence (A.F. Rudolf Hoernle's Note on Reading of Subandhu) 40, 1911, 264 (4) Bhamaha and Dandi 41, 1912, 90-92 (5) Shankaracharya and Balavarma 42, 1913, 53-54 (6) A few Remarks on Professor Pathak's paper on Dandin the Nyasakara and Bhamaha Vol. 42, 1913, 204-05 (7) Kayatha Vol. 44, 1915, 111 (8) Shandy 44, 1915, 132 (9) Madhavacharya and his younger brothers Vol. 45, 1916, 17-24.

### 2. **The Quarterly Journal of the Mythic Society** ಯ ಲೇಖನಗಳು :

(1) Andhra and Roman Coins at Chitaldrug 1-1, 1909, 38-39 (2) Talkad 3-3, 1912,99-109 (3) Magadi and its Neighbourhood 6-4, 1914-15, 241-45 (4) Bababudangiri 7-1, 2, 1916, 102-05 (5) Madhavacharya and his younger brothers (A Reply) 7-4, 1917, 318 20 (6) Sringeri 8-1, 1918, 18-33 (7) Life of Kalidasa 8-4, 1918, 273-77 (8) The Karnataka Country and Language 10-3, 1920, 248-58 (9) The Mysore Royal Insignia 10-3, 1920, 273 (10) Sravana belgola 13-1, 1922, 430-47 (11) The story of Jivandhara in Kananda Literature 13-4, 1923, 692 (12) The Western Gangas of Talkad 14-1, 1923, 10-22 (13) A New Rashtrakuta Copper plate Grant of A.D. 810, 142, 1924, 82-88 (14) Expansion of Indian Culture outside India (Chairman's address), 25-1,2,3, July, Oct 1934-Jan 1935, 27-36.

### **Journal of the Royal Asiatic Society** ಯ ಲೇಖನಗಳು :

(1) The Ganga Prince Butuga II, 1909, 443-45 (2) Dattaka Sutra. 1911, 183-86 (3) The Keladi Rajas of Ikkeri and Bendur, 1911, 188-93 (4) Some more verses relating to Gifts of Land 1913, 388 (5) An old Sanskrit Version of the Brhatkatha 1913, 389-09.

**4. Proceedings of All India Oriental Conference** ನ ಲೇಖನಗಳು :

(1) The Western, Gangas of Talkad 2, 1922, 297-308 (2) Presidential Address, Kannada and other Dravidian Language Section 8, 1935, 801-13.

**5. Commemorative Volume** ನ ಲೇಖನ ಇತ್ಯಾದಿ :

(1) Grammatical literature in Kannada as compared with that in the sister languages of Southern India, Dr.S.Krishnaswamy Aiyangar Comm., Vol., Madras, 1936, 299-303 (2) The Toast of the College by Chairman, Report, The Central College Day, Bangalore, 1925, 8-17

## ೮. ಜೀವನದ ಪ್ರಮುಖ ಘಟನೆಗಳು

೧೮೬೦ ಏಪ್ರಿಲ್ ೯ರಂದು ಜನನ

೧೮೭೩ ವಿವಾಹ

೧೮೭೮ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದು ತೇರ್ಗಡೆ

೧೮೭೯ ಎಫ್. ಎ. ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಜಯ

೧೮೮೨ ಬಹುಮಾನ ಮತ್ತು ಪಾರಿತೋಷಕಗಳೊಡನೆ ಪದವೀಧರರಾದರು

೧೮೮೨-೯೪ ವಿವಿಧ ಶಾಲೆಗಳಲ್ಲಿ ಉಪಾಧ್ಯಾಯ ವೃತ್ತಿ

೧೮೯೩ ಕನ್ನಡ ಎಂ. ಎ. ಪದವೀಧರರಾದುದು

೧೮೯೪ ವಿದ್ಯಾ ಇಲಾಖೆಯಲ್ಲಿ ಭಾಷಾಂತರಕಾರರಾಗಿ ನೇಮಕ

೧೮೯೯ ಬಿ. ಎಲ್. ರೈಸ್‌ರ ಸಹಾಯಾಧಿಕಾರಿಯಾಗಿ, ಉಪನಿರ್ದೇಶಕರಾಗಿ ಅಂಗೀಕಾರ

೧೯೦೩ 'ಕಾವ್ಯಾವಲೋಕನ' ಮತ್ತು 'ಭಾಷಾಭೂಷಣ'ಗಳ ಪ್ರಕಾಶನ

೧೯೦೬ ಪ್ರಾಚ್ಯಸಂಶೋಧನ (ಶಾಸನದ ಇಲಾಖೆ) ಇಲಾಖೆಯ ನಿರ್ದೇಶಕರಾಗಿ ಅಧಿಕಾರ ಸ್ವೀಕಾರ

೧೯೦೭ 'ರಾಯಲ್ ಏಷ್ಯಾಟಿಕ್ ಸೊಸೈಟಿ'ಯ ಸದಸ್ಯತ್ವ

೧೯೦೭ 'ಕರ್ಣಾಟಕ ಕವಿಚರಿತೆ'ಯ ಪ್ರಥಮ ಸಂಪುಟದ ಪ್ರಕಟಣ

೧೯೧೩ ಮಹಾರಾಜ ಅವರಿಂದ 'ಪ್ರಾಕ್ತನ ವಿಮರ್ಶವಿಚಕ್ಷಣ' ಪ್ರಶಸ್ತಿಯ ಲಾಭ

೧೯೧೬ ಬ್ರಿಟಿಷ್ ಸರ್ಕಾರದಿಂದ 'ರಾವ್ ಬಹದ್ದೂರ್' ಪ್ರಶಸ್ತಿ

೧೯೧೮ ಧಾರವಾಡದಲ್ಲಿ ನಡೆದ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಸಮ್ಮೇಳನ ಅಧ್ಯಕ್ಷ ಪೀಠ

೧೯೧೯ ಪ್ರಥಮ ಪ್ರಾಚ್ಯವಿದ್ಯಾ ಸಮ್ಮೇಳನದ (Oriental Conference) ಮೈಸೂರಿನ ಪ್ರತಿನಿಧಿಯಾಗಿ ಆಯ್ಕೆ

೧೯೧೯ “ಕರ್ಣಾಟಕ ಕವಿಚರಿತ್ರೆಯ ದ್ವಿತೀಯ ಸಂಪುಟದ ಬಿಡುಗಡೆ

೧೯೨೨ ಪ್ರಾಚ್ಯವಿದ್ಯಾ ಸಮ್ಮೇಳನದ ಇತಿಹಾಸ ಮತ್ತು ಪ್ರಾಚ್ಯವಿದ್ಯಾ ಭಾಗದ ಅಧ್ಯಕ್ಷರಾಗಿ ಚುನಾವಣೆ

೧೯೨೨ ಸರ್ಕಾರಿ ಕೆಲಸದಿಂದ ವಿಶ್ರಾಂತಿ

೧೯೨೪ 'ಪ್ರಾಚ್ಯವಿದ್ಯಾ ವೈಭವ'ವೆಂಬ ಬಿರುದಿನ ಸನ್ಮಾನ

೧೯೨೫ ಸೆಂಟ್ರಲ್ ಕಾಲೇಜಿನ ವಾರ್ಷಿಕೋತ್ಸವದ ಅಧ್ಯಕ್ಷತೆ

೧೯೨೫ ಕಲ್ಕತ್ತದ ಅಖಿಲ ಭಾರತ ಸಾಹಿತ್ಯ ಸಂಘ ನೀಡಿದ ಕರ್ನಾಟಕ ಪ್ರಾಚ್ಯವಿದ್ಯಾ ವೈಭವ ಬಿರುದು

೧೯೨೯ 'ಕರ್ಣಾಟಕ ಕವಿಚರಿತ್ರೆ'ಯ ತೃತೀಯ ಸಂಪುಟದ ಪ್ರಕಟಣೆ

೧೯೩೨ ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆಯ ಪಾರಿತೋಷಕ ವಿನಿಯೋಗ ಸಮಾರಂಭದ ಅಧ್ಯಕ್ಷತೆ

೧೯೩೪ ಭಾರತ ಸರ್ಕಾರದಿಂದ 'ಮಹಾಮಹೋಪಾಧ್ಯಾಯ' ಎಂಬ ಮಹತ್ಪ್ರಶಸ್ತಿಯ ಲಾಭ

೧೯೩೪ ಮೈಸೂರು ವಿದ್ಯಾಶಾಲಾ ಪಂಡಿತ ಮಂಡಲಿಯ ಪ್ರಥಮ ಸಮ್ಮೇಳನದ ಅಧ್ಯಕ್ಷತೆ

೧೯೩೫ ಧರ್ಮಸ್ಥಳದಲ್ಲಿ ನಡೆದ 'ಸಕಲಧರ್ಮಸಮ್ಮೇಳನ'ದ ಅಗ್ರಾಸನ

೧೯೩೬ ಡಿಸೆಂಬರ್ ೬ರಂದು (೭೭ನೇ ವಯಸ್ಸಿನಲ್ಲಿ) ಆಚಾರ್ಯರ ನಿಧನ

## ೯. ಆಕರಗಳು

೧) ಎನ್. ಅನಂತರಂಗಾಚಾರ್ :

ರಾ. ನರಸಿಂಹಾಚಾರ್ಯ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮ ೧೯೭೯.

೨) ಎನ್. ಅನಂತರಂಗಾಚಾರ್ :

ಆರ್. ನರಸಿಂಹಾಚಾರ್ಯರು, ಐ.ಬಿ.ಎಚ್. ಪ್ರಕಾಶನ ಗಾಂಧಿನಗರ, ಬೆಂಗಳೂರು-೯, ೧೯೭೫

೩) ಡಾ.ಟಿ.ವಿ.ವೆಂಕಟಾಚಲಶಾಸ್ತ್ರೀ(ಸಂ) :

ಪ್ರಾಕ್ತನ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೮೬

೪) ಡಾ. ಶ್ರೀನಿವಾಸ ಹಾವನೂರ:

ಹೊಸಗನ್ನಡ ಅರುಣೋದಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು - ೧೯೭೪

೫) ಎನ್ ಎಸ್ ತಾರಾನಾಥ(ಸಂ):

ಶತಮಾನದ ಸಂಶೋಧನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ,

ಜೆ. ಸಿ. ರಸ್ತೆ, ಬೆಂಗಳೂರು-೨, ೨೦೦೧

೬) ಜಿ. ಟಿ. ವೀರಪ್ಪ (ಪ್ರ. ಸಂ):

ಪುಣ್ಯಕೋಟಿ, ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮಂಡ್ಯ ೧೯೯೫.

೭) ಡಾ.ಟಿ.ವಿ.ವೆಂಕಟಾಚಲಶಾಸ್ತ್ರೀ ಸಂ

ಎ. ವೆಂಕಟಸುಬ್ಬಯ್ಯನವರ ಸಂಶೋಧನ ಲೇಖನಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೨೦೦೧.

******